

ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

Karnataka Scout & Guide

Monthly Magazine

Vol -65	Issue-08	August 2024	Pages: 40	Annual Subscription: ₹ 100/-
ಸಂಪುಟ: 65	ಸಂಚಿಕೆ: 08	ಆಗಸ್ಟ್ 2024	ಪುಟಗಳು: 40	ವಾರ್ಷಿಕ ಚಂದ ರೂ. 100/-



15 ಆಗಸ್ಟ್ 2024 ರಂದು ಬೆಂಗಳೂರಿನ ಮಾಣಿಕ್ ಷಾ ಪೆರೇಡ್ ಮೈದಾನದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನಡೆದ ರಾಜ್ಯ ಮಟ್ಟದ ಕವಾಯತು ಪ್ರದರ್ಶನದಲ್ಲಿ ರಾಜ್ಯ ಸಂಸ್ಥೆಯನ್ನು ಪ್ರತಿನಿಧಿಸಿದ ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಕಿತ್ತೂರುರಾಣಿ ಚನ್ನಮ್ಮ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ರಾಜ್ಯ ಮಟ್ಟದ ಪಥಸಂಚಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದಿರುವ ಪ್ರಯುಕ್ತ ತಂಡದ ನಾಯಕಿ ಕುಮಾರಿ ಸಂಸ್ಕೃತಿ ಬಿರಾದರ್ ಅವರಿಗೆ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಅವರು ಪಾರಿತೋಷಕವನ್ನು ನೀಡಿ ಅಭಿನಂದಿಸಿದರು.



3 ಆಗಸ್ಟ್ 2024 ರಂದು ಬೀದರ್‌ನ ಡಾ॥ ಚನ್ನಬಸವ ಪಟ್ಟದೇವರ ಜಿಲ್ಲಾ ರಂಗಮಂದಿರದಲ್ಲಿ ಡಾ॥ ಎಸ್.ಎಸ್. ಸಿದ್ಧಾರೆಡ್ಡಿ ಸ್ಕೌಟ್ ಭವನದ ಅಡಿಗಲ್ಲು ಸಮಾರಂಭವನ್ನು ಅಧ್ಯಕ್ಷರು, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ, ಕರ್ನಾಟಕ ಸರ್ಕಾರ ಹಾಗೂ ಮಾನ್ಯ ಶಾಸಕರಾದ ಡಾ॥ ಅಜಯ್‌ಸಿಂಗ್‌ರವರು ಉದ್ಘಾಟಿಸಿದರು. ನಾಡೋಜ ಡಾ॥ ಬಸವಲಿಂಗ ಪಟ್ಟದೇವರು, ಮಾನ್ಯ ಅರಣ್ಯ ಮತ್ತು ಪರಿಸರ ಇಲಾಖೆಗಳ ಸಚಿವರಾದ ಶ್ರೀ ಈಶ್ವರ ಖಂಡ್ರೆ, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಗೈಡ್ ಆಯುಕ್ತರಾದ ಶ್ರೀಮತಿ ಗೀತಾನಟರಾಜ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿ, ಶ್ರೀಮತಿ ಲೀಲಾವತಿ ಚಕೋತೆ, ಉಪಾಧ್ಯಕ್ಷರು, ಜಿಲ್ಲಾ ಸ್ಕೌಟ್ ಆಯುಕ್ತರಾದ ಡಾ॥ ಹೆಚ್. ಭರಶೆಟ್ಟಿ ಹಾಗೂ ಇತರ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಆಗಸ್ಟ್ 15ರಂದು 78ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶಾಲಾ ಶಿಕ್ಷಣ ಇಲಾಖೆ ಕಛೇರಿ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಶ್ರೀಮತಿ ಬಿ.ಬಿ.ಕಾವೇರಿ, ಭಾ.ಆ.ಸೇ., ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಅವರು ಧ್ವಜಾರೋಹಣವನ್ನು ನೆರವೇರಿಸಿ, ಸ್ವಾತಂತ್ರ್ಯ ದಿನಾಚರಣೆಯ ಶುಭಕೋರಿದರು. ಈ ಸಂದರ್ಭದಲ್ಲಿ ಶ್ರೀ ಕೃಷ್ಣಾಜಿ ಎಸ್. ಕರಿಚಣ್ಣವರ, ನಿರ್ದೇಶಕರು (ಪ್ರೌಢ ಶಿಕ್ಷಣ), ಶ್ರೀ ಬಿ.ಎಸ್.ರಘುವೀರ್, ನಿರ್ದೇಶಕರು (ಮೈನಾರಿಟಿ), ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ರಾಜ್ಯ ಸಂಸ್ಥೆಯ ಸಿಬ್ಬಂದಿಗಳು ಹಾಗೂ ಶ್ರೀ ಭಕ್ತೇಶ್, ರೋವರ್ ಸ್ಕೌಟ್ ಲೀಡರ್ ಮತ್ತು ಮಾಗಡಿ ರಸ್ತೆಯ ಬಿಬಿಎಂಪಿ ಪದವಿಪೂರ್ವ ಕಾಲೇಜಿನ ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.



ಆಗಸ್ಟ್ 15 ರಂದು ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದ ಆಚಾರ್ಯ ಶಾಲೆಯ ಸ್ಕೌಟ್ ತಂಡಕ್ಕೆ ಮಾನ್ಯ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಡಾ. ಜಿ. ಪರಮೇಶ್ವರ್‌ಅವರು ಬಹುಮಾನ ನೀಡಿ ಗೌರವಿಸಿದರು.



ಆಗಸ್ಟ್ 15 ರಂದು ಶಿವಮೊಗ್ಗ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ ಸ್ಕೌಟ್ ತಂಡಕ್ಕೆ ಮಾನ್ಯ ಶಾಲಾ ಶಿಕ್ಷಣ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಮಧುಬಂಗಾರಪ್ಪರವರು ಪಾರಿತೋಷಕವನ್ನು ನೀಡಿ ಗೌರವಿಸಿದರು. ಮಾನ್ಯ ಶಾಸಕರಾದ ಶ್ರೀ ಎಸ್.ಎನ್. ಚೆನ್ನಬಸಪ್ಪ, ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಹಾಗು ಜಿಲ್ಲಾ ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ.



ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಆಗಸ್ಟ್ 15 ರಂದು ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ
ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ದ್ವಿತೀಯ ಸ್ಥಾನ ಪಡೆದ
ಶ್ರೀ ಸಿದ್ಧೇಶ್ವರ ಶಾಲೆಯ ಸ್ಕೌಟ್ ತಂಡಕ್ಕೆ ಮಾನ್ಯ ಗಣಿ ಮತ್ತು ಭೂಮಿಜ್ಞಾನ ಇಲಾಖೆಯ ಸಚಿವರು ಹಾಗೂ ಜಿಲ್ಲಾ
ಉಸ್ತುವಾರಿ ಸಚಿವರಾದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನರವರು ಬಹುಮಾನ ನೀಡಿ ಗೌರವಿಸಿದರು.
ದಾವಣಗೆರೆ ಮಾನ್ಯ ಲೋಕಸಭಾ ಸದಸ್ಯರಾದ ಡಾ॥ ಪ್ರಭಾ ಮಲ್ಲಿಕಾರ್ಜುನ್
ಜಿಲ್ಲಾಧಿಕಾರಿಗಳಾದ ಶ್ರೀ ಜಿ.ಎಂ. ಗಂಗಾಧರಸ್ವಾಮಿ ಮತ್ತು ಇತರರು ಚಿತ್ರದಲ್ಲಿದ್ದಾರೆ.



ಚಿಕ್ಕಮಗಳೂರಿನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಪಥಸಂಚಲನದಲ್ಲಿ
ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದ ನಗರದ ಜ್ಞಾನ ರಶ್ಮಿ ಶಾಲೆಯ ಸ್ಕೌಟ್ ತಂಡಕ್ಕೆ
ಮಾನ್ಯ ಇಂಧನ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಕೆ.ಜೆ. ಜಾರ್ಜ್‌ರವರು ಬಹುಮಾನವನ್ನು
ನೀಡಿ ಗೌರವಿಸಿದರು. ಮಾನ್ಯ ಶಾಸಕರಾದ ಶ್ರೀ ಹೆಚ್.ಡಿ. ತಮ್ಮಯ್ಯ, ಉಪಸಭಾಪತಿಗಳಾದ ಶ್ರೀ ಎಂ.ಪಿ. ಪ್ರಾಣೇಶ್,
ಮಾನ್ಯ ವಿಧಾನ ಪರಿಷತ್ ಸದಸ್ಯರುಗಾಳದ ಶ್ರೀ ಸಿ.ಟಿ. ರವಿ, ಶ್ರೀ ಎಸ್.ಎಲ್. ಬೋಜೆಗೌಡ ಮತ್ತು ಇತರರು ಚಿತ್ರದಲ್ಲಿದ್ದಾರೆ.

ಪೋಷಕರು

ಪಿ.ಜಿ.ಆರ್. ಸಿಂಧ್ಯ

ಗೌರವ ಅಧ್ಯಕ್ಷರು

ಡಾ. ಗೊ.ರು. ಚನ್ನಬಸಪ್ಪ

ಅಧ್ಯಕ್ಷರು

ಕೊಂಡಜ್ಜಿ ಬ. ಷಣ್ಮುಖಪ್ಪ

ಸಂಪಾದಕರು

ಕೆ. ಗಂಗಪ್ಪಗೌಡ

ಸಹಸಂಪಾದಕರು

ಎನ್. ಶ್ರೀನಿವಾಸನ್

ಸಂಚಾಲಕರು

ಬಿ.ಎಸ್. ರವೀಂದ್ರ

ಸದಸ್ಯರು

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.



ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

KARNATAKA Scout & Guide

MONTHLY NEWS MAGAZINE

Vol: 65 | Issue : 08 | August 2024

ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ	...04
ಸಂಪಾದಕೀಯ	...05
ಕಲಬುರಗಿ ವಿಭಾಗಮಟ್ಟದ ಪ್ರೇರಣಾ ಕಾರ್ಯಕ್ರಮ	...08
ಸೆಪ್ಟೆಂಬರ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು	...09
ಶ್ರೀ ವಿ.ಪಿ. ದೀನದಯಾಳು ನಾಯ್ಡುರವರ 107ನೇ ಹುಟ್ಟುಹಬ್ಬ	...10
ಅಭಿನಂದನೆಗಳು	...11
Kargil Vijay Diwas	...12
ರಾಜ್ಯ ಕೇಂದ್ರ ಕಛೇರಿಯಲ್ಲಿ 78ನೇ ಸ್ವಾತಂತ್ರ್ಯೋತ್ಸವ ಆಚರಣೆ	...12
ಜಿಲ್ಲಾ ವಾರ್ತೆಗಳು	...14
ಬೆಂಕಿ: ಉದಾಸೀನ ಕೂಡದು	...34
ವಚನ ಧರ್ಮಸಾರ	...35
ಶ್ರದ್ಧಾಂಜಲಿ	...35

ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್–ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು



ರಾಜ್ಯ ಮುಖ್ಯ ಆಯುಕ್ತರ ನುಡಿ

ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

ವಿಘ್ನ ನಿವಾರಕನಾದ ವಿನಾಯಕನು ಎಲ್ಲರಿಗೂ ಸುಖ, ಸಮೃದ್ಧಿಯನ್ನು ನೀಡಲಿ ಹಾಗೂ ಈ ವರ್ಷದಲ್ಲಿ ನಮ್ಮ ಚಳುವಳಿಯ ಎಲ್ಲ ಚಟುವಟಿಕೆಗಳು ನಿರ್ವಿಘ್ನವಾಗಿ ನಡೆಯುವಂತೆ ಅನುಗ್ರಹ ಮಾಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಈ ಗಣೇಶ ಹಬ್ಬವನ್ನು ನಾವೆಲ್ಲ ಪರಿಸರಸ್ನೇಹಿಯಾಗಿ ಆಚರಿಸುವ ಮೂಲಕ, ಪರಿಸರ ಸಂರಕ್ಷಣೆಯ ನಮ್ಮ ಜವಾಬ್ದಾರಿಗೆ ಒತ್ತು ನೀಡೋಣ. ರಾಜ್ಯದೆಲ್ಲೆಡೆ ನಮ್ಮ ಮಕ್ಕಳು ವಿಭಿನ್ನ ರೀತಿಯಲ್ಲಿ ಪರಿಸರ ಗಣೇಶ ತಯಾರಿಕೆಯಲ್ಲಿ ತೊಡಗಿರುವುದು ಸಂತೋಷ ತಂದಿದೆ. ಪರಿಸರ ಇಲಾಖೆಯೂ ಸಹ ನಮ್ಮ ಮಕ್ಕಳ ಪರಿಸರ ಕಾಳಜಿಯನ್ನು ಗಮನಿಸಿ, ನಮ್ಮ ಸಂಸ್ಥೆಗೆ ಪ್ರೋತ್ಸಾಹ ನೀಡುತ್ತಿದೆ.

ಆಗಸ್ಟ್ ತಿಂಗಳಿನಲ್ಲಿ ರಾಜ್ಯಾದ್ಯಂತ ಸ್ಕೌಟ್ಸ್–ಗೈಡ್ಸ್ ತರಬೇತಿಗಳು, ಕಾರ್ಯಕ್ರಮಗಳು ಯಶಸ್ವಿಯಾಗಿವೆ. ನಮ್ಮ ಎಲ್ಲ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ಮತ್ತು ಸೌಹಾರ್ದತೆ, ಶಾಂತಿ, ದೇಶದ ಐಕ್ಯತೆಗಳ ಮಹತ್ವವನ್ನು ಸಾರುವ 'ರಾಷ್ಟ್ರೀಯ ಸದ್ಭಾವನಾ ದಿನ'ವನ್ನು ಅರ್ಥಪೂರ್ಣವಾಗಿ ಆಚರಿಸಿದ್ದಾರೆ. ಹಲವು ಜಿಲ್ಲೆಗಳಲ್ಲಿ ಜಿಲ್ಲಾಡಳಿತಗಳು ಆಯೋಜಿಸಿದ್ದ ಪಥಸಂಚಲನಗಳಲ್ಲಿ ನಮ್ಮ ಮಕ್ಕಳು ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ. ವಿಶೇಷವಾಗಿ ಬೆಂಗಳೂರಿನ ಮಾಣಿಕ್‌ಚಂದ್ ಪೆರೇಡ್ ಗ್ರೌಂಡ್ಸ್‌ನಲ್ಲಿ ನಡೆದ ಸ್ವಾತಂತ್ರ್ಯೋತ್ಸವದ ಪಥಸಂಚಲನದಲ್ಲಿ ರಾಜ್ಯ ಸಂಸ್ಥೆಯನ್ನು ಪ್ರತಿನಿಧಿಸಿದ್ದ, ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಕಿತ್ತೂರುರಾಣಿ ಚನ್ನಮ್ಮ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆಯುವ ಮೂಲಕ ಅವರ ಶಾಲೆಗೂ, ನಮ್ಮ ಸಂಸ್ಥೆಗೂ ಕೀರ್ತಿ ತಂದಿದ್ದಾರೆ. ಆ ಎಲ್ಲ ಮಕ್ಕಳಿಗೆ ಅಭಿನಂದನೆಗಳು. ಶಾಲೆಯ ಆಡಳಿತ ಮಂಡಳಿಗೆ, ಶಿಕ್ಷಕರಿಗೆ, ಮಕ್ಕಳ ಪೋಷಕರಿಗೆ ಹಾಗೂ ಬೆಳಗಾವಿ ಜಿಲ್ಲಾ ಸಂಸ್ಥೆಯ ಎಲ್ಲ ಪದಾಧಿಕಾರಿಗಳಿಗೆ ಧನ್ಯವಾದಗಳು.

"ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂಬ ನಾಣ್ಣುಡಿಯನ್ನು ಬಾಲ್ಯಾವಸ್ಥೆಯಿಂದಲೂ ಕೇಳುತ್ತಾ ಬೆಳೆದಿರುವ ನಾವೆಲ್ಲರೂ ಶಿಕ್ಷಕ ವೃತ್ತಿಯನ್ನು ಪವಿತ್ರ ವೃತ್ತಿಯೆಂದೇ ಪರಿಗಣಿಸಿದ್ದೇವೆ ಮತ್ತು ಗೌರವಿಸುತ್ತೇವೆ. ಶಿಕ್ಷಕ ಸಮುದಾಯವನ್ನು ಹೊರತುಪಡಿಸಿ, ಸ್ಕೌಟ್ಸ್–ಗೈಡ್ಸ್ ಚಳುವಳಿಯ ಬೆಳವಣಿಗೆಯನ್ನು ಊಹಿಸಲೂ ಅಸಾಧ್ಯ. ಸೆಪ್ಟೆಂಬರ್ 05 ರಂದು 'ಶಿಕ್ಷಕರ ದಿನಾಚರಣೆ'ಯ ಹಿನ್ನೆಲೆಯಲ್ಲಿ, ಶಿಕ್ಷಕರನ್ನು ಗೌರವಿಸುವ ಅಭೂತಪೂರ್ವ ಅವಕಾಶವನ್ನು ನಮ್ಮ ಸಂಸ್ಥೆ ಸದುಪಯೋಗ ಪಡಿಸಿಕೊಳ್ಳಬೇಕೆಂಬುದು ನನ್ನ ಅಭಿಲಾಷೆ. ಪ್ರಸಕ್ತ ಸಾಲಿನ ರಾಷ್ಟ್ರ ಮತ್ತು ರಾಜ್ಯದ ಉತ್ತಮ ಶಿಕ್ಷಕ ಪ್ರಶಸ್ತಿಗಳಿಗೆ ಭಾಜನರಾಗುವ ಎಲ್ಲ ಶಿಕ್ಷಕರುಗಳಿಗೆ ನಮ್ಮ ಸಂಸ್ಥೆಯ ವತಿಯಿಂದ ಹೃತ್ಪೂರ್ವಕವಾದ ಅಭಿನಂದನೆಗಳನ್ನು ತಿಳಿಸುತ್ತೇನೆ.

ಆಗಸ್ಟ್ ತಿಂಗಳಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ಕೌಟ್ಸ್–ಗೈಡ್ಸ್ ಮೂಲತರಬೇತಿ ಶಿಬಿರಗಳು ನಡೆದಿದ್ದು, ಕೆಲವು ಶಿಬಿರಗಳಿಗೆ ನಾನು ಭೇಟಿ ನೀಡಿದ್ದೇನೆ. ಈ ಶಿಬಿರಗಳಿಗೆ ಶಿಕ್ಷಕರುಗಳ ನಿಯೋಜನೆಯಲ್ಲಿ ಪ್ರಾಥಮಿಕ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಗಳು ನೀಡುತ್ತಿರುವ ಸಹಕಾರ ಹಾಗೂ ಶಿಕ್ಷಕರುಗಳ ಆಸಕ್ತಿ, ಉತ್ಸುಕತೆಗಳು ನಮ್ಮ ಚಳುವಳಿಗೆ ಮತ್ತಷ್ಟು ಚೈತನ್ಯವನ್ನು ಮೂಡಿಸಿದೆ. ಇದಕ್ಕಾಗಿ ಸರ್ಕಾರಕ್ಕೆ ಮತ್ತು ಶಿಕ್ಷಣ ಇಲಾಖೆಗೆ ನಾನು ಆಭಾರಿಯಾಗಿದ್ದೇನೆ. ಮೂಲತರಬೇತಿ ಪಡೆದ ಶಿಕ್ಷಕರು ಘಟಕಗಳನ್ನು ಸ್ಥಾಪಿಸುವ ಮೂಲಕ ಈ ಚಳುವಳಿಗೆ ಶಕ್ತಿ ತುಂಬುತ್ತಾರೆಂಬ ಭರವಸೆ ನನಗಿದೆ.

ಬಹುತೇಕ ಜಿಲ್ಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಪುರಸ್ಕಾರದ ಪೂರ್ವಸಿದ್ಧತಾ ಪರೀಕ್ಷೆಗಳು ನಡೆಯುತ್ತಿವೆ. ಇದಕ್ಕೆ ಸಂಬಂಧಪಟ್ಟಂತೆ, ಜಾಲತಾಣ ಮತ್ತು ತಂತ್ರಜ್ಞಾನದ ಅಳವಡಿಕೆಗೆ ನಮಗೆ ಸಂಪೂರ್ಣ ಸಹಕಾರ ನೀಡುತ್ತಿರುವ ಜೈನ್ ವಿಶ್ವವಿದ್ಯಾಲಯಕ್ಕೆ ವಿಶೇಷವಾಗಿ ರಾಷ್ಟ್ರಪತಿ ಸ್ಕೌಟ್ ಆಗಿರುವ ಅಲ್ಲಿನ ಜಂಟಿ ರಿಜಿಸ್ಟ್ರಾರ್ ಶ್ರೀ ಎಂ.ಎಸ್. ಸಂತೋಷ್ ರವರಿಗೆ ನಾನು ಚಿರಋಣಿ. ಇದರ ಜೊತೆಗೆ ನಮ್ಮ ಸಂಸ್ಥೆಗೆ ಉತ್ತಮ ಸ್ಥಿತಿಯಲ್ಲಿರುವ 40 ಕಂಪ್ಯೂಟರ್‌ಗಳನ್ನು ದೇಣಿಗೆಯಾಗಿ ನೀಡುವ ಮೂಲಕ ಮಾಡಿರುವ ಸಹಾಯವನ್ನು ನಾನು ಸ್ಮರಿಸುತ್ತೇನೆ. ಇಂತಹ ಸಹೃದಯಿಗಳು ನಮ್ಮ ನಡುವೆ ಇದ್ದಾರೆ. ವಿಶಾಲ ಮನೋಭಾವವುಳ್ಳ ಸಂಸ್ಥೆಗಳು ಎಲ್ಲಾ ಜಿಲ್ಲೆಗಳಲ್ಲೂ ಇವೆ. ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆ, ಬೀದರ್‌ನ ಶಾಹಿನ್ ಶಿಕ್ಷಣ ಸಂಸ್ಥೆಗಳಂಥ ಸಂಸ್ಥೆಗಳು ಹಲವು ಜಿಲ್ಲೆಗಳಲ್ಲಿ ನಮ್ಮ ಚಳುವಳಿಗೆ ಸಹಾಯ ಮಾಡುತ್ತಾ ಬಂದಿವೆ. ಎಲ್ಲ ಜಿಲ್ಲೆಗಳಲ್ಲಿ ನಮ್ಮ ಪದಾಧಿಕಾರಿಗಳು ಹಾಗು ಸ್ಕೌಟ್ಸ್–ಗೈಡ್ಸ್‌ಗಳು ದಿನನಿತ್ಯ ಮಾಡುತ್ತಿರುವ ಉತ್ತಮ ಸೇವಾ ಕಾರ್ಯಗಳನ್ನು ಮನವರಿಕೆ ಮಾಡಿಕೊಟ್ಟು, ಅವರಿಂದ ನೆರವು ಪಡೆದುಕೊಳ್ಳುವ ಪ್ರಯತ್ನ ಮಾಡೋಣ.

ಸ್ಕೌಟ್ಸ್–ಗೈಡ್ಸ್ ಚಳುವಳಿಯ ಮತ್ತಷ್ಟು ಸದೃಢತೆಗೆ, ಎಲ್ಲ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡುವ ನನ್ನ ಆಲೋಚನೆಗೆ ಪ್ರೇರಣೆ ಸಿಕ್ಕಿದೆ. ಕೆಲವು ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಭೇಟಿ ನೀಡಿ, ಸಮಸ್ಯೆಗಳನ್ನು ಅರಿತಿದ್ದೇನೆ. ಅದರಂತೆ, ದಳನಾಯಕರು, ಮುಖ್ಯ ಶಿಕ್ಷಕರು, ಮೂಲ ಹಾಗೂ ಮುಂದುವರೆದ ತರಬೇತಿ ಹೊಂದಿದ ಶಿಕ್ಷಕರುಗಳಿಗೆ ದಳಗಳನ್ನು ನಡೆಸುವಲ್ಲಿ ಇರುವ ಅಡಚಣೆಗಳು ಮತ್ತು ರಾಜ್ಯ ಸಂಸ್ಥೆಯಿಂದ ಅವರು ನಿರೀಕ್ಷಿಸುವ ಸಹಕಾರ ಮುಂತಾದ ವಿಷಯಗಳ ಬಗ್ಗೆ ಸಮಾಲೋಚಿಸಲು, ಜಿಲ್ಲಾವಾರು ಆನ್‌ಲೈನ್ ಸಭೆಗಳನ್ನು ನಡೆಸಲು ಪ್ರಾರಂಭಿಸಿದ್ದೇವೆ. ಈಗಾಗಲೇ 5–6 ಜಿಲ್ಲೆಗಳಲ್ಲಿ ಆ ಪ್ರಯತ್ನ ಫಲ ನೀಡಿದ್ದು, ಉಳಿದ ಜಿಲ್ಲೆಗಳೂ ಅಂತಹ ಸಭೆಗಳನ್ನು ಆಯೋಜಿಸಬೇಕೆಂಬುದು ನನ್ನ ಕಳಕಳಿಯ ಮನವಿ.

ಆಗಸ್ಟ್ 5 ರಿಂದ 10ರ ವರೆಗೆ ಮಂಗಳೂರಿನ ರಾಜ್ಯ ಮಟ್ಟದನಮ್ಮ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಾರ್ಷಿಕ ಶಿಬಿರ ಯಶಸ್ವಿಯಾಗಿ ನಡೆಯಿತು. ಸೌದಿ ಅರೆಬಿಯಾದ ಸ್ಕೌಟ್ಸ್, ಗೈಡ್ಸ್‌ಗಳು ಮತ್ತು ಅವರ ನಾಯಕರುಗಳು ಸಹ ಭಾಗವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಮೋಹನ್ ಆಳ್ವ ಅವರ ಆಸಕ್ತಿಯಿಂದಾಗಿ, ಹೊಸ ರೂಪ ಪಡೆದುಕೊಳ್ಳುತ್ತಿರುವ ಪಿಳಕುಳದ ನಮ್ಮ ತರಬೇತಿ ಕೇಂದ್ರ ಆಕರ್ಷಣೀಯವಾಗುತ್ತಿರುವುದು ಸಂತೋಷ ತಂದಿದೆ.

ಅಕ್ಟೋಬರ್ 5 ರಿಂದ 10ರ ವರೆಗೆ ಚಿಕ್ಕಮಗಳೂರಿನಲ್ಲಿ ರಾಜ್ಯ ಮಟ್ಟದ ಕಬ್ಸ್ ಮತ್ತು ಬುಲ್ ಬುಲ್ ಉತ್ಸವ ಹಾಗೂ ವಿಜಯಪುರದಲ್ಲಿ ಕಿತ್ತೂರು ಕರ್ನಾಟಕದ ಎರಡನೇ ಜಾಂಬೋರೆಟ್‌ಗಳ ಸಿದ್ಧತೆಯಲ್ಲಿ ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಗಳು ಸನ್ನದವಾಗಿದೆ. ಎಲ್ಲಾ ಜಿಲ್ಲಾ ಸಂಸ್ಥೆಗಳೂ ಈ ಉತ್ಸವಗಳಿಗೆ ಕೈಜೋಡಿಸಬೇಕೆಂದು ಮನವಿ ಮಾಡುತ್ತೇನೆ.

ಬಾರತದಲ್ಲಿ ಮೊದಲ ಬಾರಿಗೆ ಸ್ಕೌಟಿಂಗ್ ಪ್ರಾರಂಭಿಸಿದ ಹೆಗ್ಗಳಿಕೆ ನಮ್ಮ ಬೆಂಗಳೂರಿನ ಬಿಷಪ್ ಕಾಟನ್ ಶಾಲೆ ಆಗಿರುವುದು ರಾಜ್ಯ ಸಂಸ್ಥೆಯ ಹೆಮ್ಮೆ. ಇದರ ಹಿನ್ನೆಲೆಯಲ್ಲಿ ಬರುವ ನವೆಂಬರ್‌ನಲ್ಲಿ 75ನೇ ವರ್ಷದ ಸಂಸ್ಥಾಪನಾ ದಿನಾಚರಣೆಯನ್ನು ನಮ್ಮ ರಾಜ್ಯ ಸಂಸ್ಥೆ ಮತ್ತು ಬಿಷಪ್ ಕಾಟನ್ ಬಾಲಕರ ಶಾಲೆಯ ಸಹಯೋಗದಲ್ಲಿ, ಆ ಶಾಲೆಯ ಸಭಾಂಗಣದಲ್ಲಿ ಆಯೋಜಿಸುವ ನಮ್ಮ ಚಿಂತನೆಗೆ ಶಾಲೆಯ ಆಡಳಿತ ಮಂಡಳಿ ಮತ್ತು ಪ್ರಾಂಶುಪಾಲರು ಆಸಕ್ತಿ ತೋರಿದ್ದಾರೆ. ಈ ಕಾರ್ಯಕ್ರಮ ರಾಷ್ಟ್ರಮಟ್ಟದಲ್ಲಿ ಗಮನಸೆಳೆಯುವಂತಾಗುವ ಆಶಯ ನನ್ನದು.

ವಿಶ್ವ ಸ್ಕೌಟ್ಸ್ ಸಂಘಟನೆಯು ರಾಷ್ಟ್ರೀಯ ಸಂಸ್ಥೆಗೆ ವಿಶ್ವದ "ಇಂಟರ್ ಜನರೇಶನಲ್ ಲೀಡರ್‌ಶಿಪ್ ಪ್ರಶಸ್ತಿ" ನೀಡಿ ಅಭಿನಂದಿಸಿದೆ. ಆದುದರಿಂದ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಅನಿಲ್ ಕುಮಾರ್ ಜೈನ್, ರಾಷ್ಟ್ರೀಯ ಮುಖ್ಯ ಆಯುಕ್ತರಾದ ಡಾ. ಕೆ.ಕೆ. ಖಂಡೇಲ್‌ವಾಲ್ ಅವರಿಗೆ ಹಾಗೂ ಎಲ್ಲ ಮುಖಂಡರುಗಳಿಗೆ ರಾಜ್ಯ ಸಂಸ್ಥೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಕೆಲವು ತಿಂಗಳುಗಳ ಹಿಂದೆ ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ "ಆಹಾರ ಪೋಲು ಸೂಚ್ಯಂಕ ವರದಿ" ಜಗತ್ತಿನ ಎಲ್ಲೆಡೆ ಆಹಾರದ ಪೋಲು ಗಂಭೀರ ಸ್ವರೂಪ ಪಡೆಯುತ್ತಿರುವುದನ್ನು ಖಾತರಿಪಡಿಸಿದೆ. ಆಹಾರ ಪೋಲು ಮಾಡುವುದನ್ನು ತಡೆಯುವ ಅಗತ್ಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಎಲ್ಲ ಹಂತಗಳಲ್ಲೂ ಆಹಾರ ಪೋಲು ಕನಿಷ್ಠ ಮಟ್ಟವನ್ನು ತಲುಪುವಂತೆ ಮಾಡಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯೋನ್ಮುಖರಾಗೋಣ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಸಂಪಾದಕೀಯ



ಮಾನ್ಯರೆ,

ಪ್ರತಿ ವರ್ಷದ ಆಗಸ್ಟ್ 01 ರಂದು ಸ್ಕೌಟ್ಸ್ ಮತ್ತು ಗೈಡ್ಸ್‌ನಿಂದ ಏರ್ಪಡಿಸಲಾಗುತ್ತಿರುವ "ಸ್ಕಾರ್ಫ್‌ಡೇ" ಅಥವಾ "ಸೂರ್ಯೋದಯ ದಿನಾಚರಣೆಯು" ಆಗಸ್ಟ್ 01 ರಂದು ರಾಜ್ಯಾದ್ಯಂತ ಸ್ಕೌಟ್ಸ್–ಗೈಡ್ಸ್‌ನ ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸಿ ಸಂಭ್ರಮಿಸುವಲ್ಲಿ ಅದರ ಮೌಲ್ಯಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಮತ್ತು ಈ ಚಳವಳಿಯ ಮಹತ್ವವನ್ನು ಹೆಚ್ಚು–ಹೆಚ್ಚು ಜನರಿಗೆ ತಿಳಿಸುವಲ್ಲಿ, ಹಮ್ಮಿಕೊಂಡು ನಿರ್ವಹಿಸಿದ ಕಾರ್ಯಚಟುವಟಿಕೆಗಳು ಅಭಿನಂದನಾರ್ಹ. ಜೊತೆಗೆ, ಸ್ಥಳೀಯ ಸಂಸ್ಥೆಗಳ ಮತ್ತು ಜಿಲ್ಲಾ ಸಂಸ್ಥೆಗಳ ಹಂತಗಳಲ್ಲಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರೇಮವನ್ನು ಬಿತ್ತರಿಸುವಲ್ಲಿ ಪೂರಕವಾಗಿ ಏರ್ಪಡಿಸಿದ್ದ ರಾಷ್ಟ್ರಭಕ್ತಿ ಗೀತೆಗಳ ಗೀತಗಾಯನ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಬೆಳಸುವಲ್ಲಿ ಬಹಳ ಪ್ರಭಾವ ಬೀರುವಂತೆ ನಿರ್ವಹಿಸಿರುವುದು ಹರ್ಷದಾಯಕ. 15 ಆಗಸ್ಟ್ 2024ರಂದು ರಾಜ್ಯದಾದ್ಯಂತ ಎಲ್ಲಾ ದಳಮಟ್ಟ, ಸ್ಥಳೀಯ ಸಂಸ್ಥೆ, ಜಿಲ್ಲಾ ಸಂಸ್ಥೆ, ರಾಜ್ಯ ಮಟ್ಟದಲ್ಲಿ ಏರ್ಪಟ್ಟ ಸ್ವಾತಂತ್ರ್ಯ ದಿನೋತ್ಸವ ದಿನಾಚರಣಾ ಸಮಾರಂಭಗಳಲ್ಲಿ ಸರ್ವರೂ ಸಕ್ರಿಯವಾಗಿ ಭಾಗವಹಿಸಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನವರು ಈ ದಿನಾಚರಣಾ ಸಮಾರಂಭದ ಅವಿಭಾಜ್ಯ ಅಂಗವಾಗಿ ಭಾಗವಹಿಸಿ, ಈ ಚಳವಳಿಯ ಮಹತ್ವವನ್ನು ಹೆಚ್ಚಿಸುವಲ್ಲಿ ಶ್ರಮಿಸಿರುವುದು ಅತ್ಯಂತ ಅಭಿನಂದನಾರ್ಹ. ಜೊತೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಆಯಾಯ ಸ್ಥಳೀಯ / ಜಿಲ್ಲಾ / ರಾಜ್ಯ ಮಟ್ಟದ ಸ್ವಾತಂತ್ರ್ಯೋತ್ಸವ ದಿನಾಚರಣಾ ಸಮಾರಂಭಗಳಲ್ಲಿ ಸಕ್ರಿಯವಾಗಿ, ಶಿಸ್ತುಬದ್ಧವಾಗಿ ಭಾಗವಹಿಸಿರುವವರಲ್ಲದೆ, ಅವರಿಂದ ಮೆಚ್ಚುಗೆಯ ಪುರಸ್ಕಾರಗಳಿಗೆ ಭಾಗಿಗಳಾಗಿ ಪುರಸ್ಕರಿಸಲ್ಪಟ್ಟಿರುವುದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ಗೆ ಹೆಚ್ಚಿನ ಹೆಮ್ಮೆದಾಯಕ ಸಂಗತಿ ಆಗಿರುವುದು. ರಾಜ್ಯ ಮಟ್ಟದ ಸ್ವಾತಂತ್ರ್ಯ ದಿನೋತ್ಸವ ಆಚರಣಾ ಸಮಾರಂಭದಲ್ಲೂ ಬೆಳಗಾವಿ ಜಿಲ್ಲೆಯ ಸ್ಕೌಟ್ಸ್–ಗೈಡ್ಸ್ ತಂಡದವರು ಭಾಗವಹಿಸಿ, ರಾಜ್ಯ ಮಟ್ಟದ ದ್ವಿತೀಯ ಬಹುಮಾನ ಪಡೆದಿರುವುದು ಅತ್ಯಂತ ಅಭಿನಂದನಾರ್ಹ. ತನ್ಮೂಲಕ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಶ್ರೇಯೋಭಿವೃದ್ಧಿಗೆ ಬಹಳ ಪ್ರೇರಣೆ ಆಗಿರುವುದಾಗಿ ತಿಳಿಸಲು ಹರ್ಷಿಸುತ್ತೇನೆ.

ಹೆಚ್ಚು–ಹೆಚ್ಚು ವಿದ್ಯಾರ್ಥಿಗಳು ಸ್ಕೌಟ್ಸ್–ಗೈಡ್ಸ್ ಚಳವಳಿಯಲ್ಲಿ ಭಾಗವಹಿಸುವಲ್ಲಿ ಅರ್ಹ ಶಿಕ್ಷಕರಿಗೆ ಮೂಲತರಬೇತಿಗಳನ್ನು ಹಮ್ಮಿಕೊಂಡು ನಿರ್ವಹಿಸುವಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಎಲ್ಲಾ ಅಧಿಕಾರಿಗಳು, ಶಾಲಾ–ಕಾಲೇಜು ಮುಖ್ಯಸ್ಥರ ಪ್ರೋತ್ಸಾಹ ಅಭಿನಂದನಾರ್ಹ. ಇತ್ತೀಚೆಗೆ ಬಹಳಷ್ಟು GPT (Graduate Primary School Teachers)ಗಳನ್ನು ಸರ್ಕಾರವು ಹಿರಿಯ ಪ್ರಾಥಮಿಕ ಶಾಲೆಗಳಿಗೆ ನೇಮಿಸಿದ್ದು, ಅವರುಗಳಿಗೆ ಅವಶ್ಯಕ ಬುನಾದಿ ತರಬೇತಿಯ (Foundational Training) ಅವಶ್ಯಕತೆಯ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ವಿವಿಧ ತರಬೇತಿಗಳನ್ನು ನೀಡುತ್ತಿರುವುದು ಸರಿಯಷ್ಟೆ. ಅದರಂತೆ ಈಗಾಗಲೇ ಕೆಲವು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ತಮ್ಮ ಜಿಲ್ಲೆಗೆ ಹೊಸದಾಗಿ ನೇಮಕಗೊಂಡಿರುವ GPT ಶಿಕ್ಷಕರುಗಳನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಏರ್ಪಡಿಸಿ ನಿರ್ವಹಿಸಲಿರುವ 7 ದಿವಸಗಳ ಮೂಲ ತರಬೇತಿಗೆ ನಿಯೋಜಿಸಿರುವುದು ತುಂಬಾ ಸ್ವಾಗತಾರ್ಹ. ವಿದ್ಯಾರ್ಥಿಗಳು ನಗುನಗುತ್ತಾ ಕಲಿಯುವಂತಹ (Be Smiling), ಕೈಲಾದಷ್ಟು ಮಾಡುವಲ್ಲಿ (Do their Best), ಪ್ರೇರೇಪಿಸುವಂತಹ ಮತ್ತು ಸದಾ ಸಿದ್ಧನಾಗಿರುವಲ್ಲಿ (Be Prepared) ಪ್ರೋತ್ಸಾಹಿಸುವ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸುವಲ್ಲಿ ಸಾಕಷ್ಟು ಕಾರ್ಯಕ್ರಮಗಳು, ಚಟುವಟಿಕೆಗಳ ಬಗ್ಗೆ ಮನದಟ್ಟು ಮಾಡುವುದು ಈ ಮೂಲತರಬೇತಿಯ ಉದ್ದೇಶ ಆಗಿದ್ದು, ಇದನ್ನು ಅನುಷ್ಠಾನಗೊಳಿಸುವುದರಿಂದ ವಿದ್ಯಾರ್ಥಿಗಳ ವಿದ್ಯಾರ್ಜನೆಯ ಮನೋಭಾವನೆಗಳಲ್ಲಿ ಬಹಳಷ್ಟು ಪ್ರಗತಿ ಆಗಲಿದ್ದು, ತನ್ಮೂಲಕ ಉತ್ತಮ ಪರೀಕ್ಷಾ ಫಲಿತಾಂಶ ಹೊಂದುವಲ್ಲಿಯೂ ಹಾಲಿ ಅಡಚಣೆ ಆಗಿರುವ ವಿದ್ಯಾರ್ಥಿಗಳ ನಿರಾಸಕ್ತಿ ಮತ್ತು ಪರೀಕ್ಷೆಗಳನ್ನು ಎದುರಿಸುವಲ್ಲಿ ದೃಢ ಮನೋಭಾವ ಇಲ್ಲದಿರುವ ಆತಂಕ ದೂರವಾಗಿ ಗುಣಾತ್ಮಕ ಫಲಿತಾಂಶ ಹೊಂದುವಲ್ಲಿ ಅವರುಗಳು ಸುಸಜ್ಜಿತರಾಗುವುದನ್ನು ಮನಗಾಣಬಹುದಾಗಿದೆ. ಆದ್ದರಿಂದ ಈ ತರಬೇತಿಗೆ ಇನ್ನುಳಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ)ರವರು ತಮ್ಮಲ್ಲಿಯ GPT ಶಿಕ್ಷಕರನ್ನು ಇತರೆ ಶಿಕ್ಷಕರುಗಳೊಂದಿಗೆ ನಿಯೋಜಿಸುವಲ್ಲಿ ಆದ್ಯ ಕ್ರಮ ಕೈಗೊಂಡು ತನ್ಮೂಲಕ ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇನೆ.

ಒಟ್ಟಿನಲ್ಲಿ 2024ರ ಆಗಸ್ಟ್ ಮಾಹೆಯಲ್ಲಿ ಹಮ್ಮಿಕೊಂಡ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು ಅರ್ಥಗರ್ಭಿತವಾಗಿ ನಿರ್ವಹಣೆ ಆಗಿದ್ದು, ಸರ್ವರ ಮನ್ನಣೆಗೆ ಪಾತ್ರವಾಗಿರುವುದು ಅಭಿನಂದನಾರ್ಹ. ಈ ಚಳವಳಿಯು ಹೆಚ್ಚು–ಹೆಚ್ಚು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ವಿಸ್ತರಿಸುವಲ್ಲಿ, ಇವರಿಗೆ ಸೂಕ್ತ ಮಾರ್ಗದರ್ಶನ ನೀಡುವಲ್ಲಿ ಅರ್ಹ ಶಿಕ್ಷಕರುಗಳು/ ಉಪನ್ಯಾಸಕರುಗಳನ್ನು ಅವಶ್ಯಕ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿಗಳಿಗೆ ನಿಯೋಜಿಸಿ, ಅವರುಗಳು ಸ್ಕೌಟ್ಸ್–ಗೈಡ್ಸ್ ಘಟಕಗಳನ್ನು ಹೊಂದಿ, ನಿರ್ವಹಿಸುವಲ್ಲಿ ಆ ಮೂಲಕ ವಿದ್ಯಾರ್ಥಿಗಳಲ್ಲಿ ವಿದ್ಯಾರ್ಜನೆಯಲ್ಲಿ ತನ್ನ ಕೈಲಾದಷ್ಟು ಶ್ರಮಿಸುವ ಮೂಲಕ ಮತ್ತು ಆ ಬಗ್ಗೆ ಹೆಚ್ಚು ಪ್ರಯತ್ನಗಳನ್ನು ಮಾಡುವ ಗುಣಾತ್ಮಕ ತೀರ್ಮಾನಗಳತ್ತ ಪ್ರೇರೇಪಿಸುವಲ್ಲಿ ಪ್ರೋತ್ಸಾಹಿಸಲು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯವರೆಲ್ಲರ ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಎಲ್ಲಾ ಹಂತದ ಅಧಿಕಾರಿಗಳನ್ನು ಮತ್ತೊಮ್ಮೆ ವಿನಮ್ರವಾಗಿ ವಿನಂತಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)
ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಕಲಬುರಗಿ ವಿಭಾಗಮಟ್ಟದ ಪ್ರೇರಣಾ ಕಾರ್ಯಕ್ರಮ

"ಪ್ರೇರಣೆಯಿಲ್ಲದೆ ಜಗತ್ತಿನಲ್ಲಿ ಒಂದು ಹುಲ್ಲುಕಡ್ಡಿಯೂ ಅಲುಗಾಡುವುದಿಲ್ಲ ಎಂಬುದು ನೂರಕ್ಕೆ ನೂರರಷ್ಟು ಸತ್ಯ. ಹಾಗೆಯೇ ದೊಡ್ಡ ದೊಡ್ಡ ಸಾಧನೆಗಳಿಗೆಲ್ಲ, ಸಣ್ಣ ಸಣ್ಣ ಪ್ರೇರಣೆಗಳೆ ಕಾರಣಗಳು. "ಪ್ರೇರಣೆ" ಇದ್ದರೆ ಬದುಕು ಸುಂದರವಾಗಿರುತ್ತದೆ."

ಕಲ್ಯಾಣ ಕರ್ನಾಟಕದ ಕಲಬುರ್ಗಿ ವಿಭಾಗ ಮಟ್ಟದ ರೇಂಜರ್ಸ್‌ಗಳ "ಪ್ರೇರಣಾ" ಕಾರ್ಯಕ್ರಮವನ್ನು ರಾಜ್ಯ ಸಂಸ್ಥೆ ಹಾಗೂ ಬೀದರ್ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಆಗಸ್ಟ್ 03 ರಿಂದ 05ರ ವರೆಗೆ ಬೀದರ್ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು.

ರೇಂಜರ್ಸ್‌ಗಳಿಗೆ ಮೂಲಭೂತ ತತ್ವಗಳು, ಪ್ರತಿಜ್ಞೆ ಮತ್ತು ನಿಯಮಗಳು, ಇತಿಹಾಸ ಈ ವಿಷಯಗಳನ್ನು, ಶ್ರೀಮತಿ ಜಯಶೀಲಾ ಸುದರ್ಶನ, ಶ್ರೀಮತಿ ವೇದಮಣಿ, ಶ್ರೀಮತಿ ಮಲ್ಲೇಶ್ವರಿ ಜುಜಾರೆ ಇವರುಗಳು ನಡೆಸಿಕೊಟ್ಟರು. ಮಧ್ಯಾಹ್ನ ಉದ್ಘಾಟನಾ ಸಮಾರಂಭಕ್ಕೆ ಡಾ॥ ಚನ್ನಬಸವ ಪಟ್ಟದೇವರ ರಂಗಮಂದಿರ, ಬೀದರ್ ಸೇರಿದರು.



ಡಾ॥ ಎಸ್.ಎಸ್. ಸಿದ್ಧಾರೆಡ್ಡಿ, ಸ್ಕೌಟ್ ಭವನದ ಅಡಿಗಲ್ಲು ಸಮಾರಂಭ, ಡಾ॥ ಅಜಯ್‌ಸಿಂಗ್, ಅಧ್ಯಕ್ಷರು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಇವರಿಗೆ ಸನ್ಮಾನ ಸಮಾರಂಭ ಮತ್ತು "ಪ್ರೇರಣಾ" ಕಾರ್ಯಕ್ರಮದ ಉದ್ಘಾಟನಾ ಸಮಾರಂಭ "ತ್ರಿಕಾರ್ಯ ಸಂಗಮ"ವಾಗಿದೆ. ಈ ವೇದಿಕೆ ಅತ್ಯಂತ ಅದ್ಭುತವಾಗಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆ, ಮಾನ್ಯ ಅರಣ್ಯ ಮತ್ತು ಜೈವಿಕ ಪರಿಸರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿದ್ದರು. ಡಾ॥ ಗುರಮ್ಮ ಸಿದ್ಧಾರೆಡ್ಡಿ, ಸಹಾಯಕ ರಾಜ್ಯ ಆಯುಕ್ತರು (ಗೈ) ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಬೀದರ್ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಎರಡನೇ ದಿನ ಕಾರ್ಯಕ್ರಮವು ಬೆಳಗ್ಗೆ 6.30ಕ್ಕೆ ಬಿ.ಪಿ. ಸಿಕ್ಸ್ ವ್ಯಾಯಾಮದ ಮೂಲಕ ಈ ಕಾರ್ಯಕ್ರಮದ ಪೂರ್ತಿ ಹೊಣೆಗಾರಿಕೆಯನ್ನು ತೆಗೆದುಕೊಂಡಿದ್ದ ಶ್ರೀಮತಿ ಜಯಶೀಲಾ ಸುದರ್ಶನ, ಎ.ಎಲ್.ಟಿ(ಗೈ), ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಬಾಲ್ಕಿ ಇವರು ನಡೆಸಿಕೊಟ್ಟರು. ನಂತರ ಧ್ವಜಾರೋಹಣ ಹಾಗೂ ಉಪಹಾರ. ನಂತರ "ರಸಪ್ರಶ್ನೆ" ಕಾರ್ಯಕ್ರಮ ಪ್ರಾರಂಭವಾಯಿತು. 6 ಜಿಲ್ಲೆಗಳಿಂದ ಆಗಮಿಸಿರುವ ಮಕ್ಕಳು ಜಿಲ್ಲಾವಾರು ಗುಂಪುಗಳನ್ನು ಮಾಡಲಾಯಿತು. ಪ್ರತಿಯೊಂದು ಜಿಲ್ಲೆಯಿಂದ 3 ಮಕ್ಕಳಂತೆ 6 ಗುಂಪುಗಳನ್ನು ಮಾಡಿ, ಈ ಕಾರ್ಯಕ್ರಮ ತುಂಬಾ ಅಚ್ಚುಕಟ್ಟಾಗಿ ನಡೆಸಲಾಯಿತು. ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಇವರ ಮಾಗದರ್ಶನದಲ್ಲಿ ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ಮಾಡಲಾಯಿತು. ಮಕ್ಕಳೆಲ್ಲ ಬಹಳ ಉತ್ಸುಕತೆಯಿಂದ ಭಾಗವಹಿಸಿದ್ದರು. ಪ್ರಥಮ ಬೀದರ್, ದ್ವಿತೀಯ ಯಾದಗಿರಿ ಹಾಗೂ ತೃತೀಯ ಕಲಬುರ್ಗಿರವರು ಬಹುಮಾನವನ್ನು ಪಡೆದರು. ಶ್ರೀಮತಿ ವೇದಮಣಿ, ಶ್ರೀಮತಿ ಅಂಬಿಕಾ ಜವಳಿ, ಶ್ರೀಮತಿ ರಜನಿಗಂಧಾ, ಶ್ರೀಮತಿ ಸುಜಾತಾ ಪೂಜಾರಿ, ಶ್ರೀಮತಿ ಜಯಶೀಲಾ ಎಲ್ಲರೂ ಉತ್ತಮವಾಗಿ ನಡೆಸಿಕೊಟ್ಟರು.

11.30ಕ್ಕೆ ಚರ್ಚಾಕೂಟ ಪ್ರಾರಂಭವಾಯಿತು. ವಿಷಯ: ಪ್ರೇಮವಿವಾಹ– ನಿಶ್ಚಿತ ವಿವಾಹ ವಿಷಯದ ಕುರಿತು ಮಕ್ಕಳು ಬಿಸಿಬಿಸಿಯಾದ ಚರ್ಚೆ ನಡೆಸಿದರು. ಎಲ್ಲರೂ ಅದ್ಭುತವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. 12.30ಕ್ಕೆ ಡಾ॥ ಶ್ರೀಮತಿ ರೂಪಾರಾಣಿ ಮದರ್ಗಿಯವರಿಂದ ಪ್ರವಚನ, ರೇಂಜರ್ಸ್‌ಗಳಿಗೆ ಸ್ವಸ್ಥ ಆರೋಗ್ಯದ ಸಲಹೆಗಳನ್ನು ಹೆಣ್ಣು ಮಕ್ಕಳ ದೈಹಿಕ ಸಮಸ್ಯೆಗಳು, ಋತುಚಕ್ರದ ಸಮಸ್ಯೆಗಳು, ಪಿ.ಸಿ.ಒ.ಡಿ (ಪಾಲಿಸಿಸ್ಟಿಕ್ ಓವರಿಯನ್ ಡಿಸೀಸ್) ಸಮಸ್ಯೆ, ವೈಯಕ್ತಿಕ ಸ್ವಚ್ಛತೆ, ಕುರಿತಾಗಿ ಅತ್ಯಂತ ವಿವರವಾಗಿ ತಿಳಿಸಿದರು.

ಮಧ್ಯಾಹ್ನ 2.30ಕ್ಕೆ ಶ್ರೀಮತಿ ಜಯಶ್ರೀ ಪಾಟೀಲ, ವಕೀಲರು ಹಾಗೂ ಶ್ರೀಮತಿ ಮಂಗಳಾಗೌಡ, ವಕೀಲರು ಇವರ ಪ್ರವಚನ, "ಕಾನೂನಿನಲ್ಲಿ ಮಹಿಳೆಯರಿಗೆ ಇರುವ ಸೌಲಭ್ಯಗಳು (ಮಹಿಳಾ ಕಾನೂನು ಅರಿವು) ಇದರ ಬಗ್ಗೆ 1. ಮದುವೆಯಾಗಬೇಕಾದರೆ ಇರಬೇಕಾದ ಷರತ್ತುಗಳು 2. ವರದಕ್ಷಿಣೆ ದೌರ್ಜನ್ಯ 3. ಆಸ್ತಿಯ ಹಕ್ಕು 4. ಪೋಕ್ಸೊ ಕಾಯ್ದೆ ಮುಂತಾದವುಗಳ ಬಗ್ಗೆ ಅತ್ಯಂತ ವಿವರವಾಗಿ ತಿಳಿಸಿದರು.

ಸರ್ವಧರ್ಮ ಪ್ರಾರ್ಥನೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ತುಳಸಿರಾಮ್ ದೊಡ್ಡಿ ಹಾಗೂ ಡಾ॥ ಹೆಚ್.ಬಿ. ಭರಶೆಟ್ಟಿಯವರು ಭಾಗವಹಿಸಿದ್ದರು. ಶಿಬಿರದ ನಾಯಕಿ ಶ್ರೀಮತಿ ಮಲ್ಲೇಶ್ವರಿ ಜುಜಾರೆಯವರು ಈ ಕಾರ್ಯಕ್ರಮವನ್ನು ನಡೆಸಿದರು.

ಶ್ರೀಮತಿ ಗೀತಾ ನಟರಾಜ, ರಾಜ್ಯ ಆಯುಕ್ತರು (ಗೈಡ್ಸ್) ಇವರು ಗುಂಪು ಸಂವಾದ ಚಟುವಟಿಕೆಯನ್ನು ನಡೆಸಿಕೊಟ್ಟರು. "ಗುಂಪು ಸಂವಾದ"ದ ವಿಷಯಗಳು: 1. ಮಹಿಳೆ "ಬಹುಮುಖಿ ಕೆಲಸಗಾರಳು". 2. ಮೌಲ್ಯ ಬೇಕೆ/ ಬೇಡವೇ ನೀವು ಅಳವಡಿಸಿಕೊಂಡಿರುವ ಮೌಲ್ಯಗಳಾವುವು. 3. ಮಹಿಳೆಯರ ಸಬಲೀಕರಣ. 4. ಮಹಿಳೆ ಮತ್ತು ಪುರುಷರ ಸಮಾನತೆ. 5. ನಿಮಗೆ ಆದರ್ಶವಾದ ಮಹಿಳೆ/ಪುರುಷ. 6. ಪ್ರಕೃತಿಯ ಸಂಪನ್ಮೂಲಗಳ ಬಳಕೆಯಲ್ಲಿ ನಮ್ಮ ಪಾತ್ರ ಒಂದು ಗುಂಪಿನಲ್ಲಿ ಇರುವ ಮಕ್ಕಳು ಅವರಿಗೆ ಬಂದ ವಿಷಯಗಳಲ್ಲಿ ಚರ್ಚೆ ಮಾಡಿ, ಪ್ರತಿಯೊಬ್ಬರು 1 ನಿಮಿಷದಂತೆ, ಮಾತನಾಡಿದರು. ಎಲ್ಲಾ ಮಕ್ಕಳು ಬಹಳ ಚೆನ್ನಾಗಿ ಅವರ ವಿಷಯಗಳನ್ನು ಮಂಡಿಸಿದರು.

ಡಾ॥ ಗುರಮ್ಮ ಸಿದ್ಧಾರೆಡ್ಡಿಯವರು, ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಬೀದರ್ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. "ರಸಪ್ರಶ್ನೆ" ಕಾರ್ಯಕ್ರಮದಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಎಲ್ಲಾ ಮಕ್ಕಳಿಗೆ "ಪ್ರಮಾಣಪತ್ರ" ಹಾಗೂ ನೆನಪಿನ ಕಾಣಿಕೆಯನ್ನು ಕೊಡಲಾಯಿತು. ಶ್ರೀಮತಿ ಗೀತಾ ನಟರಾಜರವರು ಬೀದರ್ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿ ಹಾಗೂ ಎಲ್ಲಾ ಪದಾಧಿಕಾರಿಗಳಿಗೂ ಈ ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲಾ ಗೈಡರ್ಸ್‌ಗಳಿಗೂ ವಂದನೆಗಳನ್ನು ತಿಳಿಸಿ, ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಶುಭಾಶಯಗಳನ್ನು ಕೋರಿದರು. ದಿ॥ ಎಸ್.ಕೆ. ಪ್ರಭಾರವರಿಗೆ "ಪ್ರೇರಣಾ" ಕರ್ತೃವಿಗೆ ನಮನ ಸಲ್ಲಿಸುತ್ತೇನೆ. ಪ್ರೇರಣಾ ದೀಪವು ನಮಗೆಲ್ಲರಿಗೂ ದಾರಿ ದೀಪವಾಗಲಿ ಎಂದು ದಿ॥ ಎಸ್.ಕೆ. ಪ್ರಭಾರವರನ್ನು ಸ್ಮರಿಸಲಾಯಿತು.



ಸೆಪ್ಟಂಬರ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು

ಕ್ರ.ಸಂ	ಕಾರ್ಯಕ್ರಮದ ಹೆಸರು	ದಿನಾಂಕ	ಸ್ಥಳ
1	ಪರಿಸರ ಸ್ನೇಹಿ/ಅರಶಿಣ ಗಣಪತಿ ಸಿದ್ಧತೆ	ಮೊದಲ ವಾರ	ರಾಜ್ಯ, ಜಿಲ್ಲಾ, ಸ್ಥಳೀಯ, ದಳ ಹಂತಗಳಲ್ಲಿ
2	ಶಿಕ್ಷಕರ ದಿನಾಚರಣೆ	05.09.2024	ರಾಜ್ಯ, ಜಿಲ್ಲಾ, ಸ್ಥಳೀಯ, ದಳ ಹಂತಗಳಲ್ಲಿ
3	ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ	17.09.2024	ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ
4	ವಿಶ್ವ ಶಾಂತಿ ದಿನಾಚರಣೆ	21.09.2024	ರಾಜ್ಯ, ಜಿಲ್ಲಾ, ಸ್ಥಳೀಯ, ದಳ ಹಂತಗಳಲ್ಲಿ
5	ಕರಾವಳಿ ಸ್ವಚ್ಛತಾ ಕಾರ್ಯಕ್ರಮ21.09.2024	ಉಡುಪಿ, ಕಾರವಾರ,	ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ
6	ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳು	24.09.2024 ರಿಂದ 30.09.2024	ರಾಜ್ಯ ತರಬೇತಿ ಕೇಂದ್ರಗಳು ಕೊಂಡಜ್ಜಿ ಮತ್ತು ದೊಡ್ಡಬಳ್ಳಾಪುರ
7	ರಾಜ್ಯ ಮಟ್ಟದಲ್ಲಿ ಶಿಕ್ಷಕ–ಶಿಕ್ಷಕಿಯರಿಗೆ ಗೌರವ ಸಮರ್ಪಣೆ	ನಿಗದಿಪಡಿಸಲಾಗುವುದು	ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು

ಶ್ರೀ ವಿ.ಪಿ. ದೀನದಯಾಳು ನಾಯ್ಡುರವರ 107ನೇ ಹುಟ್ಟುಹಬ್ಬ



ಆಗಸ್ಟ್ 16 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ರಾಷ್ಟ್ರೀಯ ಆಯುಕ್ತರಾಗಿ, ರಾಜ್ಯದ ಮುಖ್ಯ ಆಯುಕ್ತರಾಗಿ, ಬೆಂಗಳೂರು ಮಹಾನಗರದ ಮಾಜಿ ಮಹಾಪೌರರು ಮತ್ತು ಸ್ವಾತಂತ್ರ್ಯ ಹೋರಟಗಾರರಾಗಿ ಸೇವೆಸಲ್ಲಿಸಿರುವ ಶ್ರೀ ವಿ.ಪಿ. ದೀನದಯಾಳು ನಾಯ್ಡುರವರ 107ನೇ ಹುಟ್ಟು ಹಬ್ಬದ ಪ್ರಯುಕ್ತ ರಾಜ್ಯ ಕೇಂದ್ರ ಕಛೇರಿಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯಕ್ತರ ನೇತೃತ್ವದಲ್ಲಿ, ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಉಪಾಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಯವರ ಉಪಸ್ಥಿತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಲಾಯಿತು. ನಂತರ ರಾಜ್ಯ ಸಂಸ್ಥೆಯ ವತಿಯಿಂದ ಕಿದ್ವಾಯಿ ಆಸ್ಪತ್ರೆ, ಬೆಂಗಳೂರು ಇಲ್ಲಿನ ರೋಗಿಗಳಿಗೆ ಹಣ್ಣುಗಳನ್ನು ನೀಡಿ ಅವರ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಲಾಯಿತು.

ಡಾ॥ ನವೀನ್, ವೈದ್ಯಕೀಯ ಅಧೀಕ್ಷಕರು, ಕಿದ್ವಾಯಿ ಆಸ್ಪತ್ರೆ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ॥ ಲೋಕೇಶ್, ನಿರ್ದೇಶಕರು, ಕಿದ್ವಾಯಿ ಆಸ್ಪತ್ರೆ ಇವರು ಎಲ್ಲಾ ರೀತಿಯ ಸಹಕಾರ ನೀಡಿದರು. ಶ್ರೀ ಎಂ.ಎ. ಚೆಲ್ಲಯ್ಯ, ಹಿರಿಯ ಸ್ಕೌಟ್ ನಾಯಕರು ಕಾರ್ಯಕ್ರಮವನ್ನು ಸಂಘಟಿಸಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ಪ್ರಭಾಕರ್ ಭಟ್, ಎಸ್.ಒ.ಸಿ(ಸ್ಕೌ), ಶ್ರೀ ನಂದಕುಮಾರ್, ಸಂಯೋಜಕರು, ದಾಖಲಾತಿ ವಿಭಾಗ, ಶ್ರೀ ನಿತಿನ್, ಎ.ಎಸ್.ಒ.ಸಿ, ಬೆಂಗಳೂರು ಉತ್ತರ ಹಾಗೂ ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಿಂದ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.











Congratulations

The World Scout Organization has awarded the National Scouts and Guides Organization the 'Intergenerational Leadership Award' Which makes the Karnataka Scouts & Guides Organisation very Proud.

This award is presented based on a number of factors, including youth Participation in activities, leadership training, resolution implementation, nomination of youth representatives to leadership positions and membership in the Nation.

Heartfelt Congratulations to Dr. Anil Kumar Jain, President, Dr. K.K. Khandelwal, Chief National Commissioner and other leaders of our National Organization, who are responsible for this Prestigious Honor.

Congratulations





M. A. Khalid is the 5th recipient from India, the others being Mrs. Lakshmi Muzumdar (1969), Mr. Sardar Lakshman Singh (1988), Mr. G. Ranga Rao (1994) and Mr. L.M Jain(2008).

The Bharat Scouts and Guides, Karnataka is very proud to inform all of you that our beloved Additional National Chief Commissioner and State Commissioner (Scouts) Sri Mohammed Ali Khalid has been Awarded the "Bronze Wolf Award" for his Exceptional Dedication and Contributions to the Asia Pacific Region(APR), India's Bharat Scouts and Guides Association(BSG) and to the Scout and Guide Movement at Large.

His unwavering dedication to the Scout and Guide Movement has been evident at all levels and in his various roles on Regional and Global Committees and Task Forces.

He has been the recipient of Numerous National, Regional and Global Awards in Recognition of His Continues Commitment to Volunteering and the Advancement of Scouting.

Above Prestigious Award is one more Golden Feather in His so Many Awards Cap. On behalf of our beloved State Chief Commissioner and Bharat Scouts and Guides, Karnataka We Convey our Heartly Congratulations to him.

-State Secretary

Kargil Vijay Diwas 26th JULY 2024

On the occasion of Kargil Vijay Diwas, students of Jain Heritage School, Belagavi, led by Scouts and Guide Incharge M.S. Pallavi Nadkarni, had a memorable visit to the National Defence Academy (NDA) in Pune. This initiative aimed to educate and inspire the younger generation about the historic significance of India's victory in the Kargil War of 1999. The main motive was to inculcate values such as honesty, self-discipline, elegance, discipline, patriotism, and dedication. Our students were impressed by the motivating slogans such as "Naam, Namak, Nishan," "Service before Self." and "Jitna Ragada Utna Tagada." Overall, the excursion was a testament to the importance of such educational initiatives in shaping well-rounded individuals who are not only academically proficient but also deeply aware of their roles and responsibilities as future citizens of India, the Cub bulbul, Scout and Guide Sang a song Aarambh Hai Prachand saluted them, for their service and a student presented the card and thanks NDA officers.






ರಾಜ್ಯ ಕೇಂದ್ರ ಕಛೇರಿಯಲ್ಲಿ 78ನೇ ಸ್ವಾತಂತ್ರ್ಯೋತ್ಸವ ಆಚರಣೆ



ಆಗಸ್ಟ್ 15 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಉತ್ತರ ಜಿಲ್ಲೆಯ ಸಹಯೋಗದೊಂದಿಗೆ ಆಯೋಜಿಸಿದ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಿಂದ 363 ಕಬ್ಸ್–ಬುಲ್–ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ದಳನಾಯಕರುಗಳು ಭಾಗವಹಿಸಿದರು. ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪ, ಉಪಾಧ್ಯಕ್ಷರು ಧ್ವಜಾರೋಹಣವನ್ನು ಮಾಡಿ ಎಲ್ಲರನ್ನು ಉದ್ದೇಶಿಸಿ ಸ್ವಾತಂತ್ರ ದಿನಾಚರಣೆಯ ಮಹತ್ವದ ಬಗ್ಗೆ ಎಲ್ಲರಿಗೂ ಮನ ಮುಟ್ಟುವಂತೆ ಮಾತನಾಡಿದರು. ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀಮತಿ ಗೀತಾನಟರಾಜ್, ರಾಜ್ಯ ಆಯುಕ್ತರು (ಗೈ), ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ವ.ಸಂ.), ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈ), ಶ್ರೀಮತಿ ಅರ್ಪಿತಾ ಕೊಂಡಜ್ಜಿ, ರಾಜ್ಯ ಸ್ಥಾನಿಕ ಆಯುಕ್ತರು, ಶ್ರೀ ಎಲ್.ಟಿ. ಲೋಕೇಶ್, ಸಹಾಯಕ ಕಾಯದರ್ಶಿ, ಶ್ರೀಮತಿ ಮಂಜುಳ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ), ಶ್ರೀ ನಾಗೇಶ್ ಆರ್. ಶಿವಪುರ, ರಾಜ್ಯ ತರಬೇತಿ ಆಯುಕ್ತರು (ಸ್ಕೌ), ಶ್ರೀಮತಿ ಕೆ.ವಿ. ಶಾಮಲ ರಾಜ್ಯ ತರಬೇತಿ ಆಯುಕ್ತರು (ಗೈ), ಶ್ರೀ ವಿಕ್ಟೋರಿಯಾ ಅಮಲರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿ, ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿಗಳು, ಶ್ರೀ ಪಿ. ನಂದಕುಮಾರ್, ಶ್ರೀ ಕೆ.ಹೆಚ್. ಜಯರಾಮಯ್ಯ, ರಾಜ್ಯ ಸಂಸ್ಥೆ ಸಿಬ್ಬಂದಿ ವರ್ಗದವರು. ಸ್ವಾತಂತ್ರ ದಿನಾಚರಣೆಯ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ನಂತರದಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಬೆಂಗಳೂರು ಇಂಟರ್ ನ್ಯಾಷನಲ್ ಅಕಾಡೆಮಿ ಜಯನಗರ ಶಾಲೆಯಿಂದ ಬ್ಯಾಂಡ್ ಮತ್ತು ಪಥಸಂಚಲನ ಪ್ರದರ್ಶನ ಮಾಡಲಾಯಿತು.



ಬಿಗ್ ಬಿ ಯ ಸ್ಕೌಟಿಂಗ್ ನೆನಪುಗಳು



ಹಿಂದಿ ಚಿತ್ರರಂಗದ ಖ್ಯಾತ ನಟ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ,ಮೆಗಾ ಸ್ಟಾರ್ ಗೌರವಾನ್ವಿತ ಅಮಿತ ಬಚ್ಚನ್ ರವರು ಆಗಸ್ಟ್ 01 ಸ್ಕಾರ್ಫ್ ಡೇ ಆಚರಣೆಯ ದಿನದಂದು ಸ್ಕೌಟಿಂಗ್ ನೆನಪನ್ನು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬಾಯ್ ಸ್ಕೌಟ್ಸ್‌ನ ಆ ಒಳ್ಳೆಯ ದಿನಗಳು,ವಿಶೇಷ ಸ್ಕಾರ್ಫ್‌ಗಳು,ಹಲವು ಬ್ಯಾಡ್ಜ್‌ಗಳು,ವಿಶೇಷ ಸೆಲ್ಯೂಟ್ ಹಾಗೂ ಇದರ ಸಂಸ್ಥಾಪಕರಾದ ಬೇಡನ್ ಪೊವೆಲ್ ರವರ ನೆನಪಿನೊಂದಿಗೆ,ವಿಶೇಷ ಸ್ಕೌಟಿಂಗ್ ಕೌಶಲ್ಯಗಳ ಕಲಿಕೆಗಳನ್ನು ಮೆಲುಕು ಹಾಕುತ್ತಾ.1954 ರ ತಮ್ಮ ಬಾಲ್ಯದ ಸ್ಕೌಟ್ ಟ್ರೂಪ್ ನ ಛಾಯಾಚಿತ್ರದ ಜೊತೆ ಸ್ಕೌಟಿಂಗ್ ಖುಷಿಯನ್ನು ಹಂಚಿಕೊಂಡಿದ್ದಾರೆ.

ಅಪ್ರತಿಮ ಕಲಾ ಪ್ರತಿಭೆ ತನ್ನ ಹಿರಿತನದಲ್ಲೂ ಸ್ಕೌಟಿಂಗ್ ನೆನಪನ್ನು ಹಸಿರಾಗಿಸಿದ್ದೆ, ನಮಗೆಲ್ಲರಿಗೂ ಸ್ಕೌಟಿಂಗ್ ಉಸಿರಾಗಿದೆ ಎಂಬ ಹೆಮ್ಮೆ ನಮಗಿದೆ.

ನಿಮ್ಮ ಸ್ಕೌಟಿಂಗ್ ಅಭಿಮಾನ ಹಲವಾರು ಯುವ ಪೀಳಿಗೆಗೆ ಮಾದರಿ, ಸಂಸ್ಥೆಯ ಮೇಲಿರುವ ಪ್ರೀತಿ, ಗೌರವಕ್ಕೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯು ಸದಾ ಚಿರಋಣಿಯಾಗಿದ್ದೇವೆ.

ಅಭಿನಂದನೆಗಳು



ಶ್ರೀಲಂಕಾದಲ್ಲಿ ಆಗಸ್ಟ್ 22 ರಂದು ನಡೆದ

WFFYSI (world fitness Federation of yogasana sports International) Asia pacific yogasana sports championship).

2024ರಲ್ಲಿ ಸ್ಕೌಟರ್ ಶ್ರೀ ನರೇಂದ್ರ ಕಾಮತ್

ಕಾರ್ಕಳ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಬೆಟ್ಟು


ಇವರಿಗೆ **ASIA PACIFIC ICON AWARDS** ಲಭಿಸಿರುತ್ತದೆ.

ಅಂತಾರಾಷ್ಟ್ರೀಯ ಯೋಗಾಸನ ವಿವಿಧ ವಿಭಾಗ ಸ್ಪರ್ಧೆಯಲ್ಲಿ ಸರಕಾರಿ ಪ್ರೌಢಶಾಲೆ ಕೊಕ್ರಾಡಿ ಬೆಳ್ತಂಗಡಿಯ ಗೈಡ್ ಕ್ಯಾಪ್ಟನ್ ಶ್ರೀಮತಿ ಅಕ್ಕಮ್ಮ, ALT (G) ಇವರಿಗೆ ಪ್ರಥಮ ಸ್ಥಾನ

ಸರಕಾರಿ ಪ್ರೌಢಶಾಲೆ ಕಿನ್ನಿಕಂಬಳ ಮಂಗಳೂರಿನ ಗೈಡ್ ಕ್ಯಾಪ್ಟನ್ ಮತ್ತು ಜಿಲ್ಲಾ ಗೈಡ್ ತರಬೇತಿ ಆಯುಕ್ತೆ ಶ್ರೀಮತಿ ಜಯಶ್ರೀ, LT (G) ಇವರಿಗೆ ದ್ವಿತೀಯ ಸ್ಥಾನ.

ಸ್ವಸ್ತಿಕ ಬಿಸಿನೆಸ್ ನ್ಯಾಷನಲ್ ಸ್ಕೂಲ್ ಮಂಗಳೂರು ಇಲ್ಲಿನ ರೋವರ್ ಸ್ಕೌಟ್ ಲೀಡರ್ ಮತ್ತು ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ.ಎಸ್. ಪ್ರತೀಮ್ ಕುಮಾರ್ ಇವರಿಗೆ ದ್ವಿತೀಯ ಸ್ಥಾನ ಲಭಿಸಿರುತ್ತದೆ.

ಇವರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ಹೃತ್ಪೂರ್ವಕ ಅಭಿನಂದನೆಗಳು.



ಜಿಲ್ಲಾ ವಾರ್ತೆಗಳು

ಬಾಗಲಕೋಟೆ

* ಬಿ.ಬಿ.ಎಂ.ಪಿ ಜಿಲ್ಲಾ ಸಂಸ್ಥೆಯ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ರಾಷ್ಟ್ರ ಪ್ರೇಮವನ್ನು ಬೆಳೆಸುವ ನಿಟ್ಟಿನಲ್ಲಿ ದಳನಾಯಕ/ ದಳನಾಯಕಿಯರು ದಳ ಹಂತಗಳಲ್ಲಿ ಆಗಸ್ಟ್ 15ರಂದು "ಸ್ವಾತಂತ್ರ್ಯ ದಿನಾಚರಣೆಯನ್ನು" ಆಚರಿಸಲಾಯಿತು.



* ಬಿ.ಬಿ.ಎಂ.ಪಿ ಜಿಲ್ಲಾ ಸಂಸ್ಥೆಯ ಶಾಲಾ– ಕಾಲೇಜುಗಳ ದಳ ಹಂತಗಳಲ್ಲಿ ದಳನಾಯಕ/ ದಳನಾಯಕಿಯರು ಆಗಸ್ಟ್ 01 ರಂದು "ಸ್ಕೌಟ್ಸ್ ಸ್ಕಾರ್ಫ್/ ಸ್ಕೌಟಿಂಗ್ ಸೂರ್ಯೋದಯ ದಿನ" ಆಚರಣೆಯನ್ನು ಸ್ಕಾರ್ಫ್ ಧರಿಸುವ ಮೂಲಕ "Once a Scout Always a Scout" ಎಂಬ ವಾಕ್ಯದಂತೆ ಅರಿತು ಆಚರಿಸಲಾಯಿತು.



ಬೆಳಗಾವಿ

* ಜುಲೈ 29 ರಿಂದ ಆಗಸ್ಟ್ 04ರ ವರೆಗೆ ರಾಮದುರ್ಗ ತಾಲೂಕಿನ ಶ್ರೀ ಕ್ಷೇತ್ರ ಜಾಗೃತ ವೀರಭದ್ರೇಶ್ವರ ದೇವಸ್ಥಾನ ಗೊಡಚಿ ಇಲ್ಲಿ ಬೆಳಗಾವಿ ಜಿಲ್ಲಾ ಮಟ್ಟದ ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮೂಲ ತರಬೇತಿ ಶಿಬಿರವನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜಾರೋಹಣದೊಂದಿಗೆ ಶಿಬಿರವನ್ನು ಪ್ರಾರಂಭಿಸಲಾಯಿತು. ನಂತರ ಸದರಿ ಕಾರ್ಯಕ್ರಮವನ್ನು ಬೆಳಗಾವಿಯ ಸಹ ನಿರ್ದೇಶಕರು ಹಾಗೂ ಕಾರ್ಯದರ್ಶಿಗಳು, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಳಗಾವಿ ವಿಭಾಗ ಬೆಳಗಾವಿ ಶ್ರೀ ಸಕ್ರೆಪ್ಪಗೌಡ. ಬಿರಾದಾರ ರವರು ಶಿಬಿರವನ್ನು ಉದ್ಘಾಟಿದರು.

ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮನ್ನಿಕೇರಿ ಕಾರ್ಯಕ್ರಮದ ಕುರಿತು ಮಾತನಾಡುತ್ತಾ ಎಲ್ಲರೂ ಒಳ್ಳೆಯ ತರಬೇತಿ ಪಡೆದುಕೊಂಡು ಶಾಲೆಯಲ್ಲಿ ಘಟಕಗಳನ್ನು



ಕಡ್ಡಾಯವಾಗಿ ಪ್ರಾರಂಭಿಸುವಲ್ಲಿ ಪ್ರಯತ್ನಿಸಬೇಕೆಂದು ಹೇಳಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ. ಆರ್. ಟಿ. ಬಳಗಾರ ಮಾತನಾಡಿ ಜೆ. ಪಿ. ಟಿ ಶಿಕ್ಷಕರ ಮೇಲೆ ಸರಕಾರ ಉತ್ತಮ ಭರವಸೆಯನ್ನು ಇಟ್ಟಿದೆ. ಆ ಭರವಸೆಯನ್ನು ಉಳಿಸಿಕೊಳ್ಳಿ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸವದತ್ತಿ ಹಾಗೂ ಜಿಲ್ಲಾ ಆಯುಕ್ತರು ಸ್ಕೌಟ್ ಶ್ರೀ ಎಂ.ಎನ್ ಯದಂಡಿನ, ಶಿಬಿರದ ನಾಯಕರಾದ ಶ್ರೀ. ಎಚ್. ಶಿವಶಂಕರಪ್ಪ ಶ್ರೀಮತಿ ಎಲ್.ಎಸ್. ಬಹಾದ್ದೂರಿ, ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಎಲ್.ಆರ್. ಕನಕಪ್ಪನವರ, ಶ್ರೀ ಎನ್.ಎನ್. ಕಬ್ಬೂರ, ಶ್ರೀ ಎನ್.ಜಿ. ಪಾಟೀಲ, ಶ್ರೀ ಎನ್.ಬಿ. ಗುಡಸಿ ಉಪಸ್ಥಿತರಿದ್ದರು. ಶಿಬಿರದಲ್ಲಿ 118 ಸ್ಕೌಟ್ ಮಾಸ್ಟರ 72 ಗೈಡ್ ಕ್ಯಾಪ್ಟನ್‌ಗಳು ಭಾಗವಹಿಸಿದ್ದರು.

* ಆಗಸ್ಟ್ 03 ರಂದು ಶಿಬಿರದ ಸಮಾರೋಪ ಸಮಾರಂಭವು ಜರುಗಿತು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮಣ್ಣಿಕೇರಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಧಾರವಾಡ ಜಿಲ್ಲಾ ಸಂಸ್ಥೆಯ ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಡಿ.ಡಿ. ಮಾಳಗಿ ಆಗಮಿಸಿದ್ದರು. ಇವರು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಶಿಬಿರಾರ್ಥಿಗಳು ಬಹಳ ಜನ ಯುವಕರಿದ್ದು ತರಬೇತಿ ಪಡೆದುಕೊಂಡು ಹೋದ ನಂತರ ತಮ್ಮ ಶಾಲಾ ಹಂತದಲ್ಲಿ ಉತ್ತಮ ಘಟಕವನ್ನು ಪ್ರಾರಂಭಿಸುವಂತೆ ಕರೆ ನೀಡಿದರು.



* ಆಗಸ್ಟ್ 04 ರಂದು ಬೆಳಗ್ಗೆ 7:30ಕ್ಕೆ ಸರ್ವಧರ್ಮ ಸಮನ್ವಯ ಪ್ರಾರ್ಥನಾ ಸಮಾರಂಭ ಜರುಗಿತು. ಸಮಾರಂಭದ ಮುಖ್ಯ ಅತಿಥಿಯಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಕ್ಕೇರಿ ಹಾಗೂ ಜಿಲ್ಲಾ ಆಯುಕ್ತರು(ಗೈ) ಶ್ರೀಮತಿ ಪ್ರಭಾವತಿ ಪಾಟೀಲ ಆಗಮಿಸಿದ್ದರು. ಸಮಾರಂಭದ ನಂತರ ಎಲ್ಲಾ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಎಲ್ಲಾ



ಶಿಕ್ಷಕ ವೃಂದದವರು ತರಬೇತಿಯ ಬಳಿಕ ತಮ್ಮ ಶಾಲೆಯಲ್ಲಿ ಘಟಕಗಳನ್ನು ಪ್ರಾರಂಭಿಸಿದ ಕುರಿತು ಜಿಲ್ಲಾ ಸಂಸ್ಥೆಗೆ ವರದಿಯನ್ನು ಕಳುಹಿಸುವಂತೆ ತಿಳಿಸಿದರು.

* ಜುಲೈ 15 ರಂದು ಸನ್ಮತಿ ವಿದ್ಯಾಲಯ ಶೇಡಬಾಳ ವಿದ್ಯಾರ್ಥಿ/ನಿಯರು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ಶಿಕ್ಷಕರು ಊರಲ್ಲಿ ಡೆಂಗ್ಯೂ ಜ್ವರ ಜಾಗೃತಾ ಆಂದೋಲನ ಕಾರ್ಯಕ್ರಮ ಜರುಗಿತು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಎಂ.ಎನ್. ಕಾಳೇನಟ್ಟಿ, ದೈಹಿಕ ಶಿಕ್ಷಣಾಧಿಕಾರಿ ಶ್ರೀ ಎಂ.ಕೆ. ಕಾಂಬಳೆ, ಶ್ರೀ ಎಸ್.ಬಿ. ಇರಾಜ, ಶ್ರೀ ಎಂ.ಎಸ್. ಸಪ್ತಸಾಗರ, ಶ್ರೀ ಎ.ಕೆ. ಪಾಟೀಲ, ಶ್ರೀ ಎಚ್.ಪಿ. ನಾಯಿಕ, ಶ್ರೀಮತಿ ಜೆ.ಎಸ್. ಹೆಬ್ಬಾಳಿ, ಶ್ರೀ ಎಸ್.ಎಸ್. ಭಂಡಾರಿ, ಶ್ರೀಮತಿ ಎಂ.ಎಸ್. ಮುತ್ತವಲ್ಲಿ, ಶ್ರೀಮತಿ ಎಂ.ಎಸ್. ಖುರಾಡೆ, ಶ್ರೀ ಎ.ಎಸ್. ಅಂಕಲಕೋಪೆ ಹಾಗೂ ಪಟ್ಟಣ ಪಂಚಾಯತಿ ಸಿಬ್ಬಂದಿಗಳು ಹಾಜರಿದ್ದರು. ಚಿಕ್ಕೋಡಿ ಸಿ.ಎಲ್.ಇ. ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಹಾಗೂ 500 ಜನ ಭಾಗವಹಿಸಿದ್ದರು.

* ಆಗಸ್ಟ್ 20 ರಂದು ನಿಪ್ಪಾಣಿ ನಗರದ ಮರಾಠಾ ಮಂಡಳ ಶಿಕ್ಷಣ ಸಂಸ್ಥೆಯ ಮಾಡರ್ನ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಿಪ್ಪಾಣಿ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತೆಗಳ "ಗೀತಗಾಯನ" ಸ್ಪರ್ಧೆಯನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಹಾಯಕ ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಎಂ.ಎ. ನಾಯಕ ಇವರುಗಳ ಮಾರ್ಗದರ್ಶನದಂತೆ ಪ್ರಭಾರಿ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಂ.ಎ. ಪಡ್ಲಿಹಾಳ ಇವರ ಉಪಸ್ಥಿತಿಯಲ್ಲಿ ಏರ್ಪಡಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಸ್ನೇಹಾ ಘಾಟಗೆ ಇವರು ವಹಿಸಿದ್ದರು. ತಾಲ್ಲೂಕಿನಿಂದ ಗೀತಗಾಯನ ಸ್ಪರ್ಧೆಯಲ್ಲಿ 35 ಶಾಲೆಗಳು ಭಾಗವಹಿಸಿದ್ದು 260 ಮಕ್ಕಳು ಹಾಗೂ 30 ಸ್ಕೌಟರ್ ಗೈಡರುಗಳು ಭಾಗವಹಿಸಿದ್ದರು. ನಿಪ್ಪಾಣಿ ತಾಲ್ಲೂಕಿನ ಅಕ್ಷರ ದಾಸೋಹ ಅಧಿಕಾರಿಗಳಾದ ಶ್ರೀ ಬಸವರಾಜ, ನಿಪ್ಪಾಣಿ ಸಿ.ಆರ್.ಪಿ.ಗಳಾದ ಶ್ರೀ ಸದಾ ಶಿವತರಾಳ, ನಿರ್ಣಾಯಕರಾಗಿ ಶ್ರೀ ಸಂತೋಷ ಹಲಸೋಡೆ, ಶ್ರೀ ರಾಜೇಂದ್ರಯಾದವ ಹಾಗೂ ಶ್ರೀ ಎಮ್.ಎಚ್. ಕೊರವರ ಇವರುಗಳು ಕಾರ್ಯನಿರ್ವಹಿಸಿದರು. ಜಿಲ್ಲಾ ಸಂಘಟನಾ ಶಿಕ್ಷಕರು ಶ್ರೀ ಎ.ಎನ್. ಪಾಟೀಲ್ ಉಪಸ್ಥಿತರಿದ್ದರು.

ಬೆಂಗಳೂರು ಗ್ರಾಮಾಂತರ

* ಜುಲೈ 26 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಟ್ಟಕೋಟೆ ಇಲ್ಲಿ ಕಾರ್ಗಿಲ್ ವಿಜಯೋತ್ಸವ ದಿನವನ್ನು ಆಯೋಜಿಸಲಾಗಿತ್ತು.



* ಆಗಸ್ಟ್ 01 ರಂದು ನಡೆದ ಅಂತರಾಷ್ಟ್ರೀಯ ಸ್ಕಾರ್ಫ್ ಡೇ ಪ್ರಯುಕ್ತ ಡಿ.ವೈ.ಪಿ.ಸಿ. ಹಾಗೂ ಈ.ಓ.ರವರಿಗೆ ಅಂತರಾಷ್ಟ್ರೀಯ ಸ್ಕಾರ್ಫ್ ದಿನಾಚರಣೆ ಹಾಗೂ ಸ್ಕಾರ್ಫ್‌ನ ಮಹತ್ವದ ಬಗ್ಗೆ ತಿಳಿಸಲಾಯಿತು.

* ಆಗಸ್ಟ್ 02 ರಿಂದ 04ರ ವರೆಗೆ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷೆಯನ್ನು ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರದಲ್ಲಿ ನಡೆಸಲಾಯಿತು.



* ಆಗಸ್ಟ್ 08 ರಂದು ನಡೆದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅರದೇಶನಹಳ್ಳಿ ಇಲ್ಲಿ "ವಿಶ್ವ ಬುಡಕಟ್ಟು ದಿನಾಚರಣೆ"ಯನ್ನು ಆಚರಿಸಲಾಯಿತು.

* ಆಗಸ್ಟ್ 15 ರಂದು ಜಿಲ್ಲಾಡಳಿತ ವತಿಯಿಂದ ನಡೆದ 78ನೇ ಸ್ವಾತಂತ್ರ ದಿನಾಚರಣೆಯನ್ನು ಜಿಲ್ಲಾ ಆಟದ ಮೈದಾನ ದೇವನಹಳ್ಳಿ ಇಲ್ಲಿ ನಡೆದ ಸ್ವಾತಂತ್ರ್ಯ ದಿನದ ಕವಾಯತ್ತು ಇದರಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮೂರು ತುಕಡಿಗಳು ಭಾಗವಹಿಸಿದ್ದವು.

* ಆಗಸ್ಟ್ 17 ರಂದು ನೆಲಮಂಗಲ ತಾಲ್ಲೂಕಿನ ವಾರ್ಷಿಕ ಪರಿಷತ್ ಸಭೆ ಹಾಗೂ ಶಿಕ್ಷಕರಿಗೆ ಮಾಹಿತಿ ಕಾರ್ಯಗಾರನ್ನು ಆಯೋಜಿಸಲಾಗಿತ್ತು.

* ಆಗಸ್ಟ್ 17 ರಂದು ನಡೆದ ತಾಲ್ಲೂಕು ಮಟ್ಟದ ಗೀತ ಗಾಯನ ಸ್ಪರ್ಧೆಯನ್ನು ನೆಲಮಂಗಲ ತಾಲ್ಲೂಕಿನಲ್ಲಿ ಆಯೋಜಿಸಲಾಗಿತ್ತು.



ಬೆಂಗಳೂರು ದಕ್ಷಿಣ

* ಜುಲೈ 27 ರಂದು ವಿಲ್ಸನ್ ಗಾರ್ಡನ್ ಸ್ಥಳೀಯ ಸಂಸ್ಥೆಯ ವತಿಯಿಂದ ಚಿನ್ನಯ ವಿದ್ಯಾಲಯ ಶಾಲೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತಗಾಯನ ಸ್ಪರ್ಧೆಯನ್ನು ಆಯೋಜನೆ ಮಾಡಲಾಯಿತು. ಶ್ರೀ ರಘು ಕೋರಮಂಗಲ, ಅಧ್ಯಕ್ಷರು, ವೆಲ್‌ಫೇರ್ ಅಸೋಸಿಯೇಷನ್, ಶ್ರೀಮತಿ ಸ್ವಪ್ನ, ಮಾರ್ನಿಂಗ್ ಸ್ಟಾರ್ ಶಾಲೆಯ ಮುಖ್ಯೋಪಾಧ್ಯಾಯರು, ಶ್ರೀಮತಿ ಭಾಗ್ಯ ಮಾರ್ನಿಂಗ್, ಸ್ಟಾರ್ ಶಾಲೆಯ ಆರ್ಟ್ಸ್ ಮತ್ತು ಕ್ರಾಫ್ಟ್ಸ್ ಕೋ ಆರ್ಡಿನೇಟರ್, ಶ್ರೀ ಸಚ್ಚಿನ್‌ರಿಚರ್ಡ್ ಮೆಮೋರಿಯಲ್ ಶಾಲೆ, ಶ್ರೀ ಮೋಹನ್ ಕ್ರಿಸಾಲಿಸ್, ಹೈ ಇಂಟರ್ ನ್ಯಾಷನಲ್ ಶಾಲೆಯ ಕಲಾ ಶಿಕ್ಷಕರು, ಶ್ರೀ ಸೋಮಶೇಖರ್ ಶಾಂತಿನಿಕೇತನ್ ಶಾಲೆಯ ಕಲಾ ಶಿಕ್ಷಕರು, ಶ್ರೀಮತಿ ಪ್ರಿಯದರ್ಶಿನಿ ಪೋಲೀಸ್ ಪಬ್ಲಿಕ್ ಶಾಲೆಯ ಕಲಾ ವಿಭಾಗದ ಹೆಚ್.ಓ.ಡಿ. ತೀರ್ಪುಗಾರರು ಗೀತಗಾಯನ ಮತ್ತು ಡ್ರಾಯಿಂಗ್ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು. ಶ್ರೀಮತಿ ಅಮಲಪೂರ್ವ ಮೇರಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ದಳನಾಯಕರುಗಳು, 9 ಶಾಲೆಗಳಿಂದ 224 ಕಬ್-ಬುಲ್ ಬುಲ್, ಸ್ಕೌಟ್ಸ್-ಗೈಡ್ಸ್, ರೇಂಜರ್ಸ್‌ಗಳು ಸ್ಪರ್ಧೆಯಲ್ಲಿ ಭಾಗವಹಿಸಿದರು.



* ಬೆಂಗಳೂರು ದಕ್ಷಿಣ ಜಿಲ್ಲೆಯ ದಳ ಮಟ್ಟಗಳಲ್ಲಿ ಆಗಸ್ಟ್ 01 ರಂದು ವಿಶ್ವ ಸನ್‌ರೈಸ್ ಡೇ ಮತ್ತು ವಿಶ್ವ ಸ್ಕಾರ್ಫ್ ಡೇಯನ್ನು ಪ್ರತಿಜ್ಞೆಯನ್ನು ಮರು ಉಚ್ಚರಿಸುವ ಮೂಲಕ ಮತ್ತು ಸ್ಕಾರ್ಫ್ ಹಾಕುವ ಮುಖಾಂತರ ಆಚರಣೆ ಮಾಡಲಾಯಿತು. ಕಬ್ ಬುಲ್–ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ದಳ ನಾಯಕರುಗಳು, ಸ್ಥಳೀಯ ಸಂಸ್ಥೆಯ ಮತ್ತು ಜಿಲ್ಲಾ ಪದಾಧಿಕಾರಿಗಳು ವಿಶ್ವ ಸನ್‌ರೈಸ್ ಡೇ ಮತ್ತು ವಿಶ್ವ ಸ್ಕಾರ್ಫ್ ಡೇಯನ್ನು ಆಚರಿಸಲಾಯಿತು.

* ಆಗಸ್ಟ್ 01 ರಂದು ವಿಶ್ವ ಸನ್‌ರೈಸ್ ಡೇ ಮತ್ತು ವಿಶ್ವ ಸ್ಕಾರ್ಫ್ ಡೇ ದಿನದಂದು ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಮಿನ್ಹಾಜ್ ನಗರ ಬೆಂಗಳೂರು ದಕ್ಷಿಣ ವಲಯ–01 ರಲ್ಲಿ ಹೊಸದಾಗಿ ಸ್ಕೌಟ್ಸ್–ಗೈಡ್ಸ್ ಘಟಕವನ್ನು ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಅಬ್ದುಲ್ ರಜಾಕ್‌ರವರು ಸ್ಕಾರ್ಫ್ ಹಾಕುವ ಮುಖಾಂತರ ಘಟಕವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಶಾಲೆಯ ದಳನಾಯಕರಾದ ಶ್ರೀಮತಿ ಕೋಮಲರವರು, ಶ್ರೀ ಚಂದ್ರು ಪಿ., ಎ.ಎಸ್.ಓ.ಸಿ. (ಸ್ಕೌಟ್ಸ್), ಶಾಲೆಯ ಶಿಕ್ಷಕರು, ಸ್ಕೌಟ್ಸ್–ಗೈಡ್ಸ್‌ಗಳು ಉಪಸ್ಥಿತರಿದರು.



* ಬೆಂಗಳೂರು ದಕ್ಷಿಣ ಜಿಲ್ಲೆಯ ವಿಲ್ಸನ್ ಗಾರ್ಡನ್ ಸ್ಥಳೀಯ ಸಂಸ್ಥೆಯ ವತಿಯಿಂದ ಆಗಸ್ಟ್ 03 ಮಿತ್ರ ಅಕಾಡೆಮಿ ಶಾಲೆ ಅರಕೆರೆಯಲ್ಲಿ 2024–25 ನೇ ಸಾಲಿನ ದಳ ನಾಯಕರುಗಳಿಗೆ ಮತ್ತು ದ್ವಿತೀಯ ಸೋಪಾನ ಪರೀಕ್ಷಾ ಶಿಬಿರಕ್ಕೆ ಅರ್ಜಿ ಸಲ್ಲಿಸುವ ಸ್ಕೌಟ್ಸ್–ಗೈಡ್ಸ್‌ಗಳಿಗೆ ಕಾರ್ಯಗಾರವನ್ನು ಆಯೋಜನೆ ಮಾಡಲಾಯಿತು. ಕಾರ್ಯಗಾರವನ್ನು ಮಿತ್ರ ಅಕಾಡೆಮಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ವಾಣಿಯವರು ಉದ್ಘಾಟನೆಯನ್ನು ಮಾಡಿ ದಳನಾಯಕರುಗಳನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಗಾರದಲ್ಲಿ 36 ದಳ ನಾಯಕರುಗಳು ಹಾಗೂ ವಿವಿಧ ಶಾಲೆಗಳಿಂದ 130 ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದರು. ಕಾರ್ಯಗಾರದಲ್ಲಿ 2024–25ನೇ ಸಾಲಿನ ಯೋಜನೆಯ ಪುಸ್ತಕವನ್ನು ಬಿಡುಗಡೆ ಮಾಡಿ ಚಟುವಟಿಕೆಗೆ ಚರ್ಚೆ ನಡೆಸಿ, ಕಾರ್ಯಕ್ರಮಗಳನ್ನು ಯಾವ ರೀತಿಯಾಗಿ ಕಾರ್ಯರೂಪಕ್ಕೆ ತರುವ ಬಗ್ಗೆ ಚರ್ಚೆಯನ್ನು ಮಾಡಲಾಯಿತು. ಕಾರ್ಯಗಾರಕ್ಕೆ ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ), ಶ್ರೀ ಡಿ. ಶಿವಪ್ಪ, ಹೆಚ್.ಡಬ್ಲೂ.ಬಿ.(ಸ್ಕೌ) ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಗಾರದಲ್ಲಿ ಭಾಗವಹಿಸಿದರು. ಕಾರ್ಯಗಾರದಲ್ಲಿ ಶ್ರೀಮತಿ ಅಮಲಪೂರ್ವ ಮೇರಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಶ್ರೀ ಲಕ್ಷ್ಮಣ್ ಸ್ಥಳೀಯ ಸಂಸ್ಥೆಯ ಸ್ಥಾನೀಯ ಆಯುಕ್ತರು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಶ್ರೀ ಚಂದ್ರು ಪಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು(ಸ್ಕೌ) ಕಾರ್ಯಗಾರದಲ್ಲಿ ಉಪಸ್ಥಿತರಿದ್ದರು.



* ಜುಲೈ 26 ರಂದು ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ದಳಗಳ ಮಟ್ಟದಲ್ಲಿ ವೀರಯೋಧರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗಿಡಗಳನ್ನು ಅವರ ಹೆಸರಿನಲ್ಲಿ ನಡುವ ಮುಖಾಂತರ ಆಚರಿಸಲಾಯಿತು.

* ಆಗಸ್ಟ್ 10 ರಂದು ಜಯನಗರ ಸ್ಥಳೀಯ ಸಂಸ್ಥೆಯ ವತಿಯಿಂದ ವಿ.ಇ.ಟಿ. ಶಾಲೆ ಜೆ.ಪಿ. ನಗರದಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತಾಗಾಯನ ಸ್ಪರ್ಧೆಯನ್ನು ಆಯೋಜನೆ ಮಾಡಲಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀ ಎಂ.ಎಸ್. ಸತೀಶ್ ಮತ್ತು ಉಪ ಪ್ರಾಂಶುಪಾಲರಾದ ಡಾ॥ ಮಂಗಳಗೌರಿ, ಶ್ರೀ ಎನ್. ಆನಂದ್ ಜಯನಗರ ಸ್ಥಳೀಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಚೆರ್‌ಮನ್‌ರವರು, ಶ್ರೀಮತಿ ರೇಖಾ ಎ.ಎಲ್.ಟಿ. (ಗೈಡ್ಸ್) ಗೀತಾಗಾಯನ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು. ಸ್ಪರ್ಧೆಯಲ್ಲಿ 12 ಶಾಲೆಗಳಿಂದ ಒಟ್ಟು 226 ಕಬ್–ಬುಲ್, ಸ್ಕೌಟ್ಸ್–ಗೈಡ್ಸ್ ಭಾಗವಹಿಸಿದ್ದರು.

* ಆಗಸ್ಟ್ 10 ರಂದು ಬಸವನಗುಡಿ ಸ್ಥಳೀಯ ಸಂಸ್ಥೆಯ ವತಿಯಿಂದ ಶ್ರೀ ಆರ್. ಅಶೋಕ್ ಶಾಸಕರ ಕಚೇರಿಯ ಸಭಾಂಗಣದಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತಾಗಾಯನ ಸ್ಪರ್ಧೆಯನ್ನು ಆಯೋಜನೆ ಮಾಡಲಾಯಿತು. ಶ್ರೀ ಟಿ.ಕೆ ನಾರಾಯಣಸ್ವಾಮಿ, ಎಲ್.ಟಿ. (ಸ್ಕೌ) ಜಿಲ್ಲಾ ತರಬೇತಿ ಆಯುಕ್ತರು, ತೀರ್ಪುಗಾರರಾದ ಶ್ರೀಮತಿ ಪುಷ್ಪಾ, ಶ್ರೀಮತಿ ಬೃಂದಾ, ಕುಮಾರಿ ರಕ್ಷಿತಾ ಭಟ್‌ರವರು ಗೀತಾಗಾಯನ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು. ಶ್ರೀ ಶ್ರೀನಿವಾಸ್ ರೆಡ್ಡಿ, ಅಧ್ಯಕ್ಷರು ಬಸವನಗುಡಿ ಸ್ಥಳೀಯ ಸಂಸ್ಥೆ, ಶ್ರೀ ಅಜಯ್‌ಗೌಡ ಚೇರ್‌ಮನ್, ಬಸವನಗುಡಿ ಕಾರ್ಯಕಾರಿ ಸಮಿತಿ, ಶ್ರೀ ಬಿ.ವಿ. ಶೇಖರ್, ಎ.ಎಲ್.ಟಿ (ಸ್ಕೌ), ಸಹಾಯಕ ಜಿಲ್ಲಾ ಆಯುಕ್ತರು(ಸ್ಕೌ) ಬಸವನಗುಡಿ ಸ್ಥಳೀಯ ಸಂಸ್ಥೆ ಗೀತ ಗಾಯನ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ವಿಜೇತರಿಗೆ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ನೀಡಿ ಪುರಸ್ಕಾರ ಮಾಡಲಾಯಿತು. ಸ್ಪರ್ಧೆಯಲ್ಲಿ 10 ಶಾಲೆಗಳಿಂದ ಒಟ್ಟು 319ಕಬ್–ಬುಲ್, ಸ್ಕೌಟ್ಸ್–ಗೈಡ್ಸ್ ಭಾಗವಹಿಸಿದರು.



* ಬೆಂಗಳೂರು ದಕ್ಷಿಣ ಜಿಲ್ಲೆಯ ದಳಮಟ್ಟದಲ್ಲಿ ಆಗಸ್ಟ್ 15 ರಂದು 78ನೇ ಸ್ವಾತಂತ್ರ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಪಥಸಂಚಲನ, ಹಾಡು ನೃತ್ಯ ಹಾಗೂ ಇನ್ನಿತರ ಕಾರ್ಯಕ್ರಮಗಳ ಮೂಲಕ ದೇಶಪ್ರೇಮ ಮತ್ತು ದೇಶಭಕ್ತಿಯನ್ನು ಸಾರಿದರು.

* ಜುಲೈ 09 ರಿಂದ 15ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್, ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ ಮಾಸ್ಟರ್, ಫ್ಲಾಕ್ ಲೀಡರ್, ರೋವರ್ಸ್ ಸ್ಕೌಟ್ಸ್ ಲೀಡರ್ ಮತ್ತು ರೇಂಜರ್ಸ್ ಲೀಡರ್ ಮೂಲ ತರಬೇತಿ ಮತ್ತು ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ ಮಾಸ್ಟರ್, ಫ್ಲಾಕ್ ಲೀಡರ್ ಮುಂದುವರೆದ ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಯಿತು. ಒಟ್ಟು 10 ಶಿಬಿರದಿಂದ 114 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶಿಬಿರದಲ್ಲಿ ನಾಯಕರುಗಳಾಗಿ ಸ್ಕೌಟ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ನಂಜುಂಡಪ್ಪ ಎಲ್.ಟಿ.(ಸ್ಕೌ), ಗೈಡ್ಸ್ ಕ್ಯಾಪ್ಟನ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಎ.ಎಲ್.ಟಿ. (ಗೈ), ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಮೀನಾಕ್ಷಮ್ಮ, ಎ.ಎಲ್.ಟಿ. (ಫ್ಲಾಕ್), ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಮುನಿನಾರಾಯಣಪ್ಪ, ಎಲ್.ಟಿ.(ಕ), ಸ್ಕೌಟ್ಸ್ ಮಾಸ್ಟರ್ ಮುಂದುವರೆದ ತರಬೇತಿ ಶಿಬಿರಕ್ಕೆ ಡಾ॥ ನಾರಾಯಣ ಸ್ವಾಮಿ, ಎ.ಎಲ್.ಟಿ.(ಸ್ಕೌ), ಗೈಡ್ಸ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಗಾಯತ್ರಿ ಗೌಡ ಜಿ.ಹೆಚ್., ಎಲ್.ಟಿ.(ಗೈ), ಫ್ಲಾಕ್ ಲೀಡರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ಗೌರಬಾಯಿ, ಎಲ್.ಟಿ. (ಫ್ಲಾಕ್), ಕಬ್ ಮಾಸ್ಟರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ಸಂದ್ಯಾರಾಣಿ, ಎಲ್.ಟಿ. (ಕಬ್), ರೋವರ್ಸ್ ಸ್ಕೌಟ್ಸ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಕೃಷ್ಣಸ್ವಾಮಿ ಆರ್., ಎಲ್.ಟಿ. (ರೋ), ರೇಂಜರ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಕೆ.ವಿ ಶಾಮಲ, ಎಲ್.ಟಿ(ಗೈ) ಕಾರ್ಯನಿರ್ವಹಿಸಿದರು.

ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಎಸ್. ಮಧುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, ತರಬೇತಿ, ಜಿಲ್ಲೆಯ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಶಿಬಿರಕ್ಕೆ ಭೇಟಿ ನೀಡಿದರು.

* ಜುಲೈ 15 ರಂದು ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರದ ನಾಯಕರುಗಳಿಗೆ ಮತ್ತು ಸಹ ನಾಯಕರುಗಳಿಗೆ ಪ್ರಮಾಣ ಪತ್ರವನ್ನು ನೀಡಿ

ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ರಾಜ್ಯಮಟ್ಟದ ವೃಕ್ಷಮಣಿದಾರ ತರಬೇತಿಯನ್ನು ಪಡೆದ ದಳನಾಯಕರುಗಳಿಗೆ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ಸ್ ಅವರು ಪ್ರಮಾಣ ಪತ್ರವನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಶಿಬಿರ ನಾಯಕರುಗಳು ಮತ್ತು ಸಹನಾಯಕರುಗಳು, ಜಿಲ್ಲಾ ಪಧಾದಿಕಾರಿಗಳು, ಸೇವಾ ರೋವರ್ಸ್–ರೇಂಜರ್ಸ್‌ಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಜುಲೈ 13 ರಂದು ಶ್ರೀಮತಿ ಪೃಥ್ವಿ ಸಿಂಧ್ಯಾ, ಎ.ಡಿ.ಸಿ. (ಗೈ) ಜಯನಗರ ಸ್ಥಳಿಯ ಸಂಸ್ಥೆ ಇವರು ತರಬೇತಿ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳ ಜೊತೆ ಸಂವಾದ ನಡಿಸಿದರು. ಇದೇ ಸಂದರ್ಭದಲ್ಲಿ ಒಂದು ದಿನದ ಹೊರ ಸಂಚಾರಕ್ಕೆ ಹೊರಟಿದ್ದ ಮುಂದುವರೆದ ತರಬೇತಿ ಶಿಬಿರಾರ್ಥಿಗಳಿಗೆ ಶುಭ ಸಂದೇಶವನ್ನು ನೀಡಿ ಹಸಿರು ನಿಶಾನೆ ನೀಡುವ ಮುಖಾಂತರ ಶುಭಕೋರಿದರು.



* ಜುಲೈ 10 ರಿಂದ 14ರ ವರೆಗೆ ಜಿಲ್ಲಾ ಮಟ್ಟದ ಪಟಾಲಂ ನಾಯಕರುಗಳ ತರಬೇತಿ ಶಿಬಿರವನ್ನು ಡಾ॥ ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಶರತ್‌ರಾಜ್ ಶಿಬಿರದ ನಾಯಕರಾಗಿದ್ದರು. ಶಿಬಿರದಲ್ಲಿ 10 ಶಾಲೆಗಳಿಂದ 61 ಶಿಬಿರಾರ್ಥಿಗಳು ಭಾಗವಹಿಸಿದರು.

* ಜುಲೈ 10 ರಿಂದ 14ರ ವರಗೆ ಮೂರನೇ ಹಂತದ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಪರೀಕ್ಷಾ ಶಿಬಿರವನ್ನು ಡಾ॥ ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂ. ಗ್ರಾಮಾಂತರ ಜಿಲ್ಲೆಯಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಸತೀಶ್, ಹೆಚ್.ಡಬ್ಲ್ಯೂ.ಬಿ. (ಸ್ಕೌ) ಇವರು ಶಿಬಿರದ ನಾಯಕರಾಗಿದ್ದರು. ಶಿಬಿರದಲ್ಲಿ 5 ಶಾಲೆಗಳಿಂದ 45 ಶಿಬಿರಾರ್ಥಿಗಳು ಭಾಗವಹಿಸಿದರು.

* ಜುಲೈ 06 ರಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ದೈಹಿಕ ಶಿಕ್ಷಣಧಿಕಾರಿ, ಬಿ.ಆರ್.ಸಿ. ಗುಚ್ಚ ಸಂಪನ್ಮೂಲ ವ್ಯಕ್ತಿ (ಸಿ.ಆರ್.ಪಿ) ಮತ್ತು ಕ್ಷೇತ್ರ ಸಂಪನ್ಮೂಲ ವ್ಯಕ್ತಿ (ಬಿ.ಆರ್.ಪಿ)ಗಳಿಗೆ ಶ್ರೀ ಕೊಂಡಜ್ಜಿ ಬಸಪ್ಪ ಸಂಭಾಗಣದಲ್ಲಿ ಒಂದು ದಿನದ ಮಾಹಿತಿ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಆಯುಕ್ತರು ವಯಸ್ಕ ಸಂಪನ್ಮೂಲ(ಸ್ಕೌ) ಇವರು ನಾಯಕರಾಗಿದರು. ಶಿಕ್ಷಣಾಧಿಕಾರಿಗಳಿಗೆ ಸ್ಕೌಟಿಂಗ್–ಗೈಡಿಂಗ್ ಬಗ್ಗೆ, 2023–24ನೇ ಸಾಲಿನ ಕಾರ್ಯಕ್ರಮ ಯೋಜನೆಯ ಕಾರ್ಯರೂಪಕ್ಕೆ ತರಲು ತಮ್ಮ ಸಹಕಾರ ನೀಡುವಂತೆ ವಿಸ್ತಾರವಾಗಿ ಸಂವಾದವನ್ನು ಮಾಡಿದರು. ಕಾರ್ಯಗಾರದಲ್ಲಿ ಶ್ರೀ ಪಿ. ಪಳನಿ ಜಿಲ್ಲಾ ಆಯುಕ್ತರು(ಸ್ಕೌ), ಶ್ರೀಮತಿ ಗೌಯತ್ರಿಗೌಡ, ಜಿಲ್ಲಾ ತರಬೇತಿ ಆಯುಕ್ತರು(ಗೈ), ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನ ಆಯುಕ್ತರು (ಸ್ಕೌ), ಶ್ರೀ ನಾಗೇಶ್ ಆರ್. ಶಿವಪುರ್ ರಾಜ್ಯ ತರಬೇತಿ ಆಯುಕ್ತರು (ಸ್ಕೌ), ಶ್ರೀಮತಿ ದ್ರಾಕ್ಷಯಣಿ, ಜಿಲ್ಲಾ ಪದಕ ಕಾರ್ಯದರ್ಶಿ, ಶ್ರೀಮತಿ ಗಾಯತ್ರಿ ಜಿ.ಎ., ಎಲ್.ಟಿ (ಗೈ) ಕಾರ್ಯಗಾರದಲ್ಲಿ ಉಪಸ್ಥಿತರಿದ್ದರು.



ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಆಗಸ್ಟ್ 07 ರಂದು ಜಿಲ್ಲಾ ಮಟ್ಟದ ಸ್ಕೌಟ್ಸ್–ಗೈಡ್ಸ್ ಶಿಕ್ಷಕರ ಕಾರ್ಯಗಾರ ಶಿಬಿರವು ಆರ್.ಟಿ.ನಗರ ಪಬ್ಲಿಕ್ ಸ್ಕೂಲ್ ಇಲ್ಲಿ ನಡೆಸಲಾಯಿತು. ಕಾರ್ಯಗಾರದ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ। ಪ್ರಸನ್ನಕುಮಾರ್ ನೆರವೇರಿಸಿ 2023–24 ಸಾಲಿನ ಜಿಲ್ಲಾ ಮಟ್ಟದ ಉತ್ತಮ ಘಟಕಗಳಿಗೆ ಬಹುಮಾನ ನೀಡಿ ಅಭಿನಂದಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಎಲ್ಲರನ್ನೂ ಸ್ವಾಗತಿಸಿದರು. ಹಿರಿಯರಾದ ಹಾಗೂ ಚಾಮುಂಡಿ ಮುಕ್ತದಳದ ನಾಯಕರಾದ ಶ್ರೀ ನರಸಿಂಹಮೂರ್ತಿ ಪಟಾಲಂ ಪದ್ದತಿಯ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಹೇಮಂತ್ ಕುಮಾರ್, ಸ್ಕೌಟಿಂಗ್ ಗುಣಮಟ್ಟ ಹೆಚ್ಚಿಸುವ ಬಗ್ಗೆ ಮಾಹಿತಿ ನೀಡಿದರು. ಸಮಾವೇಶದಲ್ಲಿ 74 ಸ್ಕೌಟ್ಸ್–ಗೈಡ್ಸ್ ಶಿಕ್ಷಕರು ಭಾಗವಹಿಸಿದರು. ಸಮಾವೇಶದ ನೇತೃತ್ವನ್ನು ಶ್ರೀಮತಿ ಜ್ಯೋತಿರಂಗನಾಥ್ ವಹಿಸಿದ್ದರು. ಸಮಾವೇಶದಲ್ಲಿ 2024–25 ಸಾಲಿನ ಕಾರ್ಯಕ್ರಮ ಯು.ಐ.ಡಿ. ಎಸ್.ಡಿ.ಜಿ. ಗೋಲ್ಸ್ ಬಗ್ಗೆ ಹಾಗು ಇತರ ಮಾಹಿತಿಯನ್ನು ನೀಡಲಾಯಿತು.



* ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಆಗಸ್ಟ್ 08 ರಂದು ಜಿಲ್ಲಾ ಮಟ್ಟದ ಕಬ್ ಬುಲ್‌ಬುಲ್ ಶಿಕ್ಷಕರ ಕಾರ್ಯಗಾರ ಶಿಬಿರವು ಆರ್.ಟಿ. ನಗರ ಪಬ್ಲಿಕ್ ಸ್ಕೂಲ್ ಇಲ್ಲಿ ನಡೆಸಲಾಯಿತು. ಕಾರ್ಯಗಾರದ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ। ಪ್ರಸನ್ನಕುಮಾರ್ ಇವರು ನೇರವೇರಿಸಿ 2023–24 ಸಾಲಿನ ಜಿಲ್ಲಾ ಮಟ್ಟದ ಉತ್ತಮ ಕಬ್–ಬುಲ್‌ಬುಲ್ ಘಟಕಗಳಿಗೆ ಬಹುಮಾನ ನೀಡಿ ಅಭಿನಂದಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಗಾರದ ನಾಯಕರಾಗಿ ಶ್ರೀಮತಿ ಮೇರಿ ಫಿಲೋಮಿನಾ ನಿರ್ವಹಿಸಿದರು. ಶ್ರೀ ವೆಂಕಟೇಶ್ ಇವರು ಕಬ್ ವಿಭಾಗ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. 48 ಕಬ್–ಬುಲ್‌ಬುಲ್ ಶಿಕ್ಷಕರು ಭಾಗವಹಿಸಿದರು.



* ಜುಲೈ 28 ರಂದು ಪೋಷಕರ ದಿನಾಚರಣೆಯನ್ನು ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ದಳ ಮಟ್ಟದಲ್ಲಿ ಪೋಷಕರ ಪಾದಪೂಜೆ ಹಾಗೂ ಸಮವಸ್ತ್ರಧರಿಸಿ ಸ್ಕೌಟ್ಸ್ ವಂದನೆ ಮಾಡಲಾಯಿತು.




* ಜುಲೈ 26 ರಂದು ಕಾರ್ಗಿಲ್ ವಿಜಯ ದಿವಸ್ ಪ್ರಯುಕ್ತ ದಳ ಮಟ್ಟದಲ್ಲಿ ತಮ್ಮ ತಮ್ಮ ಶಾಲಾ ವಠಾರದಲ್ಲಿ ರಾಷ್ಟ್ರ ಧ್ವಜವನ್ನು ಹಿಡಿದು ಘೋಷಣೆ ಕೂಗುತ್ತಾ ಕಾರ್ಗಿಲ್ ವಿಜಯ ದಿವಸ್‌ಅನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.



* ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಬೆಂಗಳೂರು ನಗರ ಅಸುಪಾಸಿನಲ್ಲಿರುವ ಸಾರ್ವಜನಿಕ ಪ್ರತಿಮೆಯ ಸ್ವಚ್ಛತೆಯನ್ನು ಮಾಡಲಾಯಿತು. ಮುಖ್ಯವಾಗಿ ಬಸವಣ್ಣ, ಜವಾಹರಲಾಲ್ ನೆಹರು, ರಾಜೀವ್ ಗಾಂಧಿ, ಕುವೆಂಪು, ಗಾಂಧೀಜಿ ಅವರಂತಹ ಅಪ್ರತಿಮ ವ್ಯಕ್ತಿಗಳ ಪ್ರತಿಮೆಗಳನ್ನು ಸ್ವಚ್ಛಗೊಳಿಸಿ ಗೌರವಸಲ್ಲಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರು ಪ್ರತಿಮೆ ಸ್ವಚ್ಛ ಮಾಡುವ ಸ್ಥಳಕ್ಕೆ ಭೇಟಿ ನೀಡಿ ರೋವರ್–ರೇಂಜರ್‌ರವರ ಕಠಿಣ ಪರಿಶ್ರಮ ಮತ್ತು ಸಮರ್ಪಣೆಯನ್ನು ಶ್ಲಾಘಿಸಿದರು ಮತ್ತು ಅವರ ಪ್ರೋತ್ಸಾಹದ ಮಾತುಗಳು ನಮ್ಮ ನಗರದ ಪ್ರತಿಮೆಗಳನ್ನು ಸ್ವಚ್ಛವಾಗಿ ಮತ್ತು ಅಚ್ಚುಕಟ್ಟಾಗಿ ಇರಿಸುವಲ್ಲಿ ನಮ್ಮ ಪ್ರಯತ್ನಗಳನ್ನು ಮುಂದುವರಿಸಲು ಪ್ರೇರೇಪಿಸಿದರು. ಸತತ ಮೂರು ವರ್ಷಗಳ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.







ಬೆಂಗಳೂರು ಪೂರ್ವ

* ಜುಲೈ 17 ರಂದು ಆನೇಕಲ್‌ನ ಶ್ರೀ ರಾಮ ಕುಟೀರದಲ್ಲಿ ಎನ್.ಎಸ್. ಅಶ್ವಥನಾರಾಯಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯತಪಾಸಣೆ, ನೇತ್ರ ಚಿಕಿತ್ಸೆ ಹಾಗೂ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ಆನೇಕಲ್‌ನ ಡಾ. ಎಸ್. ಗೋಪಾಲರಾಜು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಿಗಣಿಯ ಎಸ್.ಎನ್.ಆರ್.ಸಿ ಕಾಲೇಜು, ಚಂದಾಪುರದ ಸ್ವಾಮಿ ವಿವೇಕಾನಂದ ಗ್ರಾಮಾಂತರ ಪದವಿ ಪೂರ್ವಕಾಲೇಜು ಮತ್ತು ಹೆಬ್ಬಗೋಡಿಯ ಎಸ್.ಎಫ್.ಎಸ್. ಕಾಲೇಜುಗಳ ರೋವರ್ಸ್–ರೇಂಜರ್ಸ್ ಸೇವೆ ಸಲ್ಲಿಸಿದರು.

* ಜುಲೈ 26 ರಂದು ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ಆಶ್ರಯದಲ್ಲಿ ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಯಿತು. ನಗರದ ಅಮರ್ ಜವಾನ್ ಸ್ಮಾರಕದ ಬಳಿ ವೀರ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಿ ಅವರಿಗೆ ನುಡಿ ನಮನಗಳನ್ನು ಸಲ್ಲಿಸಿ ಅಲ್ಲಿಂದ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್, ಜಿಲ್ಲಾ ತರಬೇತಿ ಆಯುಕ್ತ ಶ್ರೀ ಆರ್. ಮುನಿರಾಜು, ಎಸ್.ಜಿ.ವಿ. ಶ್ರೀ ಮನು, ಕಬ್ ಮಾಸ್ಟರ್ ಶ್ರೀ ಲಾರೆನ್ಸ್ ಎ. ಪ್ರದೀಪ್, ಫ್ಲಾಕ್ ಲೀಡರ್ ಶ್ರೀಮತಿ ಬಿ. ಪರಿಮಳ ಹಾಗೂ ಸರಸ್ವತಿ ವಿದ್ಯಾ ಮಂದಿರದ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದರು.



* ಗುಡ್ಡಹಟ್ಟಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಆಶಾ, ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ಡಿ.ಕೆ. ಶಕುಂತಲಾ ನೇತೃತ್ವದಲ್ಲಿ ಸ್ಕೌಟ್, ಗೈಡ್ ವಿದ್ಯಾರ್ಥಿಗಳು ಕಾರ್ಗಿಲ್ ವಿಜಯ ದಿವಸ್ ಆಚರಿಸಿದರು ಇದೇ ವೇಳೆ ಯೋಧರಿಗೆ ಗೌರವ ಸಮರ್ಪಿಸಿ ಚಿತ್ರಕಲಾ ಸ್ಪರ್ಧೆಯನ್ನೂ ಸಹ ಏರ್ಪಡಿಸಿದ್ದರು.

* ಮಂಚನಹಳ್ಳಿಯ ರೈನ್‌ಬೋ ಪಬ್ಲಿಕ್ ಸ್ಕೂಲ್‌ನ ಸ್ಕೌಟ್ ಮಾಸ್ಟರ್ ಶ್ರೀ ವಿ. ಕಿರಣ್ ನೇತೃತ್ವದಲ್ಲಿ ಇದೇ ಶಾಲೆಯಲ್ಲಿ ಕಾರ್ಗಿಲ್ ವಿಜಯ ದಿವಸ್ ಆಚರಿಸಿದರು. ಇದೇ ಸಂದರ್ಭದಲ್ಲಿ ಈ ಶಾಲೆಯಲ್ಲಿ ನೂತನವಾಗಿ ಸ್ಕೌಟ್, ಗೈಡ್ ತಂಡಗಳನ್ನು ಪ್ರಾರಂಭಿಸಿದರು.

* ಸರ್ಜಾಪುರ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ರಾಮಕೃಷ್ಣಯ್ಯ ಹಾಗೂ ಉಪಾಧ್ಯಕ್ಷ ಶ್ರೀ ಎ.ಎಂ. ರಾಜಶೇಖರ್ ನೇತೃತ್ವದಲ್ಲಿ ಸರ್ಜಾಪುರದ ಸರ್ಕಾರಿ ಪ್ರೌಢ ಶಾಲೆ ಹಾಗೂ ಸರ್ಕಾರಿ ಮಾದರಿ ಹೆಣ್ಣು ಮಕ್ಕಳ ಪಾಠ ಶಾಲೆಗಳು ಜಂಟಿಯಾಗಿ ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಯಿತು. ಗೈಡರ್‌ಗಳಾದ ಶ್ರೀಮತಿ ಕೆ.ಎಲ್. ಪ್ರತಿಮಾ, ಶ್ರೀಮತಿ ಜಿ.ಆರ್. ಅಶ್ವಿನಿ, ಸ್ಕೌಟ್ ಮಾಸ್ಟರ್ ಶ್ರೀ ಎಸ್. ಲಿಂಗರಾಜು, ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ಸಿ.ಎಸ್. ಜಯರತ್ನ ಮೊದಲಾದವರು ಉಪಸ್ಥಿತರಿದ್ದರು.

* ದೊಮ್ಮಸಂದ್ರದ ಅರಾ ವಿದ್ಯಾ ನಿಕೇತನ ಶಾಲೆಯ ಗೈಡರ್ ಶ್ರೀಮತಿ ಶಶಿಕಲಾ ರವರ ನೇತೃತ್ವದಲ್ಲಿ, ಜಂತಗೊಂಡನಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆಯ ಫ್ಲಾಕ್ ಲೀಡರ್ ಶ್ರೀಮತಿ ಎನ್. ರೇಖಾ ನೇತೃತ್ವದಲ್ಲಿಯೂ ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಯಿತು.

* ಸರ್ಜಾಪುರದ ನ್ಯೂ ಆಕ್ಸ್ ಫರ್ಡ್ ಸ್ಕೂಲ್‌ನಲ್ಲಿಯೂ ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಯಿತು. ನಿವೃತ್ತ ಯೋಧ ಸುಬೇದಾರ್ ಎಸ್.ಎಂ. ರಾಯ್ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸ್ಕೌಟ್ ಮಾಸ್ಟರ್ ಶ್ರೀ ಎ. ಮುನೇಶ್ ಹಾಗೂ ಕಬ್ ಮಾಸ್ಟರ್ ಶ್ರೀ ಕೆ. ನಂದಕುಮಾರ್ ನೇತೃತ್ವದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಭಾಗವಹಿಸಿದ್ದರು.

* ಬನ್ನೇರುಘಟ್ಟದ ಬ್ಲೂಮಿಂಗ್ ಫ್ಲವರ್ಸ್ ಶಾಲೆಯಲ್ಲಿ ಗೈಡ್ ಕ್ಯಾಪ್ಟನ್ ಶ್ರೀಮತಿ ಬಾಲಜ್ಯೋತಿ ನೇತೃತ್ವದಲ್ಲಿ ಸ್ಕೌಟ್ಸ್, ಗೈಡ್ಸ್ ಕಾರ್ಗಿಲ್ ವಿಜಯ ದಿವಸ್ ಆಚರಿಸಿದರು.

* ವಾಜರಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ಲೇಡಿಕಬ್ ಮಾಸ್ಟರ್ ಶ್ರೀಮತಿ ಬಿ. ಚಾಮುಂಡೇಶ್ವರಿ, ಕೊಪ್ಪಗೇಟ್ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ಸ್ಕೌಟರ್, ಗೈಡರ್‌ಗಳಾದ ಶ್ರೀಮತಿ ವಿ. ಸೌಮ್ಯ, ಶ್ರೀಮತಿ ಎಂ. ರಶ್ಮಿ, ಶ್ರೀಮತಿ ಸಿ. ಬೃಂದರವರ ನೇತೃತ್ವದಲ್ಲೂ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್‌ಗಳು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿ ಕಾರ್ಗಿಲ್ ವಿಜಯ ದಿವಸ್ ಆಚರಿಸಿದರು.

* ಜುಲೈ 31 ರಂದು ಟಿ. ಗೊಲ್ಲಹಳ್ಳಿಯ ಕೆನರಾ ಗುರುಕುಲ ಪಬ್ಲಿಕ್ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಹೆಬ್ಬಗೋಡಿನ ಸ್ಥಳೀಯ ಸಂಸ್ಥೆ ಹಂತದ ದೇಶ ಭಕ್ತಿ ಗೀತೆಗಳ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್, ಕೆನರಾ ಗುರುಕುಲ ಪಬ್ಲಿಕ್ ಶಾಲೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ರಾಜೇಶ್ ಜಿ. ನಾಯಕ್, ಜಂಟೀ ಕಾರ್ಯದರ್ಶಿ ಶ್ರೀಮತಿ ಸುಚಿತ್ರ, ಪ್ರಾಂಶುಪಾಲೆ ಶ್ರೀಮತಿ ಎಸ್. ಲತಾ ಬಾಯಿ, ಸಿ.ಆರ್.ಪಿ. ಶ್ರೀ ವಾಸುದೇವಾಚಾರ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಡಿ.ಆರ್. ಮೋಹನ್‌ರಾವ್, ಖಜಾಂಚಿ ಶ್ರೀ ಕೆ. ದ್ರವ್ಯರಾಜ್, ಸ್ಕೌಟರ್, ಗೈಡರ್‌ಗಳಾದ ಶ್ರೀ ಬ್ಲೈಜ್‌ಜಿಯೋಥಾಮಸ್, ಶ್ರೀಮತಿ ಉಮಾ ಹೆಗಡೆ ಸಂಗೀತ ಶಿಕ್ಷಕರಾದ ಜಿ. ಆನಂದ್, ಎಸ್.ಜಿ.ವಿ. ಮನು ಮೊದಲಾದವರು ಉಪಸ್ಥಿತರಿದ್ದರು.



* ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ದಿನಾಚರಣೆ ಹಾಗೂ ಸ್ಕೌಟ್ಸ್ ಸಂಸ್ಥೆಯ ಸೂರ್ಯೋದಯ ದಿನಾಚರಣೆಯನ್ನು ವಿವಿಧ ಶಾಲಾ ಕಾಲೇಜುಗಳಲ್ಲಿ ಆಚರಿಸಲಾಯಿತು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್‌ಗಳು ಸಮವಸ್ತ್ರ ಧರಿಸಿ ಧ್ವಜಾರೋಹಣ ನೆರವೇರಿಸುವುದು, ಹೊಸ ಸದಸ್ಯರಿಗೆ ಸ್ಕಾರ್ಫ್ ತೊಡಿಸಿ ಸಂಸ್ಥೆಗೆ ಆಹ್ವಾನಿಸುವುದು, ಪ್ರತಿಜ್ಞೆಯನ್ನು ಪುನರುಚ್ಚರಿಸುವುದು ಹೀಗೆ ಹಲವು ರೀತಿಗಳಲ್ಲಿ ದಿನಾಚರಣೆ ಮಾಡಲಾಯಿತು. ಆನೇಕಲ್‌ನ ಸ್ಕೌಟ್ಸ್ ಮತ್ತು ಗೈಡ್ಸ್ ಕಛೇರಿಯಲ್ಲಿ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎನ್. ವೆಂಕಟೇಶ್‌ರವರಿಗೆ ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಹಾಗೂ ಸಹಾಯಕ ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಶ್ರೀ ವಿ. ಪ್ರಕಾಶ್‌ರವರು ಸ್ಕಾರ್ಫ್ ತೊಡಿಸುವ ಮೂಲಕ ಸ್ಕಾರ್ಫ್ ದಿನಾಚರಣೆಯನ್ನು ಆಚರಿಸಿ ಸಂಸ್ಥೆಯ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿ ನೀಡಿದರು. ಎಸ್.ಜಿ.ವಿ. ಮನು ಉಪಸ್ಥಿತರಿದ್ದರು.

* ಆಗಸ್ಟ್ 09 ರಂದು ಸರ್ಜಾಪುರದ ಸರ್ಕಾರಿ ಮಾದರಿ ಹೆಣ್ಣುಮಕ್ಕಳ ಪ್ರಾಥಮಿಕ ಪಾಠ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸರ್ಜಾಪುರ ಸ್ಥಳೀಯ ಸಂಸ್ಥೆ ಹಂತದ ದೇಶ ಭಕ್ತಿ ಗೀತೆಗಳ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್, ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಿ. ಮಂಜೇಗೌಡ, ಸಹಾಯಕ ಜಿಲ್ಲಾ ಆಯುಕ್ತೆ ಶ್ರೀಮತಿ ಬಿ.ಎಸ್. ಪದ್ಮಜಾ, ಉಪಾಧ್ಯಕ್ಷ ಶ್ರೀ ಎ.ಎಂ. ರಾಜಶೇಖರ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಶ್ರೀ ಮಂಜುನಾಥ್, ಮೊದಲಾದವರು ಉಪಸ್ಥಿತರಿದ್ದರು. ಗ್ರಾಮ ಪಂಚಾಯಿತಿ ಸದಸ್ಯೆ ಡಾ. ಕಲಾವತಿ, ಶಿಕ್ಷಕಿಯರಾದ ಶ್ರೀಮತಿ ಜ್ಯೋತಿ ಹಾಗೂ ಶ್ರೀಮತಿ ಆರ್. ನಾಗಶ್ರೀರವರು ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ರಾಮಕೃಷ್ಣಯ್ಯ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.



* ಆಗಸ್ಟ್ 09 ರಂದು ವಿಶ್ವ ಬುಡಕಟ್ಟು ದಿನಾಚರಣೆ ಅಂಗವಾಗಿ ಕೆಂಪು ದೊಮ್ಮಸಂದ್ರದ ನ್ಯೂ ಬಾಲ್ಡ್ ವಿನ್ ಇಂಟರ್ ನ್ಯಾಷನಲ್ ರೆಸಿಡೆನ್ಸಿಯಲ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಬುಡಕಟ್ಟು ಜನರ ವೇಷಧರಿಸಿ ನೃತ್ಯ ಮಾಡುವ ಮೂಲಕ ದಿನಾಚರಣೆಯನ್ನು ಆಚರಿಸಿದರು. ಸ್ಕೌಟ್ ಮಾಸ್ಟರ್ ಶ್ರೀ ಸಿದ್ದಪ್ಪ ಬೂದಿಹಾಳ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಮಂಜುಳ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

* ಸರ್ಜಾಪುರದ ಸೆಂಟ್ ಫಿಲೋಮಿನಾಸ್ ಪ್ರೌಢ ಶಾಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಬುಡಕಟ್ಟು ಜನರ ವೇಷಧರಿಸಿ ನೃತ್ಯ ಮಾಡುವ ಮೂಲಕ ದಿನಾಚರಣೆಯನ್ನು ಆಚರಿಸಿದರು. ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೂ ಈ ದಿನಾಚರಣೆಯ ಮಹತ್ವ ತಿಳಿಸಿ ಬುಡಕಟ್ಟು ಜನರ ಜೀವನಶೈಲಿ ಬಣ್ಣಿಸಿದರು. ಪ್ರಾಂಶುಪಾಲರಾದ ಶ್ರೀಮತಿ ಎಸ್.ಆರ್. ಮಮತ, ಉಪ ಪ್ರಾಂಶುಪಾಲೆ ಶ್ರೀಮತಿ ಬಿ.ಎಸ್. ಪದ್ಮಜಾ, ಗೈಡ್ ಕ್ಯಾಪ್ಟನ್ ಶ್ರೀಮತಿ ಧನಲಕ್ಷ್ಮಿ ಮೊದಲಾದವರು ಉಪಸ್ಥಿತರಿದ್ದರು.

* ಕೊಪ್ಪಗೇಟ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಬುಡಕಟ್ಟು ಜನರ ವೇಷಧರಿಸಿ ನೃತ್ಯ ಮಾಡುವ ಮೂಲಕ ದಿನಾಚರಣೆಯನ್ನು ಆಚರಿಸಲಾಯಿತು. ಸ್ಕೌಟರ್‌ಗಳಾದ ಶ್ರೀಮತಿ ಎಂ. ರಶ್ಮಿ, ಶ್ರೀಮತಿ ಸಿ. ಬೃಂದ, ಗೈಡ್ ಕ್ಯಾಪ್ಟನ್ ಶ್ರೀಮತಿ ವಿ. ಸೌಮ್ಯ ಹಾಗೂ ಶಿಕ್ಷಕ, ಶಿಕ್ಷಕಿಯರು ಭಾಗವಹಿಸಿದ್ದರು.

* ಆಗಸ್ಟ್ 11 ರಂದು ಕರ್ನಾಟಕ ಸರ್ಕಾರದ ಕಾರ್ಯಕ್ರಮದ ಅಂಗವಾಗಿ ನಿಯೋಜಿಸಿದ್ದ ಕನ್ನಡ ಜ್ಯೋತಿ ರಥಯಾತ್ರೆ ಆನೇಕಲ್ ತಾಲ್ಲೂಕಿನಾದ್ಯಂತ ಮೆರವಣಿಗೆ ಮೂಲಕ ಸಾಗಿತು. ಜಿಲ್ಲೆಯ ಸ್ಕೌಟ್ಸ್, ಗೈಡ್ಸ್‌ಗಳು ತಾಲ್ಲೂಕಿನಾದ್ಯಂತ ಸಂಚರಿಸಿದ ಈ ರಥವನ್ನು ಎಲ್ಲೆಡೆ ಸ್ವಾಗತಿಸಿ ಕಾರ್ಯಕ್ರಮದಲ್ಲಿ ಭಾಗಿಗಳಾದರು.

* ಆಗಸ್ಟ್ 15 ರಂದು ಆನೇಕಲ್‌ನ ಸ್ಕೌಟ್ಸ್ ಮತ್ತು ಗೈಡ್ಸ್ ಕಛೇರಿ ಆವರಣದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎನ್. ವೆಂಕಟೇಶ್‌ರವರು ಧ್ವಜಾರೋಹಣ ನೆರವೇರಿಸಿದರು. ಕ್ಷೇತ್ರ ಸಮನ್ವಯಾಧಿಕಾರಿ ಶ್ರೀ ಭಾಸ್ಕರ್, ಇ.ಸಿ.ಒ ಗಳಾದ ಶ್ರೀ ದತ್ತಗುರು, ಶ್ರೀ ನವೀನ್ ಕುಮಾರ್, ಬಿ.ಆರ್.ಪಿ.ಗಳಾದ ಶ್ರೀಮತಿ ರಿಸ್ವಾನಾ, ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್, ಬಿ.ಇ.ಒ ಹಾಗೂ ಬಿ.ಆರ್.ಸಿ. ಕಛೇರಿ ಸಿಬ್ಬಂದಿ ಸೇರಿದಂತೆ ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್‌ಗಳು ಭಾಗವಹಿಸಿದ್ದರು.



* ಆನೇಕಲ್‌ನ ಸರ್ಕಾರಿ ಹೊಸ ಮಾಧ್ಯಮಿಕ ಪಾಠ ಶಾಲೆಯ ಮೈದಾನದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ಅರವಿಂದ ಪ್ರೌಢ ಶಾಲೆ, ಸೆಂಟ್ ಜೋಸೆಫ್ ಪ್ರೌಢ ಶಾಲೆ, ಸರಸ್ವತಿ ವಿದ್ಯಾ ಮಂದಿರ, ಭಗತ್ ಸಿಂಗ್ ಓಪನ್ ಸ್ಕೌಟ್ ಗ್ರೂಪ್‌ಗಳ ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ಸೇವೆ ಸಲ್ಲಿಸಿದರು.

* ತಾಲ್ಲೂಕಿನ ಹೆಬ್ಬಗೋಡಿ ಕೆನರಾ ಗುರುಕುಲ ಪಬ್ಲಿಕ್ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ವತಿಯಿಂದ ದೇಶಭಕ್ತಿ ಗೀತೆಗಳ ಗಾಯನ ಸ್ಪರ್ಧೆ ಆಯೋಜಿಸಲಾಗಿತ್ತು. ತಾಲ್ಲೂಕಿನ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್, ಕೆನರಾ ಗುರುಕುಲ ಪಬ್ಲಿಕ್ ಶಾಲೆ ಸಂಸ್ಥಾಪಕ ಅಧ್ಯಕ್ಷ ಶ್ರೀ ರಾಜೇಶ್, ಜಿ. ನಾಯಕ್, ಸ್ಕೌಟ್ಸ್ ಸಂಸ್ಥೆ ಕಾರ್ಯದರ್ಶಿ ಶ್ರೀ ಡಿ.ಆರ್. ಮೋಹನ್ ರಾವ್, ಖಜಾಂಚಿ ಶ್ರೀ ಕೆ. ದ್ರವ್ಯರಾಜ್, ಶಾಲೆ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಚಿತ್ರ, ಪ್ರಾಂಶುಪಾಲರಾದ ಶ್ರೀಮತಿ ಎಸ್. ಲತಾಬಾಯಿ, ಸಿ.ಆರ್.ಪಿ. ಶ್ರೀ ವಾಸುದೇವಾಚಾರ್, ಸಂಗೀತ ಶಿಕ್ಷಕರಾದ ಶ್ರೀ ಜಿ. ಆನಂದ್, ಶ್ರೀಮತಿ ಕಮಲಾ ದಂಡಗಿ, ಶ್ರೀಮತಿ ಪ್ರಗತಿ ಉಪಾಧ್ಯಾಯ, ಶ್ರೀ ಶರಣಪ್ಪ ಭಾಗವಹಿಸಿದ್ದರು.

ಚಾಮರಾಜನಗರ

* ಜುಲೈ 15 ರಿಂದ 21ರ ವರೆಗೆ ಡಯಟ್ ಸಂಸ್ಥೆ, ಚಾಮರಾಜನಗರದಲ್ಲಿ ಸ್ಕೌಟ್ಸ್ ಮಾಸ್ಟರ್, ಗೈಡ್ ಕ್ಯಾಪ್ಟನ್, ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರಗಳು ಜರುಗಿತು. ಸ್ಕೌಟ್ಸ್ ವಿಭಾಗಕ್ಕೆ ಶ್ರೀ ಕೆ.ಎಸ್. ಮಹಾದೇವಸ್ವಾಮಿ, ಎ.ಎಲ್.ಟಿ. (ಸ್ಕೌ), ಶ್ರೀ ಮೋಹನ್ ಕುಮಾರ್, ಎ.ಎಲ್.ಟಿ.(ಗೈ), ಶ್ರೀ ಬಾಬು, ಎ.ಎಲ್.ಟಿ. (ಕಬ್)ರವರು ನಾಯಕರಾಗಿದ್ದರು. ಒಟ್ಟು 98 ಶಿಕ್ಷಕರಿಗೆ ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ತಾಲ್ಲೂಕಿನಿಂದ ಭಾಗವಹಿಸಿದ್ದರು. ಶ್ರೀರಾಮಚಂದ್ರ ರಾಜೇಅರಸ್, ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಚಾಮರಾಜನಗರ ಹಾಗೂ ಡಯೆಟ್ ಪ್ರಾಂಶುಪಾಲರು ಉದ್ಘಾಟನೆ ಸಮಾರಂಭದಲ್ಲಿ ಹಾಗೂ ಇವರುಗಳ ಜೊತೆಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿ, ತರಬೇತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಡಿಡಿಪಿಐ ಅವರು ಮುಂದಿನ ತಿಂಗಳಲ್ಲಿ ಇನ್ನು ಮೂರು ತಾಲ್ಲೂಕಿನಲ್ಲಿ ಮೂಲ ತರಬೇತಿ ನಡೆಸಲಾಗುವುದೆಂದು ತಿಳಿಸಿದರು. ಗೈಡ್ ವಿಭಾಗಕ್ಕೆ ಕು॥ ಪಿ. ಕಮಲಮ್ಮ,





ಶ್ರೀಮತಿ ವಿ. ದಾಕ್ಷಾಯಿಣಿ ನಾಯಕಿಯಾಗಿದ್ದರು. ಶ್ರೀ ವಿ.ಎಂ. ರಾಮಚಂದ್ರ, ಶ್ರೀ ಜಿಲ್ಲಾ ಕಾರ್ಯದರ್ಶಿ ಕು. ಅಶೋಕ್ ಕುಮಾರ್ ಕೆ.ಪಿ. ವ್ಯವಸ್ಥೆಗೊಳಿಸಿದರು.

* ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಎಂ.ಪಿ.ಎಸ್. ಶಾಲೆ ಚಾಮರಾಜನಗರ, ಚಾಮರಾಜನಗರ ಪೊಲೀಸ್ ಕವಾಯತ್ ಮೈದಾನದಲ್ಲಿ, ವಿವೇಕಾನಂದ ಶಾಲಾ ಶಿಕ್ಷಣ ಸಂಸ್ಥೆ ಹನೂರು ತಾಲ್ಲೂಕು ಮಟ್ಟದ ಕ್ರೀಡಾಂಗಣದಲ್ಲಿ ಎಸ್.ಡಿ.ವಿ.ಎಸ್. ಶಾಲಾ ಶಿಕ್ಷಣ ಸಂಸ್ಥೆ ಯಳಂದೂರು ತಾಲ್ಲೂಕು ಕ್ರೀಡಾಂಗಣದಲ್ಲಿ ಆರ್.ಸಿ.ಎಂ. ಶಾಲೆ ಕೊಳ್ಳೇಗಾಲ, ತಾಲ್ಲೂಕು ಮಟ್ಟದ ಕ್ರೀಡಾಂಗಣದಲ್ಲಿ ಸೇಂಟ್ ಜೋಸೆಫ್ ಶಾಲಾ ಗುಂಡ್ಲುಪೇಟೆ ತಾಲ್ಲೂಕು ಮಟ್ಟದ ಕ್ರೀಡಾಂಗಣದಲ್ಲಿ ಸ್ಕೌಟ್ಸ್–ಗೈಡ್ಸ್ ದಳನಾಯಕರುಗಳು ಪಥಸಂಚಲನದಲ್ಲಿ ಭಾಗವಹಿಸಿ ಪುರಸ್ಕಾರಕ್ಕೆ ಪಾತ್ರರಾದರು.

* ನ್ಯಾಷನಲ್ ಹೈಯರ್ ಪ್ರೈಮರಿ ಶಾಲೆ, ಕೊಳ್ಳೆಗಾಲ ಮಕ್ಕಳು (ಬುಲ್‌ಬುಲ್) ಮಕ್ಕಳು ಬೀಜದ ಉಂಡೆ ತಯಾರಿಸಿ ಪಾರ್ಕ್‌ನಲ್ಲಿ ಚೆಲ್ಲಿದರು. ಶಾಲಾ ಆಡಳಿತ ಮಂಡಳಿಯವರು ಭಾಗವಹಿಸಿದ್ದರು.

* ಎಸ್.ಡಿ.ವಿ.ಎಸ್. ಯಳಂದೂರು, ಜಿ.ಎಚ್.ಪಿ.ಎಸ್. ಶಾಲೆ ಬಾಗಳಿ, ಚಾಮರಾಜನಗರ ಹಾಗೂ ಇನ್ನಿತರ ಶಾಲೆಯಲ್ಲಿ ಸ್ಕಾರ್ಫ್ ಡೇ ಆಚರಿಸಲಾಯಿತು.

* ಸ್ವಾತಂತ್ರ್ಯ ದಿನಾಚರಣೆಯನ್ನು ಆಯಾ ಶಾಲಾ ದಳ ಮಟ್ಟದಲ್ಲಿ ಜಿ.ಎಚ್.ಪಿ.ಎಸ್. ತಮ್ಮಡಹಳ್ಳಿ ಜೆ.ಎಸ್.ಎಸ್. ಹೈಸ್ಕೂಲ್ ಹೊರೆಯಾಲ, ಜಿ.ಹೆಚ್.ಪಿ.ಎಸ್. ಕೆರೆಹಳ್ಳಿಯಲ್ಲಿ ವಿಜೃಂಭಣೆಯಿಂದ ಆಚರಿಸಿದರು.

* ಶ್ರೀಮತಿ ಕೆ.ಬಿ. ಜ್ಯೋತಿ, ಜಿ.ಹೆಚ್.ಪಿ.ಎಸ್. ಶಾಲೆ, ಬಾಗಳಿ, ಚಾಮರಾಜನಗರ ಇವರಿಗೆ ಸೇವಾ ಭಾರತಿ ಶಿಕ್ಷಣ ಸಂಸ್ಥೆ ಚಾಮರಾಜನಗರ ಇವರಿಗೆ ಶಾಲಾ ಆಡಳಿತ ಮಂಡಳಿಯವರು ಸನ್ಮಾನಿಸಿದರು.



* ಶ್ರೀ ಪಿ.ಎಂ. ರಾಮಚಂದ್ರ, ಜಿಲ್ಲಾ ಕಾರ್ಯದರ್ಶಿ ಇವರಿಗೆ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕ, ಚಾಮರಾಜನಗರ ಇವರು ಸನ್ಮಾನಿಸಿದರು.

* ಆಗಸ್ಟ್ 09 ರಂದು ಶ್ರೀ ವಿವೇಕಾನಂದ ಗಿರಿಜನ ಶಾಲೆ, ಬಿಳಿಗಿರಿರಂಗನ ಬೆಟ್ಟ ಯಳಂದೂರು ತಾಲ್ಲೂಕಿನಲ್ಲಿ ವಿಶ್ವ ಬುಡಕಟ್ಟು ಜನಾಂಗ ದಿನಾಚರಣೆಯನ್ನು ಶ್ರೀ ಸುರೇಶ್ ಆಡಳಿತ ಮಂಡಳಿ ಹಿರಿಯ, ಪ್ರೌಢಶಾಲಾ ಮುಖ್ಯಸ್ಥರ ಸಮ್ಮುಖದಲ್ಲಿ ಆಚರಿಸಲಾಯಿತು. ಶ್ರೀ ವಿ.ಎಂ. ರಾಮಚಂದ್ರ, ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ಅನ್ನಪೂರ್ಣಮ್ಮ, ಕು. ಅಶೋಕ್ ಕುಮಾರ್ ಕೆ.ಪಿ.ಡಿ.ಓ. ಕು॥ ಶ್ರೀನಿಧಿ ಯುವ ಸಮಿತಿ ಅಧ್ಯಕ್ಷರು ಭಾಗವಹಿಸಿದ್ದರು.



ಚಿಕ್ಕಬಳ್ಳಾಪುರ


* ಜುಲೈ 19 ರಂದು ಗೌರಿಬಿದನೂರು ಸ್ಥಳೀಯ ಸಂಸ್ಥೆ ವ್ಯಾಪ್ತಿಯ ವಿವೇಕಾನಂದ ಶಾಲೆಯಲ್ಲಿ ನೂತನ ಸ್ಕೌಟ್ ಮತ್ತು ಗೈಡ್ ದಳಗಳ ಉದ್ಘಾಟನೆ ನೇರವೇರಿಸಲಾಯಿತು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಗಿರಿಧರ್, ಕೋಶಾಧಿಕಾರಿ ಲಕ್ಷ್ಮೀ ಹೊನ್ನಪ್ಪ ನಾಯಕ್, ಸಹ ಕಾರ್ಯದರ್ಶಿ ಶ್ರೀ ಸಿದ್ದೇಶ್, ಶ್ರೀಮತಿ ನಾಗಲಕ್ಷ್ಮೀ, ಹಾಗೂ ಇತರ ಪದಾಧಿಕಾರಿಗಳು ಭಾಗವಹಿಸಿದರು ಶಾಲಾ ಮುಖ್ಯ ಶಿಕ್ಷಕರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ರಾಮಪ್ರಸಾದ್ ಕಾರ್ಯಕ್ರಮ ಸಂಘಟಿಸಿದರು.

* ಜುಲೈ 19 ರಂದು ತಾಲ್ಲೂಕು ಆಡಳಿತ, ಆರೋಗ್ಯ ಇಲಾಖೆ, ನಗರಸಭೆ. ಗೌರಿಬಿದನೂರು ಸ್ಥಳೀಯ ಸಂಸ್ಥೆ ಮತ್ತು ಇತರ ಸಂಘಟನೆಗಳ ಸಹಯೋಗದಲ್ಲಿ ಡೆಂಗ್ಯೂ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಹಾಗೂ ಇತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಜುಲೈ 19 ರಿಂದ 22ರವರಿಗೆ ಶ್ರೀ ಯೋಗಿ ನಾರಾಯಣ ಮಠ, ಶ್ರೀ ಕ್ಷೇತ್ರ ಕೈವಾರ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ನಡೆದ ವಿಶ್ವ ವಿಖ್ಯಾತ ಗುರುಪೂಜಾ–ಸಂಗೀತೋತ್ಸವ ಕಾರ್ಯಕ್ರಮದಲ್ಲಿ ನಿರಂತರ 72 ಗಂಟೆಗಳ ಕಾಲ ಸೇವಾ ಶಿಬಿರವನ್ನು. ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಿಂದ ಸುಮಾರು 60 ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದರು. ಈ ಸೇವೆಯನ್ನು ಶ್ರೀಮಠದ ಧರ್ಮಾಧಿಕಾರಿಗಳಾದ ಡಾ. ಎಂ.ಆರ್. ಜಯರಾಂ ರವರು, ಸಂಗೀತೋತ್ಸವ ಸಂಚಾಲಕರಾದ ಶ್ರೀವಾನರಾಶಿ ಬಾಲಕೃಷ್ಣ ಭಾಗವತಾರ್, ಸ್ವಯಂ ಸೇವಕರ ಸಂಚಾಲಕರಾದ ಶ್ರೀ ವೆಂಕಟರಮಣಪ್ಪ ಹಾಗೂ ಶ್ರೀ ಮಠದ ಆಡಳಿತ ಮಂಡಳಿ ಸೇವೆಯನ್ನು ಶ್ಲಾಘಿಸಿ ಶುಭಹಾರೈಸಿದರು. ಸೇವಾ ಶಿಬಿರದ ನಾಯಕತ್ವವನ್ನು ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ., ಕೋಲಾರ ಅವರು ವಹಿಸಿದ್ದರು.

* ಜುಲೈ 25 ರಂದು ಗೌರಿಬಿದನೂರು ತಾಲ್ಲೂಕಿಗೆ ಆಗಮಿಸಿದ "ಕನ್ನಡ ಜ್ಯೋತಿ ರಥಯಾತ್ರೆ" ತಾಲ್ಲೂಕು ಆಡಳಿತದ ಜೊತೆಗೆ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಸ್ವಾಗತ ಮೆರವಣಿಗೆಯಲ್ಲಿ ಭಾಗವಹಿಸಿದರು.



* ಜುಲೈ 26 ರಂದು ಚಿಕ್ಕಬಳ್ಳಾಪುರ ತಾಲ್ಲೂಕಿನ ಜಿ., ಜಿ.ಎಸ್. ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಿ ವೀರ ಯೋಧರಿಗೆ ನಮನ ಸಲ್ಲಿಸಲಾಯಿತು.

* ಜುಲೈ 26 ರಂದು ಗೌರಿಬಿದನೂರು ತಾಲ್ಲೂಕಿನ ಸ.ಹಿ.ಪ್ರಾ. ಶಾಲೆ ಉಚ್ಚೋದನಹಳ್ಳಿ ಇಲ್ಲಿ ಉತ್ಸವ ಸ್ಕೌಟ್ ಘಟಕದ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಿ ವೀರ ಯೋಧರಿಗೆ ನಮನ ಸಲ್ಲಿಸಲಾಯಿತು.

* ಜುಲೈ 26 ರಂದು ಚಿಕ್ಕಬಳ್ಳಾಪುರ ತಾಲ್ಲೂಕಿನ ಸ.ಹಿ.ಪ್ರಾ. ಶಾಲೆ, ಹಿರಿಯಣ್ಣನಹಳ್ಳಿ ಇಲ್ಲಿ ಗೈಡ್ ಘಟಕದ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಿ ವೀರ ಯೋಧರಿಗೆ ನಮನ ಸಲ್ಲಿಸಲಾಯಿತು.

* ಜುಲೈ 26 ರಂದು ಚಿಕ್ಕಬಳ್ಳಾಪುರ ತಾಲ್ಲೂಕಿನ ಎನ್.ಸ.ಹಿ.ಪ್ರಾ. ಶಾಲೆ, ಸ್ಕೌಟ್ ಗೈಡ್ ಘಟಕದ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಿ ವೀರ ಯೋದರಿಗೆ ನಮನ ಸಲ್ಲಿಸಲಾಯಿತು.



* ಜುಲೈ 26 ರಂದು ಚಿಕ್ಕಬಳ್ಳಾಪುರ ಮತ್ತು ಸ್ಥಳೀಯ ಸಂಸ್ಥೆ ಹಾಗೂ ದಿನ ಪ್ರೀತಿ ಪಬ್ಲಿಕ್ ಶಾಲೆ ಚಿಂತಾಮಣಿ ಸಹಯೋಗದಲ್ಲಿ "ಸೈನಿಕರಿಗೆ ಸಲಾಮ್" ಕಾರ್ಯಕ್ರಮದ ಅಂಗವಾಗಿ "ಕಾರ್ಗಿಲ್ ವಿಜಯೋತ್ಸವ" ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ರಕ್ಷಣಾ ಇಲಾಖೆಯ ನಿವೃತ್ತ ಅಧಿಕಾರಿ ಶ್ರೀ ರುಶೀಶ್ವರ್ ರೆಡ್ಡಿರವರು ಕಾರ್ಯಕ್ರಮ ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಕಾರ್ಗಿಲ್ ವಿಜಯೋತ್ಸವ ಕುರಿತು ವಿಶೇಷ ಉಪನ್ಯಾಸ ನೀಡಿದರು. ನಂತರ ಶ್ರೀಯುತರನ್ನು ಗೌರವಪೂರ್ವಕವಾಗಿ ಅಭಿನಂದಿಸಲಾಯಿತು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಆಡಳಿತಾಧಿಕಾರಿಗಳಾದ ಶ್ರೀ ದೀಪಕ್ ರೆಡ್ಡಿರವರು ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ., ಕೋಲಾರ, ಶಾಲೆಯ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಸೌಜನ್ಯ ರವರು, ಸ್ಕೌಟ್ ಮಾಸ್ಟರ್ ಶ್ರೀ ನಾರಾಯಣಸ್ವಾಮಿ, ಶ್ರೀ ಮುನಿರಾಜು, ಕಬ್ಸ್, ಸ್ಕೌಟ್ಸ್ ಹಾಗೂ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದರು.

* ಜುಲೈ 26 ರಂದು ಮೊರಾರ್ಜಿ ವಸತಿ ಶಾಲೆ, ಕೊಲುಮೇನಹಳ್ಳಿ ಚಿಕ್ಕಬಳ್ಳಾಪುರ ಇಲ್ಲಿ ಕಾರ್ಗಿಲ್ ವಿಜಯೋತ್ಸವದ ಪ್ರಯುಕ್ತ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ದೆ ಮತ್ತು ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು.

* ಜುಲೈ 28 ರಂದು ವಿಶ್ವ ಪೋಷಕರ ದಿನಾಚರಣೆ ಪ್ರಯುಕ್ತ ವಿದ್ಯಾರ್ಥಿಗಳು ವಿವಿಧ ಕಾರ್ಯಕ್ರಮಗಳಲ್ಲಿ ಭಾವಗಹಿಸಿ ಪೋಷಕರಿಗೆ ಗೌರವ ವಂದನೆ ಸಲ್ಲಿಸುವ ಮೂಲಕ ಮತ್ತು ವಂಶ ವೃಕ್ಷ ಪ್ರದರ್ಶನ ಕಾರ್ಯಕ್ರಮ ಮಾಡಲಾಯಿತು.

* ಆಗಸ್ಟ್ 01 ರಂದು ಜಿಲ್ಲಾ ಸಂಸ್ಥೆ ಚಿಕ್ಕಬಳ್ಳಾಪುರ ಮತ್ತು ಸ್ಥಳೀಯ ಸಂಸ್ಥೆ ಹಾಗೂ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ನಂದಿ, ಸಂಯುಕ್ತ ಆಶ್ರಯದಲ್ಲಿ ವಿಶ್ವ ಸ್ಕೌಟ್ ಸ್ಕಾರ್ಫ್ ದಿನಾಚರಣೆ ಮತ್ತು ಸ್ಕೌಟಿಂಗ್ ಸೂರ್ಯೋದಯ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯ ಶಿಕ್ಷಕರಾದ ಶ್ರೀ ಶ್ರೀನಿವಾಸರವರು



ವಹಿಸಿದರು. ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ., ಕೋಲಾರ ಅವರು ಸ್ಕೌಟ್ ಸ್ಕಾರ್ಫ್ ದಿನ ಮತ್ತು ಸೂರ್ಯೋದಯ ದಿನಾಚರಣೆಯ ಮಹತ್ವ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮಾಹಿತಿ ನೀಡಿದರು ಮತ್ತು ಸ್ಕೌಟ್ ಗೈಡ್ ಪ್ರತಿಜ್ಞೆ ಬೋಧಿಸಿದರು. ಈ ಸಂದರ್ಭದಲ್ಲಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ನಾರಾಯಣಸ್ವಾಮಿ, ಗೈಡ್ ಕ್ಯಾಪ್ಟನ್ ಶ್ರೀಮತಿ ಚಂದ್ರಕಲಾ, ಕೆ.ವಿ ಮಹಾವಿದ್ಯಾಲಯದ ಪ್ರಾಂಶುಪಾಲರು, ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರು ಸದಸ್ಯರುಗಳು ಹಾಗೂ ಶಾಲೆಯ ಶಿಕ್ಷಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ಸ್ಕೌಟ್ಸ್ ಗೈಡ್ಸ್‌ಗಳು, ಸೇರಿದಂತೆ ವಿವಿಧ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದರು. ಇದೇ ದಿನ ವಿವಿಧ ಅಧಿಕಾರಿಗಳಿಗೆ ಸ್ಕಾರ್ಫ್ ಧರಿಸಿ ಮಾಹಿತಿ ನೀಡಲಾಯಿತು.

* ಆಗಸ್ಟ್ 01 ರಂದು ಗೌರಿಬಿದನೂರು ಸ್ಥಳೀಯ ಸಂಸ್ಥೆಯ ವತಿಯಿಂದ ವಿಶ್ವ ಸ್ಕೌಟ್ ಸ್ಕಾರ್ಫ್ ದಿನಾಚರಣೆ ಮತ್ತು ಸ್ಕೌಟಿಂಗ್ ಸೂರ್ಯೋದಯ ದಿನಾಚರಣೆಯನ್ನು ಆಚರಿಸಲಾಯಿತು. ಮಾನ್ಯ ತಹಶೀಲ್ದಾರ್ ಶ್ರೀ ಮಹೇಶ್ ಎಸ್. ಪತ್ರಿರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು, ಇದೇ ದಿನ ಜಿಲ್ಲೆಯ ಬಿ.ಜಿ.ಎಸ್. ವರ್ಲ್ಡ್ ಶಾಲೆ, ಬಿ.ಜಿ.ಎಸ್ ಇಂಗ್ಲೀಷ್ ಶಾಲೆ, ಎನ್.ಹೆಚ್.ಪಿ.ಎಸ್. ಶಾಲೆ, ನವೋದಯ ಶಾಲೆ, ವಿವೇಕಾನಂದ ಶಾಲೆ, ಜಿ.ಹೆಚ್.ಪಿ.ಎಸ್. ಕತರಿಗುಪ್ಪೆ, ಹಾಗೂ ವಿವಿಧ ಶಾಲೆಗಳಲ್ಲಿ ಆಚರಿಸಲಾಯಿತು.

* ಆಗಸ್ಟ್ 02 ರಂದು ಗೌರಿಬಿದನೂರು ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಸರ್ಕಾರಿ ಎಸ್.ಎಸ್.ಎ ಪದವಿ ಪೂರ್ವ ಕಾಲೇಜು ಗೌರಿಬಿದನೂರಿನಲ್ಲಿ ನೂತನ ರೋವರ್ಸ್‌ಗಳಿಗೆ ಮಾಹಿತಿ ಕಾರ್ಯಾಗಾರ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ಸಿದ್ದೇಶ್ವರರವರು, ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ., ಕೋಲಾರ, ಹಾಗೂ ರೋವರ್ ನೋಡಲ್ ಅಧಿಕಾರಿ ಶ್ರೀ ವಿರೂಪಾಕ್ಷಪ್ಪ ರವರು ಮಾಹಿತಿ ನೀಡಿ ಮುಂದಿನ ಕಾರ್ಯಕ್ರಮಗಳು, ಶಿಬಿರಗಳು, ಮುಂತಾದವುಗಳ ಬಗ್ಗೆ ತಿಳಿಸಿದರು.



* ಆಗಸ್ಟ್ 06 ರಂದು ಸಾಯಿರಾಂ ಇಂಟರ್ ನ್ಯಾಷನಲ್ ಶಾಲೆ, ಸ್ಟೇಟ್ ಬೋರ್ಡ್, ಐ.ಸಿ.ಎಸ್.ಸಿ, ಸಿ.ಬಿ.ಎಸ್.ಸಿ ಶಾಲೆ, ಜೊಕ್ಕಹಳ್ಳಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಪ್ರಾರಂಭಿಸುವ ಬಗ್ಗೆ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್, ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀರವರು ಹಾಗೂ ಇತರರು ಹಾಜರಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ನಾರಾಯಣಸ್ವಾಮಿ, ಜಿಲ್ಲಾ ಸಂಘಟಕ. ವಿಶ್ವನಾಥ ವಿ., ಕೋಲಾರ ರವರು ಭಾಗವಹಿಸಿ ಮಾಹಿತಿ ನೀಡಿದರು.

* ಆಗಸ್ಟ್ 15 ರಂದು ಸ್ಕೌಟ್ ಕಛೇರಿ, ಚಿಕ್ಕಬಳ್ಳಾಪುರ ಇಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಧ್ವಜಾರೋಹಣವನ್ನು ಡಯಟ್ ಉಪನಿರ್ದೇಶಕರು ಹಾಗೂ ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಮುನಿಕೆಂಪೇಗೌಡರವರು ಚಾಲನೆ ನೀಡಿದರು. ಶಾಲಾ ಶಿಕ್ಷಣ ಇಲಾಖೆ ಚಿಕ್ಕಬಳ್ಳಾಪುರ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಿಕ್ಕಬಳ್ಳಾಪುರ, ಭಾರತ್ ಸೇವಾದಳ ಸಹಯೋಗದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಧ್ವಜಾರೋಹಣವನ್ನು ಉಪನಿರ್ದೇಶಕರಾದ ಶ್ರೀ ಬೈಲಾಂಜನಪ್ಪರವರು ನೇರವೇರಿಸಿದರು. ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಇಲ್ಲಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಧ್ವಜಾರೋಹಣವನ್ನು ನೇರವೇರಿಸಲಾಯಿತು, ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು. ಈ ಸಂದರ್ಭದಲ್ಲಿ ಉಪನಿರ್ದೇಶಕರು, ಡಯಟ್, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಸಿಬ್ಬಂದಿ, ಜಿಲ್ಲಾ ಸಂಘಟಕರು, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ಇತರೆ ವಿದ್ಯಾರ್ಥಿಗಳು ಭಾಗವಹಿಸಿದರು.

* ಆಗಸ್ಟ್ 15 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂದಿ ಹಾಗೂ ಸ್ಥಳೀಯ ಸಂಸ್ಥೆ ಚಿಕ್ಕಬಳ್ಳಾಪುರ ವತಿಯಿಂದ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು.

* ಆಗಸ್ಟ್ 15 ರಂದು ಬಿ.ಜಿ.ಎಸ್ ಇಂಗ್ಲೀಷ್ ಶಾಲೆ, ಆಗಲಗುರ್ಕಿ ಚಿಕ್ಕಬಳ್ಳಾಪುರ ವತಿಯಿಂದ 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತ್ತು. ಸುಮಾರು 200 ಹೆಚ್ಚು ಕಬ್, ಬುಲ್, ಬುಲ್ ಸ್ಕೌಟ್ಸ್, ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದರು.

* ಆಗಸ್ಟ್ 15 ರಂದು ಸರ್ಕಾರಿ ಪ್ರೌಢಶಾಲೆ ಜಂಗಮಕೋಟೆ, ಶಿಡ್ಲಘಟ್ಟ ತಾಲೂಕು ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯತಿ ಅಧಿಕಾರಿಗಳಿಂದ ಧ್ವಜಾರೋಹಣ ಕಾರ್ಯಕ್ರಮವನ್ನು ನಡೆಸಲಾಯಿತು ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಕೆ.ಹೆಚ್. ಪ್ರಸನ್ನಕುಮಾರ್‌ರವರು ಗ್ರಾಮ ಪಂಚಾಯಿತಿ ಸದಸ್ಯರುಗಳು ಜಿಲ್ಲಾ ಕಾರ್ಯದರ್ಶಿ ಶ್ರೀ ಪಿ.ಬಿ. ಪ್ರಕಾಶ್‌ರವರು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಶಾಲೆಯ ನೇತಾಜಿ ಸುಭಾಷ್ ಚಂದ್ರ ಬೋಸ್ ದಳದ ವತಿಯಿಂದ ಊರಿನ ಬೀದಿಗಳಲ್ಲಿ ಪಥಸಂಚಲವನ್ನು ನಡೆಸಲಾಯಿತು.



ದಾವಣಗೆರೆ

* ಜುಲೈ 18 ರಂದು ಡಿ.ಆರ್.ಎಂ ಸ್ಕೌಟ್ ಭವನದಲ್ಲಿ ಮೈಸೂರು ಸಂಸ್ಥಾನದ 25ನೇ ಮಹಾರಾಜ, ಮೊದಲ ಚೀಫ್ ಕಬ್ ಆಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ 106ನೇ ಜನ್ಮ ದಿನಾಚರಣೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘರಾಜೇಂದ್ರ ಜೆ.ಚಿಗಟೇರಿ ಇವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ.ಎಂ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸುಖವಾಣಿ ಜಿಲ್ಲಾ ಸಹಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ.ಜೆ, ಎಸ್.ಜಿ.ವಿ, ಶ್ರೀ ಕಿರಣ್ ಕುಮಾರ್, ಜಿಲ್ಲಾ ಸಹಾಯಕ ಆಯುಕ್ತರು ಉಪಸ್ಥಿತರಿದ್ದರು.



* ಜುಲೈ 23 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ 2023–2024ನೇ ಸಾಲಿನ ಜಿಲ್ಲಾ ಪುರಸ್ಕಾರ ಕಬ್, ಬುಲ್‌ಬುಲ್, ಸ್ಕೌಟ್, ಗೈಡ್, ರೋವರ್ ಮತ್ತು ರೇಂಜರ್ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಆರ್.ಡಿ. ಬದ್ರಿನಾಥ್ ಜಿಲ್ಲಾ ಉಪಾಧ್ಯಕ್ಷರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಪಿ.ಎನ್. ಲೋಕೇಶ್ ಜಿಲ್ಲಾ ಅಪರ ಜಿಲ್ಲಾಧಿಕಾರಿಗಳು ಭಾಗವಹಿಸಿ ಪ್ರಶಸ್ತಿ ಪ್ರಧಾನ ಮಾಡಿದರು. ಶ್ರೀ ಹೆಚ್.ಬಿ. ಮಂಜುನಾಥ್ ಜಿಲ್ಲಾ ಉಪಾಧ್ಯಕ್ಷರು ಸ್ಕೌಟಿಂಗ್ ಗೈಡಿಂಗ್ ಇತಿಹಾಸ, ದಾವಣಗೆರೆ ಜಿಲ್ಲೆಯ ಸ್ಕೌಟಿಂಗ್ ಗೈಡಿಂಗ್ ಚಟುವಟಿಕೆಗಳ ಬಗ್ಗೆ ಸ್ವಾರಸ್ಯಕರವಾಗಿ ಮಾತನಾಡಿದರು. ಶ್ರೀ ಕೊಟ್ರೇಶ್ ಜಿ., ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಶ್ರೀ ಕರಿಸಿದ್ದಪ್ಪ ಎಸ್.ಜಿ., ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಮುರುಘರಾಜೇಂದ್ರ ಜೆ.ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ಸ್ವಾಗತ ಕೋರಿದರು. ಶ್ರೀ ಎ.ಪಿ. ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು ವಂದನಾರ್ಪಣೆ ಸಲ್ಲಿಸಿದರು. ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ.ಎಂ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಡಿ. ಹಾಲಪ್ಪ ಜಿಲ್ಲಾ ತರಬೇತಿ ಆಯುಕ್ತರು, ಸ್ಕೌಟ್, ಶ್ರೀಮತಿ ತುಳಸಾಮಣಿ ಜಿಲ್ಲಾ ತರಬೇತಿ ಆಯುಕ್ತರು ಗೈಡ್, ಸಹಾಯಕ ಆಯುಕ್ತರುಗಳಾದ ಶ್ರೀ ಹಾಲಪ್ಪ, ಶ್ರೀ ಅಶೋಕ್ ಕುಮಾರ್, ಡಾ.ಶಶಿಧರ್, ಶ್ರೀ ಎನ್.ಕೆ. ಕೊಟ್ರೇಶ್, ಶ್ರೀ ಎಸ್. ಶಂಕರ್ ನಾಯ್ಕ್, ಶ್ರೀ ನೂರುಲ್ಲಾ ಹಾಗೂ ಶ್ರೀಮತಿ ಆರ್. ಸುಖವಾಣಿ ಜಿಲ್ಲಾ ಸಹ ಕಾಯದರ್ಶಿಗಳು, ಶ್ರೀ ಹೆಚ್.ಎಸ್. ಸಿದ್ದೇಶ್ ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ, ಶ್ರೀ ಮುಸ್ತಫ ರಾಜ್, ಶ್ರೀ ನವೀನ್, ಶ್ರೀ ದೀಪಕ್, ಕುಮಾರಿ ರಾಧಿಕ ಆರ್.ಹೆಚ್., ಯುವ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು. ವಿವಿಧ ಶಾಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ಸ್ಕೌಟರ್ಸ್ ಗೈಡರ್ಸ್‌ಗಳು ಕಾಲೇಜಿನ ರೋವರ್ಸ್ ರೇಂಜರ್ಸ್‌ಗಳು ಹಾಗೂ ರೋವರ್ ಸ್ಕೌಟ್ ಲೀಡರ್ ರೇಂಜರ್ ಲೀಡರ್ಸ್‌ಗಳು ಭಾಗವಹಿಸಿದ್ದರು.

* ಜುಲೈ 24 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಶ್ರೀತ್ರೀಶ್ರೀ ಶಿವಲಿಂಗೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರೋವರ್ಸ್ ಮತ್ತು ರೇಂಜರ್ಸ್‌ಗಳು ಡಾ॥ ಶಕುಂತಲಾ ರೇಂಜರ್ ಲೀಡರ್ ಇವರ ಮಾರ್ಗದರ್ಶನದಲ್ಲಿ 6 ತಿಂಗಳುಗಳ ಕಾಲ ವಾರಕ್ಕೊಮ್ಮೆ ಹಳ್ಳಿಗೆ ಭೇಟಿ ನೀಡಿ ಆರೋಗ್ಯದ ಅರಿವು ಮತ್ತು ಸ್ವಚ್ಛತೆಯ ಬಗ್ಗೆ ಹಾಗೂ ಅನೇಕ ಕಾಯಿಲೆಗಳ ಬಗ್ಗೆ ಡಿಹೆಚ್‌ಓ ಹಾಗೂ ಆಶಾ ಕಾರ್ಯಕರ್ತೆಯರ ಸಹಕಾರದಿಂದ ಹಕ್ಕಿಪಿಕ್ಕಿ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭೇಟಿ ನೀಡಿ ಡೆಂಗ್ಯೂ ಜ್ವರದ ಬಗ್ಗೆ ಮಾಹಿತಿ ನೀಡಿದರು.

* ಜುಲೈ 25 ರಂದು ಹರಿಹರ ಸ್ಥಳೀಯ ಸಂಸ್ಥೆಯ ವಿದ್ಯಾದಾಯಿನಿ ಶಾಲೆಯ ವಿದ್ಯಾರ್ಥಿಗಳಿಗೆ ಹೌಸ್ ಸೆರೆಮನಿಯನ್ನು ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಶಿಸ್ತು ಮತ್ತು ಸಮಯದ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ರಘುನಾಥ್ ವಹಿಸಿದ್ದರು, ಶ್ರೀಮತಿ ಕವಿತಾ, ಲೇಡಿ ಸ್ಕೌಟ್ ಮಾಸ್ಟರ್, ಶ್ರೀಮತಿ ಶಾಂತಭಟ್, ಗೈಡ್ ಕ್ಯಾಪ್ಟನ್, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಜಯಲಕ್ಷ್ಮಿ ಮುಖ್ಯೋಪಾಧ್ಯಾಯರು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಮತ್ತು ಶಾಲಾ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

* ಜುಲೈ 27 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆಯಲ್ಲಿ "ಕಾರ್ಗಿಲ್ ದಿವಸ್" ಆಚರಿಸಲಾಯಿತು. ಶಾಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಮಕ್ಕಳಿಗೆ ಕಾರ್ಗಿಲ್ ವಿಜಯೋತ್ಸವದ ಮಹತ್ವವನ್ನು ತಿಳಿಸಲಾಯಿತು. ಇದೇ ಶಾಲೆಯಲ್ಲಿ ವಾರ್ಡನ್ ಮತ್ತು ದೈಹಿಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಶಿವಾಜಿಯವರು ಸೇನೆಯಿಂದ ನಿವೃತ್ತರಾಗಿದ್ದು, ಇವರನ್ನು ಸನ್ಮಾನಿಸುವ ಮೂಲಕ ದೇಶದ ಎಲ್ಲಾ ಸೈನಿಕರಿಗೆ ನಮನವನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ನಿರ್ದೇಶಕರಾದ ಶ್ರೀಮತಿ ಪ್ರಣೀತ ಗಿರಿರಾಜ್, ಕೋ. ಆರ್ಡಿನೇಟರ್ ಶ್ರೀ ಸೋಮಶೇಖರಪ್ಪ, ಮುಖ್ಯ ಶಿಕ್ಷಕರಾದಂತಹ ಶ್ರೀ ವೀರಪ್ಪ, ಸ್ಕೌಟ್ ಮಾಸ್ಟರ್ ರವೀಂದ್ರಸ್ವಾಮಿ, ಸೋಮ್ಲಾ ನಾಯಕ್, ಗೈಡ್ ಕ್ಯಾಪ್ಟನ್ ಶ್ರೀಮತಿ ರಜನಿ.ಹೆಚ್.ಎಂ, ಶ್ರೀಮತಿ ಭಾವನಕೆ ಮತ್ತು ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.



* ಜುಲೈ 28 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಪೋಷಕರ ದಿನಾಚರಣೆಯನ್ನು ಆಚರಿಸಲಾಯಿತು. ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್ ಮಕ್ಕಳು ಪೋಷಕರ ಪಾದಪೂಜೆ ಮಾಡಿ ಕೃಪಾಶೀರ್ವಾದಕ್ಕೆ ಪಾತ್ರರಾದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಮಹೇಶ್‌ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

* ಆಗಸ್ಟ್ 01 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಸ್ಕೌಟಿಂಗ್ ಸೂರ್ಯೋದಯ ದಿನ ಹಾಗೂ ಸ್ಕಾರ್ಫ್ ದಿನವನ್ನು ಆಚರಿಸಲಾಯಿತು. ಗೈಡ್ ವಿದ್ಯಾರ್ಥಿನಿ ಮಾನಸ ಆರ್.ಎಂ., ಶ್ರೇಯ ಎಸ್.ಎಂ., ಸ್ಕಾರ್ಫ್ ಡೇ ದಿನದ ವಿಶೇಷತೆಯನ್ನು ಹಾಗೂ ಸ್ಕೌಟ್ ಸ್ಕಾರ್ಫ್‌ನ ಮಹತ್ವವನ್ನು ವಿವರಿಸಿದರು. ಜಿಲ್ಲಾ

ಸಹಾಯಕ ಆಯುಕ್ತರಾದ ಶ್ರೀಮತಿ ರೇಖಾರಾಣಿ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಉಪಸ್ಥಿತರಿದ್ದರು.

* ಆಗಸ್ಟ್ 01 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಆರ್.ವಿ.ಜಿ.ಕೆ ಶಾಲೆ ಮತ್ತು ಶ್ರೀ ಸಿದ್ದೇಶ್ವರ ಶಾಲೆ ಆನಗೋಡು ಶಾಲೆ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆ, ಹರಿಹರ ಸ್ಥಳೀಯ ಸಂಸ್ಥೆಯ ಕಾಳಿದಾಸ ಪ್ರೌಢಶಾಲೆ, ಸೈಂಟ್ ಮೇರಿಸ್ ಶಾಲೆಯಲ್ಲಿ "ಸ್ಕಾರ್ಫ್ ಡೇ" ಅನ್ನು ಆಚರಿಸಲಾಯಿತು.



* ಆಗಸ್ಟ್ 01 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಸ್ಕಾರ್ಫ್ ಡೇ ಮತ್ತು ಸೂರ್ಯೋದಯ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ರವರು ಸ್ಕಾರ್ಫ್ ಡೇ ದಿನದ ವಿಶೇಷತೆಯನ್ನು ಹಾಗೂ ಮಹತ್ವವನ್ನು ವಿವರಿಸಿದರು. ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಎ.ಪಿ.ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಆರ್. ಸುಖವಾಣಿ ಜಿಲ್ಲಾ ಸಹ ಕಾರ್ಯದರ್ಶಿಗಳು, ಶ್ರೀ ಹಾಲಪ್ಪ, ಶ್ರೀ ಕಿರಣ್‌ಕುಮಾರ್ ಜಿಲ್ಲಾ ಸಹಾಯಕ ಆಯುಕ್ತರು ಸ್ಕೌಟ್, ಶ್ರೀ ಜೆ.ಎಸ್. ವಿಜಯ್ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಉಪಸ್ಥಿತರಿದ್ದರು.



* ಆಗಸ್ಟ್ 03 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಯದೇವಯ್ಯ ಇವರು ವಹಿಸಿದ್ದರು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ರತ್ನ.ಎಂ ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಶ್ರೀಮತಿ ಅಶ್ವಿನಿ ಜೆ., ಎಸ್.ಜೆ.ವಿ. ಭಾಗವಹಿಸಿದ್ದರು.

* ಆಗಸ್ಟ್ 04 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ಶ್ರೀ ತರಳಬಾಳು ರೆಸಿಡೆನ್ಸಿಯಲ್ ಶಾಲೆಯಲ್ಲಿ ಬೆಂಕಿ ರಹಿತ ಅಡುಗೆಯನ್ನು ಸ್ಕೌಟ್ ಗೈಡ್, ಕಬ್ ಮತ್ತು ಬುಲ್‌ಬುಲ್ ಮಕ್ಕಳಿಂದ ತಯಾರಿಸುವ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥರಾದ ಶ್ರೀ ರವಿಕುಮಾರ್, ಶ್ರೀ ಉಮೇಶ್ ಭಾಗವಹಿಸಿದ್ದರು. ಸ್ಕೌಟ್ ಮಾಸ್ಟರ್‌ಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಶ್ರೀ ಶಶಿಕುಮಾರ್, ಗೈಡ್ ಕ್ಯಾಪ್ಟನ್‌ಗಳಾದ ಶ್ರೀಮತಿ ರಜಿನಿ ಹೆಚ್.ಎಂ., ಶ್ರೀಮತಿ ಅನಿತಾ ಶ್ರೀಮತಿ ಸುಜಾತ ಉಪಸ್ಥಿತರಿದ್ದರು.


ಕಾರವಾರ (ಉ.ಕ.)

* ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ದಿನದ ಅಂಗವಾಗಿ ಜಿಲ್ಲಾ ಸಂಸ್ಥೆ, ಕಾರವಾರ ಇವರಿಂದ ಹೊನ್ನಾವರ ಕಚೇರಿಯಲ್ಲಿ ವಿಶ್ವ ಸ್ಕಾರ್ಫ್ ದಿನವನ್ನು ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಕಾರವಾರ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಜಿ.ಜಿ. ಸಭಾಹಿತರವರು ಮಾತನಾಡಿ ವಿಶ್ವ ಸ್ಕಾರ್ಫ್ ದಿನದ ಆಚರಣೆಯ ಬಗ್ಗೆ ತಿಳಿಸಿದರು. ಈ ದಿನದ ಮಹತ್ವವನ್ನು ಹಾಗೂ ಸ್ಕೌಟ್ ಮತ್ತು ಗೈಡ್ಸ್‌ನ ಪ್ರತಿಜ್ಞಾ ವಿಧಿಯನ್ನು ಎಲ್.ಟಿ(ಗೈ), ಎ.ಎಸ್.ಓ.ಸಿ.ರವರಾದ ಶ್ರೀಮತಿ ಭಾರತಿ ಡಾಯಸ್‌ರವರು ಬೋಧಿಸಿದರು. ಜಿಲ್ಲಾ ಖಜಾಂಚಿ ಶ್ರೀ ಜಿ.ಆರ್. ಮಡಿವಾಳರವರು ಸ್ವಾಗತಿಸಿದರು. ವಂದನೆಯನ್ನು ಜಿಲ್ಲಾ ಕಾರ್ಯಾದರ್ಶಿ ಶ್ರೀ ಆರ್.ಟಿ. ಹೆಬ್ಬಾರರವರು ನಿರ್ವಹಿಸಿದರು ಕಾರ್ಯಕ್ರಮದಲ್ಲಿ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಎಂ.ಎನ್. ಗೌಡ, ಎ.ಎಲ್.ಟಿ. ಶ್ರೀಮತಿ ಶಾರದಾ ಹೆಗಡೆ, ಶ್ರೀ ಯಶವಂತ ಮೇಸ್ತ, ಶ್ರೀ ಮುರಳಿ, ಗೈಡರ್ಸ್‌ಗಳು ನ್ಯೂ ಇಂಗ್ಲೀಷ್ ಶಾಲೆಯ ಸ್ಕೌಟ್ಸ್‌ಗಳು ಭಾಗವಹಿಸಿದ್ದರು.



* ವಿಶ್ವ ಬುಡಕಟ್ಟು ದಿನಾಚರಣೆಯನ್ನು ಆಗಸ್ಟ್ 09 ರಂದು ಅಂಕೋಲಾ ತಾಲ್ಲೂಕಿನ ಊಳವರೆ ಗ್ರಾಮದ ಹಾಲಕ್ಕಿ ಬುಡಕಟ್ಟು ಜನಾಂಗದ ಜನರಿರುವ ಶಿರೂರು ಗ್ರಾಮಗುಡ್ಡ ಕುಸಿದು ಹಾನಿಗೆ ಒಳಗಾದ ಜನರೊಂದಿಗೆ ಆಚರಿಸಲಾಯಿತು. ಇಲ್ಲಿಯ 6 ಕುಟುಂಬವು ಮನೆ ಮಠ ಎಲ್ಲವನ್ನು ಕಳಿದುಕೊಂಡಿದ್ದರಿಂದ ಅವರಿಗೆ ಅಗತ್ಯ ವಸ್ತುಗಳನ್ನು ಮತ್ತು ಆ ಶಾಲೆಯ 59 ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ನೀಡಲಾಯಿತು. ಬುಡಕಟ್ಟು ಮಹಿಳೆಯರು ಸುಂದರವಾಗಿ ಹಾಡನ್ನು ಹಾಡಿದರು ಕಾರ್ಯಕ್ರಮದ ಬಳಿಕ ಮಕ್ಕಳಿಗೆ ಲಘು ಉಪಹಾರ ಸಿಹಿ ವಿತರಣೆ ಮತ್ತು ಬಂದಂತಹ ಎಲ್ಲರಿಗೂ ಲಘು ಉಪಹಾರ ವಿತರಿಸಲಾಯಿತು. ಈ ಕಾರ್ಯಕ್ರಮದ ಪ್ರಾಯೋಜಕರಾದ ಜಿಲ್ಲೆಯ ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಬೇಬಿ ಪಡಿಯಾರರವರು, ಅಂಕೋಲಾ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ನಾಗರಾಜ್‌ರವರು ಶಾಲೆಯ ಮುಖ್ಯೋಪಾಧ್ಯಾಯರು, ಊರಿನ ಹಿರಿಯರು ಮಕ್ಕಳು ಹಾಜರಿದ್ದರು.





ಕೊಡಗು

* ಆಗಸ್ಟ್ 05 ರಂದು ಕೊಡಗು ಜಿಲ್ಲಾ ಪಂಚಾಯತ್‌ಗೆ ನೂತನವಾಗಿ ಆಗಮಿಸಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರಿ ಆನಂದ್ ಪ್ರಕಾಶ್ ಮೀನಾ ಇವರನ್ನು ಭೇಟಿ ಮಾಡಿ ಸಂಸ್ಥೆಯ ಕಂಠ ವಸ್ತ್ರ ಹಾಕುವುದರ ಮೂಲಕ ಸಂಸ್ಥೆಗೆ ಸ್ವಾಗತಿಸಲಾಯಿತು. ಹಾಗೂ ಯೋಜನಾ ಪುಸ್ತಕವನ್ನು ನೀಡಲಾಯಿತು.



* ಆಗಸ್ಟ್ 06 ರಂದು ಕುಶಾಲನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಗೆ ಒಳಪಟ್ಟ ಶಾಲೆಗಳಿಗೆ ಭೇಟಿ ನೀಡಿ ಆಯಾಯ ಶಾಲೆಯ ಮುಖ್ಯೋಪಾದ್ಯಾಯರೊಂದಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ದಳಗಳ ವಿಷಯದ ಬಗ್ಗೆ ಚರ್ಚಿಸಿ ರಾಜ್ಯ ಸಂಸ್ಥೆಯಿಂದ ಬಂದ ಯೋಜನಾ ಪುಸ್ತಕವನ್ನು ನೀಡಲಾಯಿತು.

* ಆಗಸ್ಟ್ 07 ರಂದು ಪೊಲೀಸ್ ಉಪ ಅಧೀಕ್ಷಕರು ಉಪ ವಿಭಾಗ ಮಡಿಕೇರಿ ಕೊಡಗು ಇವರನ್ನು ಅವರ ಕಚೇರಿಯಲ್ಲಿ ಭೇಟಿಯಾಗಿ ವಾರ್ಷಿಕ ಯೋಜನಾ ಪುಸ್ತಕವನ್ನು ನೀಡಲಾಯಿತು. ಹಾಗೂ ಸ್ವಾತಂತ್ರ್ಯ ದಿನಾಚರಣೆಯನ್ನು ಪಥ ಸಂಚಲನದ ಪೂರ್ವಭಾವಿ ಸಭೆಯಲ್ಲೂ ಭಾಗವಹಿಸಲಾಯಿತು. ಈ ಸಂದರ್ಭ ಗೈಡ್ ಸಹಾಯಕ ಆಯುಕ್ತರಾದ ಶ್ರೀಮತಿ ಸುಲೋಚನ, ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿಯವರು ಹಾಜರಿದ್ದರು.



* ಆಗಸ್ಟ್ 07 ರಂದು ಕೊಡಗು ಜಿಲ್ಲೆಗೆ ನೂತನವಾಗಿ ಆಗಮಿಸಿರುವ ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಐಶ್ವರ್ಯರವರನ್ನು ಜಿಲ್ಲಾ ಸಂಸ್ಥೆಯು ಸ್ವಾಗತಿಸಿ ಯೋಜನಾ ಪುಸ್ತಕವನ್ನು ನೀಡಲಾಯಿತು.



* ಆಗಸ್ಟ್ 09 ರಂದು ಜಿಲ್ಲಾ ಸಂಸ್ಥೆ ಕೊಡಗು ಸ್ಥಳೀಯ ಸಂಸ್ಥೆ ಪೊನ್ನಂಪೇಟೆ ಹಾಗೂ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ ಮರೂರು ತಿತಿಮತಿ ಇವುಗಳ ಸಂಯುಕ್ತ ಆಶ್ರಯದಲ್ಲಿ "ವಿಶ್ವ ಬುಡಕಟ್ಟು ದಿನಾಚರಣೆ"ಯನ್ನು ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ ಮರೂರು ತಿತಿಮತಿ ಇಲ್ಲಿಯ ಸಭಾಗಣದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ



ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯುರವರು ವಹಿಸಿದ್ದರು. ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ಇವರು ಸ್ಕೌಟ್ ಗೈಡ್ ಸಂಸ್ಥೆ ಬೆಳೆದು ಬಂದ ಆದಿಯನ್ನು ಸವಿಸ್ತಾರವಾಗಿ ತಿಳಿಸಿದರು. ಮುಂದುವರೆಯುತ್ತ ಆಲದ ಮರದ ಬೀಜವು ತೀರಾ ಚಿಕ್ಕದು ಆಗಿದ್ದರು ಕೂಡ ಬಹಳ ವಿಸ್ತಾರವಾಗಿ, ಇಂದಿನ ಸಮಾಜಕ್ಕೆ ಅನುಗುಣವಾಗಿ ಬುಡಕಟ್ಟು ಜನಾಂಗದವರು ಬೆಳೆಯಬೇಕೆಂದು ಆಶಿಸಿದರು. ಅಲ್ಲದೆ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯೊಂದಿಗೆ ಸೇರಿ ಬೆಳೆಯಬೇಕೆಂದು ತಿಳಿಸಿದರು. ಈ ದಿನದ ವಿಶೇಷತೆಯ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಸಿದ್ದಲಿಂಗ ಶೆಟ್ಟಿಯವರು ವಿವರವಾಗಿ ತಿಳಿಸಿದರು. ಮುಖ್ಯ ಅತಿಥಿಗಳ ಸ್ಥಾನದಿಂದ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸ್ವಿಕೇರಾರವರು "ವಿಶ್ವ ಬುಡಕಟ್ಟು ದಿನಾಚರಣೆ" ಎಂದರೆ ಯಾಕೆ ಬಂತು ಮತ್ತು ಈ ಒಂದು ದಿನಾಚರಣೆಯು ಎಲ್ಲಾ ದಿನಾಚರಣೆಯಂತೆ ಹೇಗೆ ಹುಟ್ಟಿಕೊಂಡಿತು. ಎಂಬುದರ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು. ಪೊನ್ನಂಪೇಟೆ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕಾಳೀಮಾಡ ಮೊಟ್ಟಯ್ಯನವರು ಮಾತನಾಡುತ್ತ ವಿದ್ಯಾರ್ಥಿಗಳನ್ನು ನೋಡಿ 40 ವರ್ಷದ ಹಿಂದಿನ ತಮ್ಮ ವೃತ್ತಿ ಜೀವನದ ನೆನಪು ಮಾಡಿಕೊಂಡರು. ಮತ್ತು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಜಿನ್ನು ಅಣ್ಣಯ್ಯನವರು ಮಾತನಾಡುತ್ತ ಹಿಂದಿನ ಕಾಲದ ಬುಡಕಟ್ಟು ಜನಾಂಗದ ಸಂಸ್ಕೃತಿ ಆಚಾರ, ವಿಚಾರಗಳ ಬಗ್ಗೆ. ವಿವರಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಪದ್ಮಶ್ರೀ ಪ್ರಶಸ್ತಿ ವಿಜೇತರಾದ ಹಾಗೂ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯನವರು ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸ್ಕೌಟ್ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಕೆ.ಯು ರಂಜಿತ್, ಜಿಲ್ಲಾ ಗೈಡ್ ಸಹಾಯಕ ಆಯುಕ್ತರಾದ ಶ್ರೀಮತಿ ಸುಲೋಚನ, ಜಿಲ್ಲಾ ಸಹಕಾರ್ಯದರ್ಶಿ ಶ್ರಿ ಬೊಳ್ಳಾಜಿರ ಬಿ ಅಯ್ಯಪ್ಪ, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಉಪಸ್ಥಿತರಿದ್ದರು. ಸ್ವಾಗತವನ್ನು ಶ್ರೀಮತಿ ಧನುರವರು ನೆರವೆರಿಸಿದರು. ವಂದನಾರ್ಪಣೆಯನ್ನು ಕಾರ್ಯಕ್ರಮವನ್ನು ಸಂಘಟಿಸಿದ ಜಿಲ್ಲಾ ಸಂಘಟಕಿ ಶ್ರೀಮತಿ ಯು.ಸಿ. ದಮಯಂತಿ ನೆರವೆರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಅಲ್ಲಿಯ ಗೈಡ್ ಶಿಕ್ಷಕಿ ಶ್ರೀಮತಿ ಉಮಾ ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಬುಡಕಟ್ಟು ಸಂಸ್ಕೃತಿಯ ನೃತ್ಯ ರೂಪಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದಲ್ಲದೆ ಹಾಡನ್ನು ಹಾಡಿದರು.



* ಆಗಸ್ಟ್ 01 ರಂದು ಕೊಡಗು ಜಿಲ್ಲಾ ಸಂಸ್ಥೆಯ ಪೊನ್ನಮ್ಮ ಕುಶಾಲಪ್ಪ ಸ್ಕೌಟ್ ಗೈಡ್ ಭವನ ಮಡಿಕೇರಿ ಇಲ್ಲಿ ಸ್ಕಾರ್ಫ್ ಡೇ ಮತ್ತು ಸನ್ ರೈಸ್ ಡೇ ಅನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯುರವರು ವಹಿಸಿದರು. ಕಾರ್ಯಕ್ರಮದಲ್ಲಿ ನೂತನವಾಗಿ ಕರ್ನಾಟಕ ಸರಕಾರದ ತುಳು ಅಕಾಡೆಮಿ ಮಾಜಿ ಸದಸ್ಯರು, ಜಿಲ್ಲಾ ಮೊಗೇರ ಸಮಾಜದ ಗೌರವ ಅಧ್ಯಕ್ಷರು, ಜಿಲ್ಲಾ ಪತ್ರಕರ್ತರ ಸಂಘದ ಸದಸ್ಯರು, ಜಿಲ್ಲಾ ತುಳು ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳು ಆಗಿರುವ ಶ್ರೀ ಪಿ.ಎಂ ರವಿ ಅವರನ್ನು ಆಹ್ವಾನಿಸಿ ಪ್ರಧಾನ ಆಯುಕ್ತರು ಎಲ್ಲರ ಸಮ್ಮುಖದಲ್ಲಿ ಕಂಠ ವಸ್ತ್ರ ತೊಡಿಸುವುದರ ಮೂಲಕ ಸಂಸ್ಥೆಗೆ ಸದಸ್ಯರಾಗಿ ಸೇರಿಸಿಕೊಳ್ಳಲಾಯಿತು.



ಸಂಸ್ಥೆಯ ಸದಸ್ಯರಾದ ಶ್ರೀ ಪಿ.ಎಂ ರವಿ ಅವರು ಮಾತನಾಡುತ್ತ ನಾನು ಹಲವಾರು ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದೇನೆ ಪ್ರಸ್ತುತ ಮಾಡುತ್ತಲೂ ಇದ್ದೇನೆ ಆದರೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಎಲ್ಲಾ ಸಂಸ್ಥೆಗಳಿಗಿಂತಲೂ ಒಂದು ವಿಭಿನ್ನವಾದ ಸ್ವಯಂಸೇವಾ ಸಂಸ್ಥೆಯಾಗಿದ್ದು. ಮಕ್ಕಳ ಏಳಿಗೆಗಾಗಿ ದುಡಿಯುತ್ತಿರುವ ಈ ಸಂಸ್ಥೆಯ ಮೇಲೆ ನನಗೆ ಅಪಾರವಾದ ಗೌರವವಿದೆ. ಮುಂದಕ್ಕೂ ನನ್ನ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ನುಡಿದರು. ಶ್ರಿಮತಿ ಮೈಥಿಲಿ ರಾವ್ ಅವರು ಸ್ಕಾರ್ಫ್ ಡೇ ಮತ್ತು ಸನ್ ರೈಸ್ ಡೇ ಬಗ್ಗೆ ವಿವರಿಸಿದರು. ನಂತರ ಎಲ್ಲರು ಪ್ರತಿಜ್ಞೆಯನ್ನು ಮರು ಉಚ್ಚಾರಣೆ ಮಾಡುವುದರ ಮೂಲಕ ಸ್ಕಾರ್ಫ್ ಡೇ ಮತ್ತು ಸನ್ ರೈಸ್ ಡೇನ್ನು ಆಚರಿಸಲಾಯಿತು. ಅಧ್ಯಕ್ಷ ಸ್ಥಾನದಿಂದ ಪ್ರಧಾನ ಆಯುಕ್ತರು ಮಾತನಾಡುತ್ತ ಇದು ಒಂದು ಉತ್ತಮ ಕಾರ್ಯಕ್ರಮವಾಗಿದೆ ಶ್ರೀ ರವಿ ಅವರನ್ನು ಈ ಸಂಸ್ಥೆಯ ಸದಸ್ಯರಾಗಿ ಇಂದು ನೇಮಕ ಮಾಡಿಕೊಂಡಿರುವುದು ತುಂಬ ಸಂತೋಷದಾಯಕ ವಿಷಯವಾಗಿದೆ ಮತ್ತು ಅವರು ಕೂಡ ಉತ್ತಮ ಸಮಾಜ ಸೇವಕರಾಗಿದ್ದು. ನಮ್ಮ ಸಂಸ್ಥೆಗೆ ಅವರ ಸೇವೆ ಅತೀ ಆಗತ್ಯವಾಗಿದೆ ಎಂದು ನುಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಕೆ.ಯು. ರಂಜಿತ್(ಸ್ಕೌ), ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಮೈಥಿಲಿ ರಾವ್(ಗೈ), ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ರಾಣಿಮಾಚಯ್ಯ, ಗೈಡ್ ಸಹಾಯಕ ಆಯುಕ್ತರಾದ ಶ್ರೀಮತಿ ಸುಲೋಚನ, ಸಂಪಾಜೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಉಷರಾಣಿ ಕೆ.ಬಿ, ಸಹಕಾರ್ಯದರ್ಶಿ ಶ್ರೀ ಬೊಳ್ಳಜಿರ ಅಯ್ಯಪ್ಪ, ಶ್ರೀಮತಿ ಅಲಿಮ, ಶ್ರೀಮತಿ ಡೈಸಿ, ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ಎಂ.ಎಂ ವಸಂತಿ ಎಲ್ಲರನ್ನು ವಂದಿಸಿದ್ದರು. ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ ದಮಯಂತಿಯವರು ಕಾರ್ಯಕ್ರಮವನ್ನು ಆಯೋಜಿಸಿದರು.

* ಆಗಸ್ಟ್ 15 ರಂದು ಕೊಡಗು ಜಿಲ್ಲಾಡಳಿತ ವತಿಯಿಂದ ನಡೆದ 78ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಬೋಸ್‌ರಾಜ್ ಮತ್ತು ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ. ಮಂಥರ್ ಗೌಡ ಇವರುಗಳು ಬುಲ್‌ಬುಲ್ ವಿಭಾಗದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಶ್ರೀಮತಿ ಗಟ್ರೂಡ್, ಕಬ್ ವಿಭಾಗದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಶ್ರೀಮತಿ ಈವಾ ಜೀತ ಬೆನ್ನಿಸ್ ಇವರನ್ನು ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ವೆಂಕಟ್‌ರಾಜ್, ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಐಶ್ವರ್ಯ, ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ರಾಮರಾಜನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾಗ ಶ್ರೀ ಆನಂದ್ ಪ್ರಕಾಶ್ ಮೀನಾ, ಕೊಡಗು ಜಿಲ್ಲಾ ಉಪವಿಭಾಗ ಅಧಿಕಾರಿಗಳು ಶ್ರೀ ನಾರ್‌ವಾಡೆ ಕಾರ್ಬಾರಿ ವಿನಾಯಕ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ರಂಗದಾಮಪ್ಪ, ಮಡಿಕೇರಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ದೊಡ್ಡೆಗೌಡ, ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿಮ್ಯಾಥ್ಯು, ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯ, ಜಿಲ್ಲಾ ಸಹಕಾರ್ಯದರ್ಶಿ ಶ್ರೀ ಬೊಳ್ಳಾಜಿರ ಜಿ. ಅಯ್ಯಪ್ಪ, ಬುಲ್‌ಬುಲ್ ವಿಭಾಗದ ಮುಖ್ಯಸ್ಥೆ ಶ್ರೀಮತಿ ಡೈಸಿ ಮತ್ತು ಜಿಲ್ಲಾ ಸಂಘಟಕಿ ಶ್ರೀಮತಿ ಯು.ಸಿ. ದಮಯಂತಿ ಇವರುಗಳು ಹಾಜರಿದ್ದರು.



ಕೋಲಾರ

* ಜುಲೈ 19 ರಂದು ಕೋಲಾರ ಸ್ಥಳೀಯ ಸಂಸ್ಥೆಯ ಪಧಾಧಿಕಾರಿಗಳ ಸಭೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರ ಮಾರ್ಗದರ್ಶನದಲ್ಲಿ ನಗರದ ಮಹಿಳಾ ಸಮಾಜ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಇದೇ ದಿನ ಸಂಜೆ 5 ಗಂಟೆಗೆ ಮಾಲೂರು ಸ್ಥಳೀಯ ಸಂಸ್ಥೆ ಪಧಾಧಿಕಾರಿಗಳ ಸಭೆಯನ್ನು ಮಾಲೂರಿನ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು.



* ಜುಲೈ 26 ರಂದು ಜಿಲ್ಲಾ ಮಟ್ಟದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ನಗರದ ಮಹಿಳಾ ಸಮಾಜ ಶಾಲಾ ಆವರಣದಲ್ಲಿ ಕೋಲಾರ ಸ್ಥಳೀಯ ಸಂಸ್ಥೆ ಆಯೋಜನೆ ಮಾಡಿ, ನಗರದ ಪ್ರಮುಖ ಬೀದಿಗಳಲ್ಲಿ ಜಾಥಾ ಕಾರ್ಯಕ್ರವನ್ನು ಆಯೋಜನೆ ಮಾಡಿ, ಮಹಾತ್ಮಾ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನಿವೃತ್ತ ಯೋಧರಾದ ಶ್ರೀ ಗಣೇಶ್‌ರವರು ಕಾರ್ಗಿಲ್ ಯುದ್ದದ ಬಗ್ಗೆ ಮಾಹಿತಿಯನ್ನು ನೀಡಿದರು. ಇದೇ ದಿನ ಬಂಗಾರಪೇಟೆಯ ಎಸ್.ಡಿ.ಪಿ. ಕಾಲೇಜಿನಲ್ಲಿ ಕಾರ್ಗಿಲ್ ವಿಜಯೋತ್ಸವ ವನ್ನು ಆಚರಣೆ ಮಾಡಲಾಯಿತು.



* ಜುಲೈ 26 ರಂದು ಕಾರ್ಗಿಲ್ ವಿಜಯೋತ್ಸವದ ನೆನಪಿಗಾಗಿ ಕೋಲಾರ ನಗರ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು.

* ಜುಲೈ 27 ರಂದು ಕೋಲಾರ ನಗರದ ರವಿ ಇಂಟರ್ ನ್ಯಾಷನಲ್ ಶಾಲಾ ಆವರಣದಲ್ಲಿ ನೂತನವಾಗಿ ಸ್ಕೌಟ್ಸ್ ಗೈಡ್ಸ್ ದಳಗಳನ್ನು ಪ್ರಾರಂಭಿಸಲು ಮಾಹಿತಿ ಶಿಬಿರವನ್ನು ರವಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀಯುತ ನರೇಶ್ ಬಾಬು ರವರು ಉದ್ಘಾಟಿಸಿದರು.

* ಜುಲೈ 28 ರಂದು ನಗರದ ಸ್ಕೌಟ್ ಭವನದ ಆವರಣದಲ್ಲಿ ಬೀಜದ ಉಂಡೆಗಳನ್ನು ತಯಾರು ಮಾಡುವ ಕಾರ್ಯಗಾರವನ್ನು ಆಯೋಜಿಸಿ 5000 ಬೀಜದ ಉಂಡೆಗಳನ್ನು ತಯಾರಿಸಲಾಯಿತು.

* ಜುಲೈ 29 ರಂದು ಮಹಿಳಾ ಸಮಾಜ ಪದವಿ ಪೂರ್ವ ಕಾಲೇಜಿನಲ್ಲಿ ರೋವರ್ ರೇಂಜರ್‌ಗಳಿಗೆ ಸಾಮಾನ್ಯ ಮಾಹಿತಿ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಶಿಬಿರದಲ್ಲಿ 350ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಆಗಸ್ಟ್ 01 ಜಿಲ್ಲಾ ಮಟ್ಟದ ಸ್ಕಾರ್ಫ ದಿನಾಚರಣೆಯನ್ನು ನಗರದ ರವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು. ನೂತನ ಸ್ಕೌಟ್ಸ್ ಗೈಡ್ಸ್ ಗಳಿಗೆ ಸ್ಕಾರ್ಫ ಧರಿಸುವ ಮೂಲಕ ಸಂಸ್ಥೆಗೆ ಆಹ್ವಾನ ನೀಡಲಾಯಿತು. ಇದೇ ದಿನ ಕೋಲಾರ ಮಹಿಳಾ



ಸಮಾಜ, ಆರ್.ಎಲ್.ಜಾಲಪ್ಪ ಸೆಂಟ್ರಲ್ ಶಾಲೆಯಲ್ಲಿ, ತೋರ್ನಹಳ್ಳಿ, ಮುಷ್ಟರಹಳ್ಳಿ, ನಗವಾರ ಮುಂತಾದ ಶಾಲೆಗಳಲ್ಲಿ ಸ್ಕಾರ್ಫ ದಿನಾಚರಣೆಯನ್ನು ಆಚರಿಸಲಾಯಿತು.

* ಆಗಸ್ಟ್ 03 ರಂದು ಆರ್.ಎಲ್. ಜಾಲಪ್ಪ ಕಾಲೇಜಿನ ಎನ್.ಎಸ್.ಎಸ್., ಸ್ಕೌಟ್ಸ್ ಗೈಡ್ಸ್ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ 100 ಹಣ್ಣಿನ ಗಿಡಗಳನ್ನು ಕೋಲಾರ ತಾಲ್ಲೂಕಿನ ಕೆಂಬೋಡಿ ಗ್ರಾಮದ ಜನತಾ ಶಾಲಾ ಆವರಣದಲ್ಲಿ ನೆಡಲಾಯಿತು.

* ಆಗಸ್ಟ್ 05 ರಿಂದ 11ರ ವರೆಗೆ ಜಿಲ್ಲಾ ಮಟ್ಟದ ಮೂಲ ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು, ಬುಲ್ ಬುಲ್ ವಿಭಾಗಕ್ಕೆ ಶ್ರೀಮತಿ ಗೌರಾಬಾಯಿ, ಗೈಡ್ ವಿಭಾಗಕ್ಕೆ ಶ್ರೀಮತಿ ಉಮಾದೇವಿ, ಕಬ್ ವಿಭಾಗಕ್ಕೆ ಶ್ರೀ ಮುನಿನಾರಾಯಣಪ್ಪ, ಸ್ಕೌಟ್ ವಿಭಾಗಕ್ಕೆ ಶ್ರೀ ಹೆಚ್. ಕೃಷ್ಣಯ್ಯರವರು ನಾಯಕ/ಕಿರಾಗಿ ಸೇವೆ ಸಲ್ಲಿಸಿದರು. ನಾಲ್ಕು ವಿಭಾಗಳಲ್ಲಿ ಒಟ್ಟು 135 ಅಭ್ಯರ್ಥಿಗಳು ಭಾಗವಹಿಸಿದ್ದರು.



* ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಜಿಲ್ಲಾ ಸ್ಕೌಟ್ ಭವನದ ಆವರಣದಲ್ಲಿ ಆಯೋಜನೆ ಮಾಡಲಾಗಿತ್ತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ.ವಿ. ಶಂಕರಪ್ಪರವರು ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಆಗಸ್ಟ್ 15 ರಂದು ಸ್ಕೌಟ್ಸ್ ಗೈಡ್ಸ್ ಸಂಸ್ಥೆ ಮತ್ತು ರೋಟರಿ, ಕೋಲಾರ ನಂದಿನಿ ವತಿಯಿಂದ ಸ್ಕೌಟ್ ಭವನದಲ್ಲಿ ನಾರಾಯಣ ಹೃದಯಾಲಯ ಕೋಲಾರ ವತಿಯಿಂದ ಉಚಿತ ಹೃದಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

* ಆಗಸ್ಟ್ 19 ರಂದು ರಕ್ಷಾ ಬಂಧನದ ಅಂಗವಾಗಿ ನಗರದ ಸುಭಾಷ್ ಶಾಲೆಯಲ್ಲಿ ರಕ್ಷಾ ಬಂಧನ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು.

* ಆಗಸ್ಟ್ 20 ರಂದು ರಾಷ್ಟ್ರೀಯ ಸದ್ಭಾವನಾ ದಿನದ ಅಂಗವಾಗಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಜಾಥಾ ಹಾಗೂ 200 ಗಿಡಗಳನ್ನು ನೆಡುವ ಸೇವಾ ಕಾರ್ಯದಲ್ಲಿ ಭಾಗವಹಿಸಲಾಯಿತು.




ಕೊಪ್ಪಳ

* ಜಿಲ್ಲಾ ಸಂಸ್ಥೆ ಕೊಪ್ಪಳ ವತಿಯಿಂದ ರಾಜ್ಯ ಸಂಸ್ಥೆ ಮಾರ್ಗದರ್ಶನ ಮತ್ತು ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಜಿಲ್ಲಾ ತರಬೇತಿ ಮತ್ತು ಶಿಬಿರ ಕೇಂದ್ರ ಗುನ್ನಳ್ಳಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇಲ್ಲಿ ಜುಲೈ 30 ರಿಂದ ಆಗಸ್ಟ್ 05ರ ವರೆಗೆ ಜಿಲ್ಲಾ ಮಟ್ಟದ ಸ್ಕೌಟ್ಸ್ ಮಾಸ್ಟರ್ ಗೈಡ್ಸ್ ಕ್ಯಾಪ್ಟನ್‌ಗಳ ಮೂಲ ತರಬೇತಿ ಶಿಬಿರವು ಜರುಗಿಸಲಾಯಿತು. ಶಿಬಿರಕ್ಕೆ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಟಿ. ಶಂಕರಯ್ಯ ಬಿ.ಇ.ಓ. ಕೊಪ್ಪಳರವರು ಶಿಬಿರಕ್ಕೆ ಆಗಮಿಸಿ ಶಿಬಿರ ಉದ್ಘಾಟನೆಯನ್ನು ಮಾಡಿ ಮಾತುಗಳನ್ನು ಆಡಿದರು. ಮತ್ತು ಸ್ಕೌಟ್ಸ್–ಗೈಡ್ಸ್ ಘಟಕಗಳು ಶಾಲೆಯಲ್ಲಿ ಕಡ್ಡಾಯವಾಗಿ ತೆರೆಯಬೇಕು. ಸೇವಾ ಮನೋಭಾವನೆಯಿಂದ ವಿದ್ಯಾರ್ಥಿಗಳೊಂದಿಗೆ ಶಿಕ್ಷಕರು ಸೇವೆ ಸಲ್ಲಿಸಬೇಕು. ಸಮುದಾಯ ಕಾರ್ಯಕ್ರಮಗಳನ್ನು ಮಾಡಬೇಕು ಎಂದು ಶಿಬಿರಾರ್ಥಿಗಳ ಕುರಿತು ಮಾತನಾಡಿದರು. ಅಧ್ಯಕ್ಷತೆಯನ್ನು ಶ್ರೀ ಹೆಚ್.ಎಂ. ಸಿದ್ಧರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಶಿಬಿರದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಶ್ರೀ ಮಲ್ಲಿಕಾರ್ಜುನ ಚೌಕಿಮಠ, ಜಿಲ್ಲಾ ಆಯುಕ್ತರು (ಸ್ಕೌ) ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಮತ್ತು ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಮಾರುತಿ ಆರೇರ್, ಸಹ ಕಾರ್ಯದರ್ಶಿಗಳಾದ ಶ್ರೀ ಪ್ರಭಾಕರ್ ದಾಸರ್ ಶಿಕ್ಷಣ ಇಲಾಖೆಯ ಅಧಿಕಾರಿಗಳು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ಶ್ರೀಶೈಲ್ ಬಿರಾದಾರ್, ಮಾನ್ಯ ಉಪನಿರ್ದೇಶಕರು ಶ್ರೀ ಸುರೇಶ್ ಬಿ.ಆರ್.ಪಿ., ಕೋ–ಆರ್ಡಿನೇಟರ್ ಯಲಬುರ್ಗಾ ಮಾನ್ಯ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳ ಶಿಬಿರದ ಕುರಿತು ಮಾತನಾಡಿ ಚಟುವಟಿಕೆ ಮತ್ತು ಪಾಠ ಬೋಧನೆಗಳನ್ನು ಪರಿಶೀಲಿಸಿದರು. ಹಾಗೂ ಶಿಕ್ಷಕರು ಶಾಲೆಯಲ್ಲಿ ಕಡ್ಡಾಯವಾಗಿ ಘಟಕಗಳನ್ನು ತೆರೆಯಬೇಕು. ರಾಷ್ಟ್ರೀಯ ಹಬ್ಬಗಳಲ್ಲಿ ಸಮವಸ್ತ್ರದೊಂದಿಗೆ ಭಾಗವಹಿಸಬೇಕು. ರಾಜ್ಯ ರಾಷ್ಟ್ರ ಮಟ್ಟದ ಶಿಬಿರಗಳಲ್ಲಿ ಹೆಚ್ಚು ಹೆಚ್ಚು ಜಿಲ್ಲೆಯಿಂದ ಭಾಗವಹಿಸಬೇಕೆಂದು ಮಾನ್ಯ ಉಪನಿರ್ದೇಶಕರು ಸೂಚಿಸಿದರು. ಮುಕ್ತಾಯ ಸಮಾರಂಭ ಕಾರ್ಯಕ್ರಮದಲ್ಲಿ ಶ್ರೀ ರಾಘವೇಂದ್ರ ಪಾನಗಂಟಿ ಜಿಲ್ಲಾ







ಉಪಾಧ್ಯಕ್ಷರು ಶ್ರೀ ಮಲ್ಲಿಕಾರ್ಜುನ ಚೌಕಿಮಠ ಜಿಲ್ಲಾ ಆಯುಕ್ತರು ಸ್ಕೌಟ್ಸ್ ಹಾಗೂ ಜಿಲ್ಲಾ ಸಂಸ್ಥೆಯ ಹಾಗೂ ಸ್ಥಳೀಯ ಸಂಸ್ಥೆಯ ಸರ್ವ ಪದಾಧಿಕಾರಿಗಳು ಶಿಬಿರ ಮುಕ್ತಾಯ ಸಮಾರಂಭ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸ್ಕೌಟ್ಸ್ ವಿಭಾಗದಲ್ಲಿ ಶಿಬಿರದ ನಾಯಕರಾಗಿ ಶ್ರೀ ಶ್ರೀಕಾಂತ ಮಾಸಗಟ್ಟಿ ಡಿ.ಟಿ.ಸಿ.ಎಸ್. ಸ್ಕೌಟ್ಸ್ ಕೊಪ್ಪಳರವರು ಗೈಡ್ಸ್ ವಿಭಾಗದಲ್ಲಿ ನಾಯಕರಾಗಿ ಶ್ರೀಮತಿ ಅರುಣಾ ವಸ್ತ್ರದ ಜಿಲ್ಲಾ ಆಯುಕ್ತರು ಗೈಡ್ಸ್ ಹಾಗೂ ಶಿಬಿರದ ನಾಯಕರು ಸಹಾಯಕ ನಾಯಕರಾಗಿ ಶ್ರೀಮತಿ ಬಸವಣೆಮ್ಮ ಹೆಚ್.ಡಬ್ಲ್ಯೂ.ಬಿ. ಶ್ರೀಮತಿ ಅಮರಮ್ಮ, ಶ್ರೀಮತಿ ಅನ್ನಪೂರ್ಣರವರು ಹಾಗೂ ಸ್ಕೌಟ್ಸ್ ವಿಭಾಗದಲ್ಲಿ ಶ್ರೀ ಹುಸೇನ್ ಸಾಬ ಮಕಾಂದರ್, ಚತ್ರಪ್ಪ ತಂಬೂರಿ, ಬೀರಪ್ಪ ಕಡ್ಲಿಮಟ್ಟಿ, ಶ್ರೀ ಹಸನ್ ಸಾಬ್ ರಾಹುತ್, ಶ್ರೀ ವೀರನಗೌಡ ಪೋಲೀಸ್ ಪಾಟೀಲ್‌ರವರು ಸಹಾಯಕರಾಗಿ ಕಾರ್ಯನಿರ್ವಹಿಸಿದರು. ಶಿಬಿರದಲ್ಲಿ ಸ್ಕೌಟ್ ವಿಭಾಗದಲ್ಲಿ 37 ಜನ ಗೈಡ್ಸ್ ವಿಭಾಗದಲ್ಲಿ 44 ಜನ ಹೀಗೆ ಒಟ್ಟು 81 ಜನ ಶಿಬಿರಾರ್ಥಿಗಳು ಶಿಬಿರದ ನಾಯಕರು ಮತ್ತು ಸಹ ನಾಯಕರು ಸೇರಿ ಒಟ್ಟು 13 ಜನ ಸೇವಾ ರೋವರ್ಸ್–ರೇಂಜರ್ಸ್ 10 ಜನ ಹೀಗೆ ಒಟ್ಟು 104 ಜನ ಶಿಬಿರದಲ್ಲಿ ಭಾಗವಹಿಸಿದರು.

* 78ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ಕಾರ್ಯಕ್ರಮವನ್ನು ಜಿಲ್ಲಾ ಕೇಂದ್ರ ಕಛೇರಿ ಶಾಸಕರ ಮಾದರಿಯ ಶಾಲೆ ಮತ್ತು ಮೌಲಾನಾ ಆಜಾದ್ ಸ್ಕೌಟ್ಸ್ ಗೈಡ್ಸ್‌ಗಳೊಂದಿಗೆ ಶಾಲಾ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ನಂತರ 8 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು ಕಾರ್ಯಾಲಯದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ನಲೀನ್ ಅತುಲ್, ಐ.ಎ.ಎಸ್. ಧ್ವಜಾರೋಹಣವನ್ನು ನೆರವೇರಿಸಿ ಸ್ವಾತಂತ್ರ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾಡಳಿತ ಭವನ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಸ್ಕೌಟ್ಸ್–ಗೈಡ್ಸ್ ಶಿಕ್ಷಕರು ಉಪಸ್ಥಿತರಿದ್ದರು.

ಮಧುಗಿರಿ

* ಜುಲೈ 02 ರಂದು ಜಿಲ್ಲಾ ಸಂಸ್ಥೆ ಮಧುಗಿರಿ ಉಪನಿರ್ದೇಶಕರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಮಾನ್ಯ ಶ್ರೀ ಮಂಜುನಾಥ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿರಾ, ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಹನುಮಂತರಾಯಪ್ಪ ಮಧುಗಿರಿ ಇವರಿಗೆ ವಾರ್ಷಿಕ ಕಾರ್ಯಕ್ರಮ ಯೋಜನೆ ಪುಸ್ತಕವನ್ನು ನೀಡಿ ಕಾರ್ಯಕ್ರಮಗಳ ಬಗ್ಗೆ ವಿವರಿಸಿ ಮೂಲ ತರಬೇತಿ ಶಿಬಿರಕ್ಕೆ ಶಿಕ್ಷಕರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆ ಮಾಡಿಕೊಡುವ ಬಗ್ಗೆ ಮನವಿ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ತಾಲೂಕು ದೈಹಿಕ ಶಿಕ್ಷಣ ಪರೀಕ್ಷಕರು ಶ್ರೀ ವಿಜಯಕುಮಾರ್ ಶ್ರೀ ಯರಗ್ಯಾಮಯ್ಯ ಮತ್ತು ಶಿಕ್ಷಣ ಸಂಯೋಜಕರು ಉಪಸ್ಥಿತರಿದ್ದರು.

* ಜುಲೈ 08 ರಂದು ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ವಿಜಯಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಶಿಕ್ಷಕರ ಸಭೆಯಲ್ಲಿ ಮೂಲ ತರಬೇತಿ ಕುರಿತಾಗಿ ತರಬೇತಿ ಬಗ್ಗೆ ಮಾಹಿತಿ ಕಾರ್ಯಾಗಾರವನ್ನು ಶಿರಾ ತಾಲೂಕು ಗುಳಿಗೆನಹಳ್ಳಿ ಪ್ರೌಢ ಶಾಲೆಯಲ್ಲಿ ನಡೆಸಲಾಯಿತು. ಈ ಕಾರ್ಯಾಗಾರದಲ್ಲಿ ಸುಮಾರು 46 ಶಿಕ್ಷಕರು ಭಾಗವಹಿಸಿದ್ದರು.

* ಜುಲೈ 11 ರಿಂದ 12ರ ವರೆಗೆ ಮಧುಗಿರಿ ಜಿಲ್ಲಾ ಮಟ್ಟದ ನಿಪುಣ ಪರೀಕ್ಷಾ ಶಿಬಿರ 2024–25ನೇ ಸಾಲಿನ ಪರೀಕ್ಷಾ ಶಿಬಿರವನ್ನು ಶ್ರೀ ಲಕ್ಷ್ಮೀರಂಗನಾಥಸ್ವಾಮಿ ದೇವಸ್ಥಾನದ ಆವರಣದಲ್ಲಿ ಸುಮಾರು 76 ರೋವರ್ ರೇಂಜರ್ ಹಾಗೂ ಎಂಟು ಜನ ಸರ್ವಿಸ್ ರೋವರ್ ರೇಂಜರ್‌ಗಳಿಗೆ ನಡೆಸಲಾಯಿತು. ಈ ಶಿಬಿರದ ನಾಯಕರಾಗಿ ಶ್ರೀ ಗಣಪತಿ ಎಂ. ಎ.ಎಲ್.ಟಿ. (ರೋವರ್) ಇವರು ಸಹಾಯಕರಾಗಿ ಶ್ರೀ ಕೃಷ್ಣಮೂರ್ತಿ ಡಿ.ಟಿ.ಸಿ.(ಸ್ಕೌ) ಶ್ರೀ ಚಂದ್ರಶೇಖರ್, ಎ.ಡಿ.ಸಿ.(ಸ್ಕೌ) ತುಮಕೂರು ರೋವರ್–ರೇಂಜರ್‌ಗಳು ಹಾಗೂ ಶಿರಾ ಮಧುಗಿರಿ ಪಾವಗಡ ಪದಾಧಿಕಾರಿಗಳು ಭಾಗವಹಿಸಿದ್ದರು.



* ಜುಲೈ 16 ರಂದು ಜಿಲ್ಲಾ ಸಂಸ್ಥೆ ಮಧುಗಿರಿ, ಸ್ಥಳೀಯ ಸಂಸ್ಥೆ ಕೊರಟಗೆರೆ ವತಿಯಿಂದ ವಾರ್ಷಿಕ ಮಹಾಸಭೆ ಶಿಕ್ಷಕರ ದಳ ನೋಂದಣಿ ನವೀಕರಣ ಹಾಗೂ ಪುನಶ್ಚೇತನ ಕಾರ್ಯಗಾರವನ್ನು ನಡೆಸಲಾಯಿತು. ಈ ಕಾರ್ಯಕ್ರಮದ ಉದ್ಘಾಟಕರಾಗಿ ನಗರದ ಸರ್ಕಲ್ ಇನ್ಸ್ಪೆಕ್ಟರ್ ಶ್ರೀ ಅನಿಲ್ ಇವರು ನಾಗರಿಕ ರಕ್ಷಣೆ ಮತ್ತು ಸೈಬರ್ ಕ್ರೈಂ ಬಗ್ಗೆ ಸವಿಸ್ತಾರವಾಗಿ ಸಭೆಯಲ್ಲಿ ತಿಳಿಸಿದರು. ಬಿ.ಆರ್.ಸಿ. ಶ್ರೀ ರುದ್ರೇಶ್ ಸ್ಥಳೀಯ ಸಮಿತಿ ಕಾರ್ಯ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಸಂಸ್ಥೆ ಬೆಳವಣಿಗೆ ಬಗ್ಗೆ ಮಾತನಾಡಿದರು. ಶ್ರೀ ಹನುಮಂತರಾಯಪ್ಪ, ದೈಹಿಕ ಶಿಕ್ಷಣ ಪರೀಕ್ಷಕರು ಸ್ಕೌಟ್ ಗೈಡ್ ರಾಜ್ಯ ಜಿಲ್ಲಾ ಸಂಸ್ಥೆಯ ಮಾಹಿತಿಯಂತೆ ತಾವೆಲ್ಲ ಮುಂದುವರೆಯಬೇಕೆಂದು ಸೂಚಿಸಿದರು. ಶ್ರೀ ಓಬಳ ರಾಜ್ ಸ್ಥಳೀಯ ಸಂಸ್ಥೆ ಅಧ್ಯಕ್ಷರು ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ರಾಜ್ಯ ಪ್ರಧಾನ ಆಯುಕ್ತರ ಸಲಹೆ ಸಹಕಾರದಿಂದ ಯಶಸ್ವಿಯಾಗುತ್ತದೆ. ನಾವೆಲ್ಲರೂ ಜೊತೆಗೂಡಿ ಉತ್ತಮ ಮಟ್ಟದಲ್ಲಿ ನಡೆಸಿಕೊಂಡು ಹೋಗಬೇಕೆಂದು ತಿಳಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯವರಾದ ಶ್ರೀ ಪ್ರಸನ್ನ ಕುಮಾರ್ ಎಲ್ಲರನ್ನು ಸ್ವಾಗತಿಸಿದರು. ಶ್ರೀ ಮಲ್ಲೇಶ್ ಸಹ ಕಾರ್ಯದರ್ಶಿ ನಿರೂಪಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಸವಿತಾ ವಂದಿಸಿದರು.

* ಜುಲೈ 19 ರಿಂದ 25ರ ವರೆಗೆ ಜಿಲ್ಲಾ ಮಟ್ಟದ ಮೂಲ ತರಬೇತಿ ಶಿಬಿರ ಸ್ಕೌಟ್ಸ್ ಮತ್ತು ಗೈಡ್ಸ್ ಜಿ.ಪಿ.ಟಿ. ಶಿಕ್ಷಕ ಶಿಕ್ಷಕರಿಗೆ ಮಧುಗಿರಿ ಬಂದ್ರೆಹಳ್ಳಿಯ ಶ್ರೀ ಮೀನಗೊಂದಿಮಲೈ ರಂಗನಾಥಸ್ವಾಮಿ ದೇವಸ್ಥಾನ ಆವರಣದಲ್ಲಿ ಏಳು ದಿನಗಳ ಶಿಬಿರ ನಡೆಸಲಾಯಿತು. ಈ ಶಿಬಿರದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಮಾರ್ಗದರ್ಶನ ಮತ್ತು ರಾಜ್ಯ ಕಾರ್ಯದರ್ಶಿಯವರಾದ ಶ್ರೀ ಕೆ. ಗಂಗಪ್ಪಗೌಡರವರ ಸಲಹೆ ಮತ್ತು ರಾಜ್ಯ ತರಬೇತಿ ಆಯುಕ್ತರು ಸ್ಕೌಟ್ಸ್ ಶ್ರೀ ನಾಗೇಶ್ ಆರ್ ಶಿವಪುರ್ ಹಾಗೂ ಶ್ರೀ ಎಂ.ಎ. ಚೆಲ್ಲಯ್ಯ, ಮಾಜಿ ಜಂಟಿ ರಾಜ್ಯ ಕಾರ್ಯದರ್ಶಿ ಮತ್ತು ಶ್ರೀಮತಿ ಕೆ.ವಿ. ಶಾಮಲಾ ರಾಜ್ಯ ತರಬೇತಿ ಆಯುಕ್ತರು ಗೈಡ್ಸ್, ಸಲಹೆ ಸಹಕಾರ ನೇತೃತ್ವದಲ್ಲಿ ಈ ಶಿಬಿರದ ನಾಯಕರಾಗಿ ಶ್ರೀಮತಿ ಉಮಾದೇವಿ, ಎಲ್.ಟಿ.(ಗೈ), ಶ್ರೀ ಗುರುಮೂರ್ತಿ ಎ.ಎಲ್.ಟಿ. (ಸ್ಕೌಟ್), ಸ್ಕೌಟ್ಸ್ ವಿಭಾಗ ಮತ್ತು ಶ್ರೀ ಕೃಷ್ಣಮೂರ್ತಿ, ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ಸ್, ಶ್ರೀ ಚಂದ್ರಶೇಖರ್, ಎ.ಡಿ.ಸಿ., (ಸ್ಕೌ) ತುಮಕೂರು, ಶ್ರೀ ವಿನಯ್ ಕುಮಾರ್, ಎಚ್.ಡಬ್ಲ್ಯೂ.ಬಿ. (ಸ್ಕೌ) ಕೋಲಾರ, ಶ್ರೀಮತಿ ಶ್ರೀಮತಿ ಸುಶೀಲಾಮಾದೇವನ್, ಶ್ರೀಮತಿ ಲಲಿತಮ್ಮ, ಶ್ರೀಮತಿ ಉಮಯಸಲ್ಮಾ, ಶ್ರೀ ಕರಿಸಿದ್ದಪ್ಪ, ಎಎಸ್‌ಓಸಿ. ಶ್ರೀ ವಿನಯ್ ಕುಮಾರ್ ತರಬೇತಿಯ ಸಹಾಯಕರಾಗಿ ಸೇವೆ ಸಲ್ಲಿಸಿದರು. ಮಾನ್ಯ ಶ್ರೀ ಹನುಮಂತರಾಯಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಧುಗಿರಿ, ಶ್ರೀ ಯರಗಮೈಯ್ಯ, ತಾಲೂಕು ದೈಹಿಕ ಶಿಕ್ಷಣ ಪರೀಕ್ಷಕರು, ಮಧುಗಿರಿ, ಶ್ರೀ ವಿಜಯಕುಮಾರ್ ದೈಹಿಕ ಶಿಕ್ಷಣ ಪರಿವೀಕ್ಷಕರು ಶಿರಾ ಹಾಗೂ ಇತರೇ ಅಧಿಕಾರಿಗಳು ಹಾಗೂ ದೇವಸ್ಥಾನ ಸಮಿತಿಯ ಅಧ್ಯಕ್ಷರು ಸದಸ್ಯರು ಶಿಬಿರಕ್ಕೆ ಭೇಟಿ ನೀಡಿದ್ದರು. ದೇವಸ್ಥಾನದ ಕಾರ್ಯದರ್ಶಿಗಳು ಶ್ರೀ ರಾಜೇಶ್ ಭಾಗವಹಿಸಿ ಶಿಬಿರ ನಡೆಯಲು ಸಹಕರಿಸಿದರು. ಶಿಬಿರದಲ್ಲಿ ಸ್ಕೌಟ್ ವಿಭಾಗ 41 ಗೈಡ್ ವಿಭಾಗ 65 ಒಟ್ಟು 106 ಶಿಬಿರಾರ್ಥಿಗಳು ಭಾಗವಹಿಸಿದ್ದರು.





* ಆಗಸ್ಟ್ 01 ರಂದು ಗುರುವಾರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಭಜ್ಜನಹಳ್ಳಿ ಶಾಲೆಯಲ್ಲಿ ಸ್ಕಾರ್ಫ್ ಡೇ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮತ್ತು ಕಬ್ಸ್‌ಗಳೊಂದಿಗೆ ಆಚರಿಸಲಾಯಿತು.

* ಆಗಸ್ಟ್ 01 ರಂದು ಜಿಎಲ್‌ಪಿಎಸ್ ರಾಜೇನಹಳ್ಳಿ ಇಲ್ಲಿ ನೂತನ ಸ್ಕೌಟ್ ಗೈಡ್ ದಳ ಉದ್ಘಾಟನೆ ಮಾಡಲಾಯಿತು. ಇದೇ ದಿನ ಜಿಎಚ್‌ಪಿಎಸ್ ಲಕ್ಕೇನಹಳ್ಳಿ ಹಾಗೂ ಜೆಎಲ್‌ಪಿ ಎಸ್ ತರೂರು, ಜಿಎಚ್‌ಪಿಎಸ್ ಚನ್ನಪಟ್ಟಣ ಇತರೆ ಶಾಲೆಗಳಲ್ಲಿ ಹೊಸ ದಳಗಳನ್ನು ರಚನೆ ಮಾಡಲಾಯಿತು.

* ಆಗಸ್ಟ್ 01 ರಂದು ಸ್ಕೌಟ್ಸ್ ಸೂರ್ಯೋದಯ ದಿನ ಹಾಗೂ ಕಂಠವಸ್ತ್ರ ಧಾರಣ ದಿನವನ್ನು ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ದಳಮಟ್ಟದಲ್ಲಿ ಮಕ್ಕಳಿಗೆ ಹಾಗೂ ಶಾಲೆಯ ಶಿಕ್ಷಕರು ಮುಖ್ಯೋಪಾಧ್ಯಾಯರು ಎಸ್ಜಿಎಂಸಿ ಅಧ್ಯಕ್ಷರು ಸದಸ್ಯರುಗಳಿಗೆ ಸ್ಕಾರ್ಫ್‌ಧಾರಣೆ ಮಾಡುವ ಮುಖಾಂತರ ಆಚರಣೆ ಮಾಡಲಾಯಿತು. ಜಿಲ್ಲಾ ಮಟ್ಟದಲ್ಲಿ ಶ್ರೀ ಶಿವಪ್ಪ, ಉಪ ವಿಭಾಗಾಧಿಕಾರಿ ಹಾಗೂ ನಗರಸಭಾ ಮುಖ್ಯ ಅಧಿಕಾರಿ ಮಧುಗಿರಿ, ಶ್ರೀ ಎನ್.ಬಿ. ರಾಮಚಂದ್ರಪ್ಪ, ಪೋಲಿಸ್ ಉಪ ಅಧೀಕ್ಷಕರು, ಶ್ರೀ ಸಿಗ್ಬತ್ ಉಲ್ಲಾ, ತಹಸಿಲ್ದಾರ್ ಹಾಗೂ ತಾಲೂಕು ದಂಡಾಧಿಕಾರಿ ಶ್ರೀ ಲಕ್ಷ್ಮಣ್ ಜಿ.ಎಸ್., ತಾಲೂಕು ಪಂಚಾಯತ್ ಕಾರ್ಯನಿರ್ವಣಾಧಿಕಾರಿ ಹಾಗೂ ಇತರೆ ಇಲಾಖೆಯ ಅಧಿಕಾರಿಗಳು, ವ್ಯವಸ್ಥಾಪಕರುಗಳು, ಅಧೀಕ್ಷಕರುಗಳಿಗೆ ಸ್ಕಾರ್ಫ್‌ಧಾರಣೆ ಮಾಡಿ ವಾರ್ಷಿಕ ಕಾರ್ಯಕ್ರಮ ಪುಸ್ತಕವನ್ನು ನೀಡಿ ಸ್ಕಾರ್ಫ್ ಡೇ ವಿಷಯವಾಗಿ ಮತ್ತು ವಾರ್ಷಿಕ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿಸಲಾಯಿತು.

* ಆಗಸ್ಟ್ 06 ರಂದು ಡಾಕ್ಟರ್ ಜಿ. ಪರಮೇಶ್ವರ್ ಅವರು ಮಾನ್ಯ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಇವರ ಜನ್ಮದಿನಾಚರಣೆ ಅಂಗವಾಗಿ ಸ್ಥಳೀಯ ಸಂಸ್ಥೆ ಕೊರಟಗೆರೆಯಲ್ಲಿ ತಾಲೂಕು ಪಂಚಾಯಿತಿ ಮುಂಭಾಗ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಸುಮಾರು ಐವತ್ತು ಶಾಲೆಗಳಿಗೆ ಶಾಲೆಗೆ ಐದರಂತೆ ಸಮವಸ್ತ್ರ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಕೊರಟಗೆರೆ ಪಟ್ಟಣದ ಶಾಲೆಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹಾಜರಾಗಿದ್ದರು ಹಾಗೂ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳ ಶಿಕ್ಷಕರು ಸಮವಸ್ತ್ರಗಳನ್ನು ಪಡೆದುಕೊಂಡರು ಈ ಕಾರ್ಯಕ್ರಮದಲ್ಲಿ ಶ್ರೀ ನಾಗಣ್ಣನವರು ಜನರಲ್ ಸೆಕ್ರೆಟರಿ ಗೃಹ ಸಚಿವರ ಕಾರ್ಯಾಲಯ ಶ್ರೀ ಓಬಳರಾಜ್ ರವರು ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಅಧ್ಯಕ್ಷರು ಹಾಗೂ ಪಟ್ಟಣ ಪಂಚಾಯತಿ ಸದಸ್ಯರು ಮತ್ತು ತಹಸಿಲ್ದಾರ್ ಶ್ರೀ ಮಂಜುನಾಥ್‌ರವರು, ಶ್ರೀ ರಾಜಣ್ಣನವರು ಹಾಗೂ ಮಾನ್ಯ ಶ್ರೀ ನಟರಾಜ್ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶ್ರೀ ಅನಿಲ್, ಐಪಿಐ, ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರುಗಳು ಪದಾಧಿಕಾರಿಗಳು ಪತ್ರಕರ್ತ ಸಂಘದ ಅಧ್ಯಕ್ಷರಾದ ಶ್ರೀ ಪುರುಷೋತ್ತಮರವರು ಹಾಗೂ ಎಎಸ್‌ಓಸಿ ಶ್ರೀ ಕರಿಸಿದ್ದಪ್ಪನವರು ಮತ್ತು ಶ್ರೀ ಕೆ.ಎನ್. ಪ್ರಸನ್ನ ಕಾರ್ಯದರ್ಶಿರವರು ಶ್ರೀ ಮಲ್ಲೇಶಯ್ಯ ಹಾಗೂ ಶ್ರೀ ಬಾವುದ್ದೀನ್‌ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

* ಅಕ್ಕಾಜಿಹಳ್ಳಿ ಜಿ.ಎಚ್.ಪಿ.ಎಸ್. ಶಾಲೆಯಲ್ಲಿ ಸ್ಕೌಡ್ಸ್–ಗೈಡ್ಸ್, ಕಬ್–ಬುಲ್‌ಬುಲ್ ಮಕ್ಕಳಿಗೆ ದೀಕ್ಷಾ ಸಮಾರಂಭವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ಸ್ಕೌಟ್ ಮಾಸ್ಟರಾದ ಶ್ರೀ ರಂಗನಮಯ್ಯ ಹಾಗೂ ಮುಖ್ಯ ಶಿಕ್ಷಕಿಯರಾದ ಶ್ರೀಮತಿ ವಿಜಯಲಕ್ಷ್ಮಿ ಹಾಗೂ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ವೀಣಾ, ಕಬ್–ಬುಲ್‌ಬುಲ್ ಶಿಕ್ಷಕರು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಪ್ರಸನ್ನಕುಮಾರ್ ಮತ್ತು ಇತರೆ ಪದಾಧಿಕಾರಿಗಳು ಭಾಗವಹಿಸಿದರು. ಶಾಲೆಯ ಮಕ್ಕಳು ನಾಲ್ಕು ವಿಭಾಗದಲ್ಲಿ ಸೇರ್ಪಡೆಗೊಂಡಿರುತ್ತಾರೆ ಇದರಲ್ಲಿ 40 ವಿದ್ಯಾರ್ಥಿಗಳಿಗೆ ಈ ದಿನ ಪದಕ ಪ್ರಧಾನ ಮಾಡಲಾಯಿತು.



* 78ನೇ ಸ್ವಾತಂತ್ರ್ಯ ದಿನಾಚರಣೆ ದಿನವನ್ನು ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ದಳ ಮಟ್ಟದಿಂದ ಮಕ್ಕಳಿಗೆ ಹಾಗೂ ಶಾಲೆಯ ಶಿಕ್ಷಕರು ಮುಖ್ಯೋಪಾಧ್ಯಾಯರು ಎಸ್ಜಿಎಂಸಿ ಅಧ್ಯಕ್ಷರು ಸದಸ್ಯರುಗಳ ನಾಗರಿಕರ ಜೊತೆ ಗೂಡಿ ಆಚರಣೆ ಮಾಡಲಾಯಿತು. ಜಿಲ್ಲಾ ಮಟ್ಟದಲ್ಲಿ ಶ್ರೀ ಗೋಟೂರು ಶಿವಪ್ಪ ಉಪವಿಭಾಗಾಧಿಕಾರಿ ಹಾಗೂ ನಗರಸಭಾ ಮುಖ್ಯ ಅಧಿಕಾರಿ ಮಧುಗಿರಿ, ಶ್ರೀ ಎನ್.ಬಿ. ರಾಮಚಂದ್ರಪ್ಪ ಪೋಲಿಸ್ ಉಪಾಧೀಕ್ಷಕರು, ಶ್ರೀ ಸಿಗ್ಬತ್ ಉಲ್ಲಾ ತಹಸಿಲ್ದಾರ್ ಹಾಗೂ ತಾಲ್ಲೂಕು ದಂಡಾಧಿಕಾರಿ, ಶ್ರೀ ಲಕ್ಷ್ಮಣ್ ಜಿ.ಎಸ್. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ, ಹಾಗೂ ಇತರೆ ಇಲಾಖೆಯ ಅಧಿಕಾರಿಗಳು, ವ್ಯವಸ್ಥಾಪಕರುಗಳು, ಅಧೀಕ್ಷಕರು, ಉಪನಿರ್ದೇಶಕರು ಶ್ರೀ ಗಂಗಾಧರ್ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಶ್ರೀ ಹನುಮಂತರಾಯಪ್ಪ, ದೈಹಿಕ ಶಿಕ್ಷಣ ಪರಿವೀಕ್ಷಕರು, ಶ್ರೀ ಎರಗಮಯ್ಯ, ಜಿಲ್ಲಾ ಕಾರ್ಯದರ್ಶಿ ಶ್ರೀ ತಿಮ್ಮರಾಜು, ಸ್ಕೌಟ್ಸ್ ಮಾಸ್ಟರ್‌ಗಳು, ಗೈಡ್ಸ್ ಕ್ಯಾಪ್ಟನ್‌ಗಳು ಭಾಗವಹಿಸಿದ್ದರು. ಸ್ಕೌಟ್ಸ್–ಗೈಡ್ಸ್‌ಗಳು ಪಥಸಂಚಲನ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಶಿವಮೊಗ್ಗ

* ಸ್ಕೌಟಿಂಗ್–ಗೈಡಿಂಗ್ ಚಳುವಳಿಯನ್ನು ಮನೆ ಮನೆಗೂ ತಲುಪಿಸಬೇಕು ಎಂದು ಸ್ಕೌಟ್ಸ್–ಗೈಡ್ಸ್ ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಷಡಕ್ಷರಿಯವರು ಜುಲೈ 04 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಆಯೋಸಲಾಗಿದ್ದ ರಾಜ್ಯ ಸಂಸ್ಥೆಯ ಸಹಯೋಗದ "ವಿಭಾಗೀಯ ಮಟ್ಟದ ಸಮಾಲೋಚನಾ ಕಾರ್ಯಾಗಾದಲ್ಲಿ" ಉದ್ಘಾಟಕರಾಗಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಸ್ಕೌಟಿಂಗ್‌ನ ಉದ್ದೇಶವನ್ನು ಸಮಾಜಕ್ಕೆ ತಲುಪಿಸುವು ಸ್ಕೌಟ್ಸ್–ಗೈಡ್ಸ್ ಚಳುವಳಿಯನ್ನು ತೀವ್ರಗೊಳಿಸುವುದು ಇದರ ಉದ್ದೇಶ. ಮಕ್ಕಳು ಮನೆಯಲ್ಲಿ ಮೊಬೈಲ್ ಟಿ.ವಿ.ಯ ಗೀಳಿಗೆ ಬಿದ್ದು ಖಿನ್ನತೆಗೆ ಒಳಗಾಗುತ್ತಿದ್ದಾರೆ. ಇದನ್ನು ದೂರಮಾಡಲು ಸ್ಕೌಟ್ಸ್ ಮತ್ತು ಗೈಡ್ ಚಳುವಳಿಯಲ್ಲಿ ಪಾಲ್ಗೊಳ್ಳುವುದು ಅತ್ಯಗತ್ಯ ಎಂದು ತಿಳಿಸಿದರು. ನಾವು ಮೊದಲು ಮನವರಿಕೆ ಮಾಡಿಕೊಂಡು ಸಮಾಜಕ್ಕೆ ಮನವರಿಕೆ ಮಾಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಸಹಭಾಗಿತ್ವ ಅತ್ಯಗತ್ಯ ತಮ್ಮ ಪರಿಧಿಯಲ್ಲಿನ ಶಾಲಾ ಕಾಲೇಜುಗಳಲ್ಲಿ ಸ್ಕೌಟ್ಸ್–ಗೈಡ್ಸ್ ಕಾರ್ಯ ಚಟುವಟಿಕೆಗಳನ್ನು ನಡೆಸುವುದು ಅತೀ ಅವಶ್ಯಕವಾಗಿದೆ ಎಂದು ತಿಳಿಸಿದರು. ಪ್ರಾಸ್ತಾವಿಕ ನುಡಿಗಳನ್ನುಡುತ್ತಾ ಭಾರತ್ ಸ್ಕೌಟ್ಸ್–ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಗಂಗಪ್ಪ ಗೌಡರು 2024–25ನೇ ಸಾಲಿನ ವಾರ್ಷಿಕ ಯೋಜನೆಗಳ ಪುಸ್ತಕಗಳ ಬಿಡುಗಡೆ ಮಾಡಿದರು. ಹಾಗೆಯೇ ಸ್ಕೌಟ್ಸ್–ಗೈಡ್ಸ್‌ಗಳಿಗೆ ಪೂರಕ ಶಿಕ್ಷಣ ಮತ್ತು ಪ್ರೇರಣೆ ನೀಡುತ್ತಿದೆ. ಇದರಿಂದ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದರು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಸ್ಕೌಟ್ಸ್–ಗೈಡ್ಸ್ ಚಳುವಳಿಯನ್ನು ಅಭಿವೃದ್ಧಿಪಡಿಸಿ ತರಬೇತಿ ಪಡೆದ ನಾಯಕರುಗಳು ದಳಗಳನ್ನು ವಿಸ್ತರಿಸುವಂತೆ ತಿಳಿಸಿದರು. ಶಿವಮೊಗ್ಗ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಭಾರತ್ ಸ್ಕೌಟ್ಸ್–ಗೈಡ್ಸ್ ಕಾರ್ಯಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುವುದರಿಂದ ಮಕ್ಕಳು ಪ್ರಕೃತಿಯೊಂದಿಗೆ ಬೆರೆಯುವಂತೆ ಹೊರಸಂಚಾರ, ಚಾರಣದಂತೆ ಚಟುವಟಿಕೆಗಳು ಸಾಹಸ ಪ್ರವೃತ್ತಿಯನ್ನು ಉತ್ತೇಜಿಸುತ್ತದೆ ಎಂದು ಹೇಳಿದರು. ವಿಭಾಗ ಮಟ್ಟದ ಕಾರ್ಯಾಗಾರದಲ್ಲಿ ವಿವಿಧ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತರು. ಕಾರ್ಯದರ್ಶಿಗಳು ಶ್ರೀಮತಿ ಶಕುಂತಲಾ ಚಂದ್ರಶೇಖರ್ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಪದಾಧಿಕಾರಿಗಳು ಭಾಗವಹಿಸಿದ್ದರು. ಶ್ರೀ ಬಸವರಾಜಪ್ಪ, ಡಯಟ್ ಪ್ರಾಂಶುಪಾಲರು ಶಿವಮೊಗ್ಗ, ಶ್ರೀ ವಿಜಯ್, ಡಿಡಿಪಿಯು ಚಿತ್ರದುರ್ಗ, ಶ್ರೀ ಸತೀಶ್ ವಿಷಯ ಪರಿವೀಕ್ಷಕರು ಶಿವಮೊಗ್ಗ, ಶ್ರೀಮಂಜೇಗೌಡ ಡಯಟ್ ಹಾಸನ, ಶ್ರೀ ಕುಮಾರಪ್ಪ ಡಿಡಿಪಿಯು ಹಾಸನ, ರಾಜ್ಯ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಮಹೇಶ್, ಶ್ರೀ ಲಿಂಗಾರೆಡ್ಡಿ, ಶ್ರೀಮತಿ ಶಾರದಾ ಮಾಗನಹಳ್ಳಿ, ಶ್ರೀಮತಿ ಮಮತ, ಶ್ರೀ ಪಾಣಿರಾಜ್, ಶ್ರೀ ಪರಮೇಶ್ವರ್ ಜಿಲ್ಲಾ ಕಾರ್ಯದರ್ಶಿ, ಖಜಾಂಚಿ ಶ್ರೀ ಚೂಡಾಮಣಿ ಪವಾರ್, ಜಂಟಿಕಾರ್ಯದರ್ಶಿ ಶ್ರೀಮತಿ ಲಕ್ಷ್ಮಿ ಕೆ. ರವಿ, ಶ್ರೀ ವಿಜಯಕುಮಾರ್, ಶ್ರೀ ಕೆ. ರವಿ, ಕೇಂದ್ರ ಸ್ಥಾನಿಕ ಆಯುಕ್ತರು ಸಹಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪನವರು, ಸಹಾಯಕ ಜಿಲ್ಲಾ ಆಯುಕ್ತರುಗಳಾದ



ಶ್ರೀ ಮಲ್ಲಿಕಾರ್ಜುನ ಕಾಣೂರು, ಶ್ರೀ ಚಂದ್ರಶೇಖರಯ್ಯ, ಶ್ರೀ ಚಂದ್ರಶೇಖರ್ ಕೆ.ವಿ., ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಶಿವಶಂಕರ್, ಶ್ರೀ ಚಂದ್ರಶೇಖರ್ ಎನ್.ಆರ್. ಮುಂತಾದವರು ಭಾಗವಹಿಸಿದ್ದರು. ಶ್ರೀ ರಾಜೇಶ್ ವಿ. ಅವಲಕ್ಕಿ ಅವರು ನಿರೂಪಣೆ ಮಾಡಿದರು.

* ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಜುಲೈ 05 ರಿಂದ 07ರ ವರೆಗೆ ರಾಜ್ಯಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿದ್ದು, ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ 242 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು. ಶಿಬಿರದ ಉದ್ಘಾಟನೆಯನ್ನು ಗಿಡಕ್ಕೆ ನೀರೆರೆಯುವ ಮೂಲಕ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಬಿ. ಕೃಷ್ಣಪ್ಪನವರು ನೆರವೇರಿಸಿದರು. ಉದ್ಘಾಟನಾ ನುಡಿಯಲ್ಲಿ ಶಿಬಿರಗಳು ಮಕ್ಕಳಲ್ಲಿ ಶಿಸ್ತುಬದ್ಧ ಜೀವನ ರಾಷ್ಟ್ರಾಭಿಮಾನ, ಸ್ವಾಭಿಮಾನ, ಸೇವಾಮನೋಭಾವ ಸಂಸ್ಕಾರ, ಉತ್ತಮ ಸಂಸ್ಕೃತಿ, ಪರಸ್ಪರ ಸಹಕಾರ, ಪರಸ್ಪರ ವಿನಿಮಯದಂತಹ ಉದಾತ್ತ ಗುಣಗಳನ್ನು ಬೆಳೆಸುವಲ್ಲಿ ಪ್ರೇರಕವಾಗಿವೆ ಎಂದು ಹೇಳುತ್ತಾ, ಬೆಳೆಯುವ ಪೈರು ಮೊಳಕೆಯಲ್ಲಿ ಎಂಬ ಮಾತನ್ನು ಮಕ್ಕಳಿಗೆ ವಿವರಿಸಿ ಉತ್ತಮ ಆದರ್ಶ ಜೀವನ ನಿಮ್ಮದಾಗಲಿ ಎಂದು ಆಶಿಸಿದರು. ಅಧ್ಯಕ್ಷೀಯ ನುಡಿಯಲ್ಲಿ ಜಿಲ್ಲಾ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀಬಿಂದುಕುಮಾರ್ ಅವರು ಶಿಬಿರಾರ್ಥಿಗಳಿಗೆ ತಾವು ನಮ್ಮ ಸ್ನೇಹಿತರನ್ನು ಮನವೊಲಿಸಿ ಸ್ಕೌಟ್ಸ್–ಗೈಡ್ಸ್ ದಳಗಳನ್ನು ವಿಸ್ತರಿಸಿ ಬಲಪಡಿಸುವಂತೆ ಕರೆಕೊಟ್ಟರು. ಹಾಗೂ ಉನ್ನತ ಶಿಕ್ಷಣದಲ್ಲಿ ಸ್ಕೌಟ್ಸ್–ಗೈಡ್ಸ್ ಕೋಟಾದಡಿಯಲ್ಲಿ ಮೀಸಲಾತಿಯನ್ನು ದೊರಕಿಸುವ ಪ್ರಯತ್ನ ರಾಜ್ಯ ಸಂಸ್ಥೆಯಿಂದ ನಡೆಯುತ್ತಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮಕ್ಕೆ ಜಿಲ್ಲಾ ಕಾರ್ಯದರ್ಶಿಯವರಾದ ಶ್ರೀ ಹೆಚ್. ಪರಮೇಶ್ವರ್ ಅವರು ಸ್ವಾಗತಿಸಿದರು. ಜಿಲ್ಲಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಕೆ. ರವಿ ಅವರು ವಂದಿಸಿದರು. ಶಿಬಿರದ ತರಬೇತಿ ತಂಡದ ರೋವರ್ ವಿಭಾಗದ ನಾಯಕರಾದ ಶ್ರೀ ರಾಜೇಶ್ ಅವಲಕ್ಕಿ ಅವರು ನಿರೂಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಖಜಾಂಚಿ ಶ್ರೀ ಚೂಡಾಮಣಿ ಪವಾರ್, ಜಿಲ್ಲಾ ಸ್ಥಾನೀಕ ಕಮಿಷನರ್ ಶ್ರೀ ಕೆ. ರವಿ, ಶ್ರೀ ವಿಜಯಕುಮಾರ್ ಪಿ.ಆರ್.ಓ. ಸಹಕಾರ್ಯದರ್ಶಿ ಶ್ರೀ ವೀರೇಶಪ್ಪ, ವೈ.ಆರ್. ತರಬೇತಿ ತಂಡದ ನಾಯಕರುಗಳಾದ ಶ್ರೀ ಶಿವಶಂಕರ ಹೆಚ್. ಚಂದ್ರಶೇಖರಯ್ಯ, ಶ್ರೀ ಮಲ್ಲಿಕಾರ್ಜುನ ಕಾಣೂರ್ ಶ್ರೀ ಪರಮೇಶ್ವರಯ್ಯ, ತರಬೇತಿ ತಂಡದ ನಾಯಕಿರಾದ ಶ್ರೀಮತಿ ಶಾಂತಮ್ಮ, ಶ್ರೀಮತಿ ಗೀತಾಚಿಕ್ಕಮಠ್, ವಿವಿಧ ತಾಲ್ಲೂಕಿನ ದಳನಾಯಕ, ನಾಯಕಿಯರು ಸಹನಾಯಕರುಗಳು ಉಪಸ್ಥಿತರಿದ್ದರು.



* ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಜುಲೈ 14 ರಿಂದ 16ರ ವರೆಗೆ ಜಿಲ್ಲಾ ಮಟ್ಟದ ನಿಪುಣ್ ಪರೀಕ್ಷಾ ಶಿಬಿರ ಆಯೋಜಿಸಲಾಗಿತ್ತು. ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ನೆರವೇರಿಸಿದರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಇತರ ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಒಟ್ಟು 306 ರೋವರ್–ರೇಂಜರ್‌ಗಳು ಹಾಗೂ 4 ಜನ ರೋವರ್ ವಿಭಾಗದಲ್ಲಿ 3 ಜನ



ರೇಂಜರ್ ವಿಭಾಗದಲ್ಲಿ ತರಬೇತಿ ತಂಡದ ನಾಯಕ/ಕಿಯರಾಗಿ ಕರ್ತವ್ಯ ನಿರ್ವಹಿಸಿದರು.

* ಜಿಲ್ಲಾ ಸ್ಕೌಟ್ಸ್ ಭವನದಲ್ಲಿ 25ನೇ ವರ್ಷದ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಸೈನಿಕರಿಗೊಂದು ಸಲಾಮ್ ಕಾರ್ಯಕ್ರಮವನ್ನು ಜುಲೈ 26 ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ಅವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸುಬೇದಾರ್ ನಿವೃತ್ತ ಮಾಲತೇಶ್ ಮಾಜಿ ಸೈನಿಕರು ದೀಪ ಬೆಳಗಿಸಿ ಅಮರ್ ಜವಾನ್‌ಗೆ ಪುಷ್ಪ ಅರ್ಪಣೆ ಮಾಡುವ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಿ ತಮ್ಮ ಪ್ರೇರಣಾ ಪೂರ್ವಕ ಮಾತುಗಳಲ್ಲಿ ಮಕ್ಕಳನ್ನು ಅಗ್ನಿವೀರ ಸೇವೆಗೆ ಸೇರಿ ಸೇವೆ ಸಲ್ಲಿಸುವಂತೆ ಕರೆ ನೀಡಿದರು. ತಮ್ಮ ಸೇನಾ ಸೇವಾ ಅವಧಿಯಲ್ಲಿ ವಿವಿಧ ಯುದ್ಧದಂತಹ ಕಠಿಣ ಸಮಯದಲ್ಲಿ ನಮ್ಮ ದೇಶದ ಗಡಿಯನ್ನು ಕಾಯುವ ಸೇನಾ ಬಳಗದ ಸೇವೆ ಶೌರ್ಯ, ಚಾಣಕ್ಷ್ಯ, ನಿಸ್ವಾರ್ಥ ಸೇವೆ, ಮುಖ್ಯವಾಗಿ ದೇಶ ಪ್ರೇಮವನ್ನು ಮೆರೆದು ದೇಶದ ರಕ್ಷಣೆಗಾಗಿ ಕಾರ್ಗಿಲ್ ವಿಜಯದ ಸಮಯದಲ್ಲಿ ಕಾರ್ಗಿಲ್‌ಗಾಗಿ ಪ್ರಾಣತ್ಯಾಗ ಮಾಡಿದ 523 ಜನ ವೀರ ಯೋಧರು ವೀರ ಸ್ವರ್ಗ ಸೇರಿದುದನ್ನು ಸ್ಮರಿಸಿದರು. ಈ ಸಭೆಯಲ್ಲಿ ಉಪಸ್ಥಿತರಿದ್ದ ಮಕ್ಕಳಿಗೆ ದೇಶಭಕ್ತಿಯನ್ನು ಮೂಡಿಸುವ ವೀರ ಸೇನಾನಿಗಳ ಬಗ್ಗೆ ತಿಳಿಸಿದರು. ಶ್ರೀ ಕೆ.ಪಿ. ಬಿಂದುಕುಮಾರ್ ಅವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಮಕ್ಕಳಿಗೆ ದೇಶ ಸೇವೆಯ ಮಹತ್ವವನ್ನು ತಿಳಿಸಿದರು.



* ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಯ ವತಿಯಿಂದ ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ಡೇ ಹಾಗೂ ಸ್ಕೌಟಿಂಗ್ ಸೂರ್ಯೋದಯ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಪದಾಧಿಕಾರಿಗಳು ಹಾಗೂ ಸ್ಕೌಟ್ಸ್–ಗೈಡ್ಸ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಶಿವಮೊಗ್ಗ ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಆಗಸ್ಟ್ 11 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಸಂಸ್ಥೆಯ ವಿವಿಧ ವಿಭಾಗದ ನೂತನ ಜಿಲ್ಲಾ ಆಯುಕ್ತರುಗಳ ಪದಗ್ರಹಣ ಸಮಾರಂಭ ನೆರವೇರಿತು. ರಾಜ್ಯ ಸಂಸ್ಥೆಯ ಮುಖ್ಯ ಆಯುಕ್ತರು ಶ್ರೀ ಪಿ.ಜೆ.ಆರ್. ಸಿಂಧ್ಯರವರು ಜಿಲ್ಲಾ ಆಯುಕ್ತರುಗಳಿಗೆ ಆದೇಶ ಪತ್ರ ಹಾಗೂ ವಾರೆಂಟ್‌ಗಳನ್ನು ನೀಡಿ ಪದಗ್ರಹಣ ಕಾರ್ಯಕ್ರಮ ನೆರವೇರಿಸಿ ಹಿತವಚನ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಕೆ.ಪಿ. ಬಿಂದು ಕುಮಾರ್‌ರವರು ವಹಿಸಿದ್ದರು. ಪದಗ್ರಹಣ ಸಮಾರಂಭದಲ್ಲಿ ರಾಜ್ಯ ಕಾರ್ಯದರ್ಶಿಯವರಾದ ಶ್ರೀ ಗಂಗಪ್ಪ ಗೌಡರು ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ, ಜಿಲ್ಲಾ ಖಜಾಂಚಿ ಶ್ರೀ ಚೂಡಾಮಣಿ ಈ ಪವಾರ್, ಜಂಟಿ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಕೆ. ರವಿ, ಜಿಲ್ಲಾ ಸಹಕಾರ್ಯದರ್ಶಿಯವರಾದ ಶ್ರೀ ವೈ.ಆರ್. ವೀರೇಶಪ್ಪ ಮಾಜಿ ಜಿಲ್ಲಾ ಮುಖ್ಯ ಆಯುಕ್ತರುಗಳಾದ ಶ್ರೀ ರಮೇಶ್ ಶಾಸ್ತ್ರಿ, ಶ್ರೀ ಎ.ಎಸ್. ಚಂದ್ರಶೇಖರ್, ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಭಾರತಿ ಚಂದ್ರಶೇಖರ್,



ಜಿಲ್ಲಾ ಸಂಸ್ಥೆಯ ಹಾಗೂ ಸ್ಥಳೀಯ ಸಂಸ್ಥೆಯ ಸದಸ್ಯರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದು ಶುಭ ಹಾರೈಸಿದರು. ನೂತನ ಜಿಲ್ಲಾ ಆಯುಕ್ತರುಗಳಾಗಿ ಶ್ರೀ ಎಸ್.ಜಿ. ಆನಂದ್ ಸ್ಕೌಟ್ ವಿಭಾಗ ಶ್ರೀ ಟಿ.ವಿ. ವೆಂಕಟಾಟಲ ಶಾಸ್ತ್ರಿ ಕಬ್ ವಿಭಾಗ ಶ್ರೀ ಕೆ. ರವಿ, ರೋವರ್ ವಿಭಾಗ, ಶ್ರೀ ಬಿ.ಸಿ. ವೇಣುಗೋಪಾಲ್, ವಯಸ್ಕ ಸಂಪನ್ಮೂಲ ಶ್ರೀಮತಿ ಲತಾರಾಬರ್ಟ್, ಬುಲ್‌ಬುಲ್ ವಿಭಾಗದಿಂದ ಪದವಿ ಪ್ರಮಾಣ ಸ್ವೀಕರಿಸಿದರು. ಡಾ॥ ಅನಿತಾ ರೇಂಜರ್ ವಿಭಾಗ, ಶ್ರೀಮತಿ ಸರಸ್ವತಿ ನಾಗರಾಜ್ (ವಯಸ್ಕ ಸಂಪನ್ಮೂಲ) ಆಯುಕ್ತರಾದ ಬಗ್ಗೆ ಸಭೆಯಲ್ಲಿ ಪ್ರಕಟಿಸಲಾಯಿತು. ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಹೆಚ್. ಶಿವಶಂಕರ್‌ರವರು ಪದವಿ ಪ್ರಮಾಣ ಪಡೆದರು. ಶ್ರೀ ಪಿ.ಜಿ.ಆರ್. ಸಿಂಧ್ಯರವರಿಗೆ ಶಿಕಾರಿಪುರ ಸ್ಥಳೀಯ ಸಂಸ್ಥೆಯ ವತಿಯಿಂದ ಗೌರವಿಸಲಾಯಿತು. ಕಾರ್ಯಕ್ರಮವನ್ನು ಶ್ರೀ ರಾಜೇಶ್ ವಿ. ಅವಲಕ್ಕಿ ಅವರು ನಿರೂಪಣೆ ಮಾಡಿದರು.

* ಶಿವಮೊಗ್ಗ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಯ ವತಿಯಿಂದ ಜಿಲ್ಲಾ ಸ್ಕೌಟ್ ಭವನದ ಆವರಣದಲ್ಲಿ 78ನೇ ಸ್ವಾಂತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ಧ್ವಜಾರೋಹಣ ನೆರವೇರಿಸಿದರು. ನಗರದ ವಿವಿಧ ಶಾಲಾ ಕಾಲೇಜುಗಳು ಸ್ಕೌಟ್–ಗೈಡ್ಸ್, ರೋವರ್–ರೇಂಜರ್ ಮಕ್ಕಳಿಂದ ಆಕರ್ಷಕ ಕವಾಯಿತು. ನಡೆಯಿತು ಸ್ಕೌಟ್ ಆಯುಕ್ತ ಶ್ರೀ ಎಸ್.ಜಿ. ಆನಂದ್, ಗೈಡ್ ಆಯುಕ್ತೆ ಶ್ರೀಮತಿ ಶಕುಂತಲಾ ಚಂದ್ರಶೇಖರ್, ಖಜಾಂಚಿ ಶ್ರೀಮತಿ ಚೂಡಾಮಣಿ ಈ. ಪವಾರ್, ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ, ಸಹಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ, ಜಂಟಿ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಕೆ. ರವಿ, ಶ್ರೀಮತಿ ಅಶ್ವಿನಿ ದೊರೈ, ಶ್ರೀ ಹೆಚ್. ಶಿವಶಂಕರ್, ಶ್ರೀ ರಾಜೇಶ್ ವಿ. ಅವಲಕ್ಕಿ, ಶ್ರೀ ಎಂ. ಹೇಮಲತಾ, ಶ್ರೀ ಕೆ.ವಿ. ಚಂದ್ರಶೇಖರಯ್ಯ, ಶ್ರೀ ಮಲ್ಲಿಕಾರ್ಜುನ ಕಾನೂರ್, ಶ್ರೀ ಕೃಷ್ಣಸ್ವಾಮಿ ಸ್ಕೌಟ್–ಗೈಡ್, ರೋವರ್–ರೇಂಜರ್ ದಳನಾಯಕ/ಕಿಯರು ಹಾಜರಿದ್ದರು.



ಶಿರಸಿ (ಉ.ಕ.)

* ಸ್ಥಳೀಯ ಸಂಸ್ಥೆ ಶಿರಸಿ ವತಿಯಿಂದ ತಾಲೂಕು ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆ ಲಯನ್ಸ್ ಪ್ರೌಢಶಾಲೆಯ ಸಭಾಂಗಣದಲ್ಲಿ ನಡೆಯಿತು. ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಬಿ.ವಿ. ಗಣೇಶ ಹಾಗೂ ಲಯನ್ಸ್ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಶಶಾಂಕ್ ಹೆಗಡೆ ಸಾಂಕೇತಿಕವಾಗಿ ಸ್ಪರ್ಧೆಯನ್ನು ಉದ್ಘಾಟಿಸಿ ಶುಭಕೋರಿದರು. ಸಿರ್ಸಿ ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಮಧ್ಯಾಹ್ನ ನಡೆದ ಪ್ರಶಸ್ತಿ ಪತ್ರ ವಿತರಣಾ ಸಮಾರಂಭದ ಅಧ್ಯಕ್ಷಸ್ಥಾನವನ್ನು ಲಯನ್ಸ್ ಶ್ರೀ ಅಶ್ವತ್ ಹೆಗಡೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ವಿ.ಹೆಚ್. ಭಟ್ಕಳ್, ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಶ್ರೀಪಾದ ರಾಯ್ಸದ್, ಲಯನ್ಸ್ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಶಶಾಂಕ್ ಹೆಗಡೆ, ಕಾರ್ಯದರ್ಶಿ ಶ್ರೀ ಎನ್.ಎಸ್ ಭಾಗ್ವತ್, ಎ.ಎಸ್.ಓ.ಸಿ. ಶ್ರೀ ವೀರೇಶ್ ಮಾದರ್ ನಿರ್ಣಾಯಕರುಗಳಾದ ಶ್ರೀಮತಿ ಗೀತಾ ಹೆಗಡೆ



ಮುಂಡ್ಗೇಸರ, ಶ್ರೀ ಉಮಾಕಾಂತ್ ಹೆಗಡೆ, ಶ್ರೀ ನರಹರಿ ಭಂಡಾರ್ಕರ್ ಉಪಸ್ಥಿತರಿದ್ದರು. ಲಯನ್ಸ್ ಕ್ಲಬ್ ಶಿರಸಿಯ ಅಧ್ಯಕ್ಷರಾದ ಲಯನ್ಸ್ ಶ್ರೀ ಅಶ್ವಥ್ ಹೆಗಡೆ, ಕಾರ್ಯದರ್ಶಿ ಲಯನ್ಸ್ ಶ್ರೀ ವಿನಾಯಕ ಭಾಗ್ವತ್, ಖಜಾಂಚಿ ಲಯನ್ ಶ್ರೀ ವೇಣುಗೋಪಾಲ್ ಹೆಗಡೆ ಊಟೋಪಚಾರದ ವ್ಯವಸ್ಥೆ ಮಾಡಿದ್ದರು. ಭಾಗವಹಿಸಿದ್ದ ಎಲ್ಲ ಸ್ಕೌಟ್ಸ್ ಮತ್ತು ಗೈಡ್ಸ್ ತಂಡಗಳಿಗೆ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಲಯನ್ ಶ್ರೀ ಅಶೋಕ್ ಹೆಗಡೆ ಸ್ಮರಣಿಕೆ ನೀಡಿದರು. ಅತಿ ವೃಷ್ಟಿಯಿಂದಾಗಿ ಇತ್ತೀಚೆಗೆ ಮಡಿದವರ ಆತ್ಮಕ್ಕೆ ಶಾಂತಿಕೋರಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು. ಶಿರಸಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎನ್.ಎಸ್. ಭಾಗ್ವತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಲಯನ್ಸ್ ಪ್ರೌಢಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಾದ ಎಸ್.ಕೆ. ಶ್ರಾವ್ಯ ಸ್ವಾಗತಿಸಿದರು. ಚಿನ್ಮಯ್ ಕೆರೆಗದ್ದೆ ವಂದಿಸಿದರು. ಸಮೀಕ್ಷಾ ರಾಯ್ಕರ್ ನಿರೂಪಿಸಿದರು.

ತುಮಕೂರು

* ಜುಲೈ 06 ರಿಂದ 07ರ ವರೆಗೆ ಬಿ.ಜಿ.ಎಸ್. ಶಾಲೆ ಮಾಯಸಂದ್ರ ಟಿಬಿ ಇಲ್ಲಿ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷೆ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಯಿತು. ಶಿಬಿರದ ನಾಯಕನಾಗಿ ಶ್ರೀ ಗಂಗಾಧರ ಟಿ.ಸಿ., ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್. ಶ್ರೀಮತಿ ಜಯಮ್ಮ, ಜಿಲ್ಲಾ ತರಬೇತಿ ಆಯುಕ್ತರು ಗೈಡ್ ನಾಯಕತ್ವ ವಹಿಸಿದ್ದರು. ಶಿಬಿರದಲ್ಲಿ 153 ಸ್ಕೌಟ್ಸ್ ಮತ್ತು ಗೈಡ್‌ಗಳು ಭಾಗವಹಿಸಿದ್ದರು.



* ಜುಲೈ 14 ರಂದು 25ನೇ ವರ್ಷದ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ವಿಜಯ ಕಳಸ, ಸಿದ್ಧಗಂಗಾ ಮಠಕ್ಕೆ ಆಗಮಿಸಿತು, ಸಿದ್ಧಗಂಗಾ ಮಠಾಧ್ಯಕ್ಷರಾದ ಪರಮಪೂಜ್ಯ ಶ್ರೀಶ್ರೀಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಕಳಸವನ್ನು ಬರ ಮಾಡಿಕೊಂಡರು. ಬ್ರಿಗೇಡಿಯರ್ ಶ್ರೀ ರವಿ ಮುನಿಸ್ವಾಮಿ, ಕರ್ನಲ್ ಶ್ರೀ ಪಿ.ವಿ. ಹರಿ, ನಾಯಕ್ ಶ್ರೀ ಮಣಿಕಂಠನ್, ಕ್ಯಾಪ್ಟನ್ ಶ್ರೀ ಎಸ್.ಸಿ. ಭಂಡಾರಿ ಹಾಗೂ ಡೆಲಿಗೇಷನ್ ಸದಸ್ಯರಾದ ಶ್ರೀ ಬಿ.ಪಿ. ಶಿವಕುಮಾರ್, ಶ್ರೀ ದಿನೇಶ್, ಶ್ರೀ ವಾಸುದೇವನ್, ಶ್ರೀ ಶೇಷಾದ್ರಿ, ಶ್ರೀ ಕುಮಾರ ಸ್ವಾಮಿ, ಶ್ರೀ ನಾರಾಯಣ್, ಶ್ರೀ ವೀರೇಂದ್ರ ಹಾಗೂ ತುಮಕೂರು ಗ್ರಾಮಾಂತರ ಶಾಸಕರಾದ ಶ್ರೀ ಬಿ, ಸುರೇಶ್ ಗೌಡರ ಜೊತೆ ತುಮಕೂರು ನಗರದ ಶಾಸಕರಾದ ಶ್ರೀ ಜಿ.ಬಿ. ಜ್ಯೋತಿ ಗಣೇಶ್ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. 50 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸೇವೆ ಸಲ್ಲಿಸಿದರು.



* ಜುಲೈ 04 ರಂದು 2024–25ನೇ ಸಾಲಿನ ರಾಜ್ಯ ಸಂಸ್ಥೆಯ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಶುಭಕಲ್ಯಾಣ್ ರವರು ಬಿಡುಗಡೆಗೊಳಿಸಿದರು. ಜಿಲ್ಲಾ ಅಪರ ಜಿಲ್ಲಾಧಿಕಾರಿಗಳು, ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಕಾರ್ಯದರ್ಶಿಗಳು, ಉಪಸ್ಥಿತರಿದ್ದರು.

* ಜುಲೈ 22 ರಿಂದ 28ರ ವರೆಗೆ ಸ್ಥಳೀಯ ಸಂಸ್ಥೆ ತಿಪಟೂರು ತಾಲ್ಲೂಕು ಸಹಯೋಗದೊಂದಿಗೆ ಆಯೋಜಿಸಲಾಗಿದ್ದು. ಜಿಲ್ಲಾ ಮಟ್ಟದ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರವನ್ನು ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಕೆ. ಗಂಗಪ್ಪ ಗೌಡರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಗೌರವ ಅಧ್ಯಕ್ಷರು ಹಾಗೂ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಚಂದ್ರಯ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ರಾಜ್ಯ ತರಬೇತಿ ಆಯುಕ್ತರಾದ ಶ್ರೀ ನಾಗೇಶ್ ಆರ್. ಶಿವಪೂರ್, ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಈಶ್ವರಯ್ಯ, ಶ್ರೀ ಹುಚ್ಚಯ್ಯ, ಶ್ರೀ ಸಿಂದಗಿಕರ್ ಮತ್ತು ತಾಲೂಕು ದೈಹಿಕ ಪರಿವೀಕ್ಷಕರಾದ ಶ್ರೀಮತಿ ಶಮಂತ, ಸ್ಕೌಟ್ ವಿಭಾಗಕ್ಕೆ ನಾಯಕರಾಗಿ ಶ್ರೀ ಗಂಗಾಧರ್, ಹಾಗೂ ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಅರುಣ್ ಮಾಲ, ರವರು ನಾಯಕರಾಗಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲಾ ತರಬೇತಿ ಆಯುಕ್ತರು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ನಾಗರಾಜು, ಹಾಗೂ ಸಹನಾಯಕರುಗಳು ಶಿಬಿರಾರ್ಥಿಗಳು ಹಾಜರಿದ್ದರು.



ಶಿಬಿರದ ಸಮಾರೋಪ ಸಮಾರಂಭವು ಪರಮಪೂಜ್ಯ ಶ್ರೀಶ್ರೀಶ್ರೀ ಇಮ್ಮಡಿ ಕರಿಬಸವ ದೇಶಿಕೇಂದ್ರ ಮಹಾಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಕಾರ್ಯಕ್ರಮವನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಸ್ಥಳೀಯ ಮಾನ್ಯ ಶಾಸಕರಾದ ಶ್ರೀ ಷಡಕ್ಷರಿ ರವರು ಆಗಮಿಸಿದ್ದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಶ್ರೀ ಡಾ. ಶ್ರೀಧರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಆಶಾ ಪ್ರಸನ್ನ ಕುಮಾರ್, ಶ್ರೀಮತಿ ಸುಭಾಷಿಣಿ ಆರ್ ಕುಮಾರ್, ಶ್ರೀ ಸುರೇಂದ್ರ ಶಾ, ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಚಂದ್ರಯ್ಯ, ತಾಲೂಕು ದೈಹಿಕ ಪರಿವೀಕ್ಷಕರು ಶ್ರೀಮತಿ ಶಮಂತ, ತರಬೇತಿ ಶಿಬಿರದ ನಾಯಕರುಗಳು, ಸಹನಾಯಕರುಗಳು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಇತರರು ಶಿಬಿರದಲ್ಲಿ ಒಟ್ಟು 131 ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ಸ್ ಭಾಗವಹಿಸಿದ್ದರು.

* ಜುಲೈ 26 ಕಾರ್ಗಿಲ್ ವಿಜಯ ದಿವಸ್ ಆಚರಣೆಯ ಅಂಗವಾಗಿ ವಿಶೇಷ ಕಾರ್ಯಕ್ರಮವನ್ನು ಹಾಲಪ್ಪ ಪ್ರತಿಷ್ಠಾನ, ನ್ಯಾಷನಲ್ ಕೆಡೆಟ್ ಕಾರ್ಪ್ಸ, ಮತ್ತು ಸ್ಕೌಟ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಸಹಯೋಗದೊಂದಿಗೆ ಹುತಾತ್ಮ ವೀರ ಯೋಧರಿಗೆ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ವೀರ ಯೋಧರ ತ್ಯಾಗ ಬಲಿದಾನಗಳನ್ನು ಸ್ಮರಿಸಲಾಯಿತು. ಹುತಾತ್ಮ ಯೋಧರಿಗೆ ಗೌರವ ಸಮರ್ಪಣೆಯನ್ನು ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಕ್ತರು ಗೈಡ್ ಶ್ರೀಮತಿ ಸುಭಾಷಿಣಿ ಆರ್ ಕುಮಾರ್, ಶ್ರೀ ಅಂಜನಪ್ಪ ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀ ಕೆಂಪರಂಗಯ್ಯ ಜಿಲ್ಲಾ ಸಹಾಯಕ ಆಯುಕ್ತರು, ಶ್ರೀ ನವೀನ್ ಕುಮಾರ್ ಜಿಲ್ಲಾ ಸಂಘಟಕರು, ಜಿಲ್ಲಾ ಸಂಸ್ಥೆ ವತಿಯಿಂದ 350 ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* ಸ್ಥಳೀಯ ಸಂಸ್ಥೆ ತುರುವೇಕೆರೆ ತಾಲ್ಲೂಕಿನಲ್ಲಿ ಜುಲೈ 29 ರಂದು ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ಪೋಷಕರ ದಿನಾಚರಣೆಯ ಪ್ರಯುಕ್ತ ಪೋಷಕರ ಸಭೆಯನ್ನು ಆಯೋಜಿಸಲಾಯಿತು. ಸಭೆಯಲ್ಲಿ ಪೋಷಕರಿಗೆ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಯ ಇದರ ಅನುಕೂಲಗಳ ಮಾಹಿತಿ ನೀಡಲಾಯಿತು.



ಉಡುಪಿ

* ಉಡುಪಿ ಜಿಲ್ಲಾ ಸಂಸ್ಥೆಯಿಂದ ಆಗಸ್ಟ್ 02 ರಿಂದ 08ರ ವರೆಗೆ ಕಬ್–ಬುಲ್‌ಬುಲ್, ಸ್ಕೌಟ್–ಗೈಡ್ಸ್ ಶಿಕ್ಷಕರ ಶಿಬಿರವು ಡಾ ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ ಮಣಿಪಾಲದಲ್ಲಿ ನಡೆಯಿತು. ಸುಮಾರು 138 ಶಿಕ್ಷಕರು ಭಾಗವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿ ಇವರು ಶಿಬಿರಕ್ಕೆ ಭೇಟಿಯಾಗಿ ಎಲ್ಲಾ ಶಿಬಿರಾರ್ಥಿಗಳನ್ನು ಪ್ರೋತ್ಸಾಹಿಸಿ ತಾವೆಲ್ಲರೂ ತರಬೇತಿ ಪಡೆದು ತಮ್ಮ ತಮ್ಮ ಶಾಲೆಯಲ್ಲಿ ದಳವನ್ನು ಪ್ರಾರಂಭಿಸುವುದರ ಜೊತೆಗೆ ಒಳ್ಳೆಯ ಸಮಾಜವನ್ನು ಕಟ್ಟೋಣ ಎಂದು ಶಿಕ್ಷಕರನ್ನು ಪ್ರೋತ್ಸಾಹಿಸಿ ಹುರಿದುಂಬಿಸಿದರು. ಎಲ್ಲಾ ಶಿಬಿರಾರ್ಥಿಗಳಿಗೆ, ಹಾಗೂ ಎಲ್ಲಾ ಬೋಧಕ ವರ್ಗದವರಿಗೆ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದ್ದರು. ಫ್ಲಾಕ್ ವಿಭಾಗದ ನಾಯಕಿ ಶ್ರೀಮತಿ ವಿಮಲಾಬಾಯಿ, ಎಲ್.ಟಿ. (ಗೈಡ್) ವಿಭಾಗದ ನಾಯಕಿ ಶ್ರೀಮತಿ ಸುಮನ್ ಶೇಖರ್ ಹಾಗೂ ಸಹ ನಾಯಕ/ನಾಯಕಿಯರು ಉಪನ್ಯಾಸಕರು ಶಿಬಿರದಲ್ಲಿ ಭಾಗವಹಿಸಿದ್ದರು.



* ಆಗಸ್ಟ್ 08 ರಂದು ಸಮಾರೋಪ ಸಮಾರಂಭದಲ್ಲಿ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿ ಇವರು ಶಿಬಿರಕ್ಕೆ ಭೇಟಿ ಕೊಟ್ಟು ಎಲ್ಲಾ ಶಿಬಿರಾರ್ಥಿಗಳನ್ನು ಪ್ರೋತ್ಸಾಹಿಸಿದರು. ತಾವೆಲ್ಲರೂ ತರಬೇತಿ ಪಡೆದು ತಮ್ಮ ತಮ್ಮ ಶಾಲೆಯಲ್ಲಿ ದಳವನ್ನು ಪ್ರಾರಂಭಿಸುವುದರ ಜೊತೆಗೆ ಶಿಕ್ಷಕರನ್ನು ಪ್ರೋತ್ಸಾಹಿಸಿ ಹುರಿದುಂಬಿಸಿದರು. ಈ ಸಮಯದಲ್ಲಿ ಶ್ರೀ ಹರಿಪ್ರಸಾದ್ ರೈ, ಹೆಚ್.ಪಿ.ಆರ್. ಕಾಲೇಜು, ಮಣಿಪಾಲ್ ಶ್ರೀ ರಾಜೇಶ್ ಶೆಟ್ಟಿ ಉಡುಪಿ ತಾಲ್ಲೂಕು ಇಂಡಸ್ಟ್ರಿ ಕೋ–ಆಪರೇಟಿವ್ ಸಿ.ಇ.ಓ. ಸ್ಕೌಟ್ ವಿಭಾಗದ ಶಿಬಿರ ನಾಯಕ ಶ್ರೀ ಆನಂದ್ ಬಿ. ಅಡಿಗ ಎಲ್.ಟಿ. ಫ್ಲಾಕ್, ವಿಭಾಗದ ನಾಯಕಿ ಶ್ರೀಮತಿ ವಿಮಲಾಬಾಯಿ ಎಲ್.ಟಿ. ಗೈಡ್ ವಿಭಾಗದ ನಾಯಕಿ ಶ್ರೀಮತಿ ಸುಮನ್ ಶೇಖರ್ ಹಾಗೂ ಸಹ ನಾಯಕ/ಕಿಯವರು ಉಪಸ್ಥಿತರಿದ್ದರು.

* ಆನಂದ ತೀರ್ಥ ವಿದ್ಯಾಲಯ ಪಾಜಕದಲ್ಲಿ ಪೋಷಕರ ದಿನಾಚರಣೆಯನ್ನು ಆಗಸ್ಟ್ 08 ರಂದು ಆಚರಿಸಲಾಯಿತು. ಕಬ್, ಬುಲ್ ಬುಲ್, ಸ್ಕೌಟ್ ಗೈಡ್ಸ್‌ಗಳು ಗುಲಾಬಿಯನ್ನು ನೀಡಿ ಪೋಷಕರನ್ನು ಗೌರವಿಸಿದರು. ಪೋಷಕರಿಗಾಗಿ ಪೋಸ್ಟರ್ ತಯಾರಿ, ದೇಶ ಭಕ್ತಿ ಗೀತಗಾಯನ, ನೃತ್ಯ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ವಿಜೇತರಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು. ಶಾಲೆಯ ಟ್ರಸ್ಟಿ ಗಳಾದ ಶ್ರೀಯುತ ಸುದರ್ಶನ್ ರಾವ್ ಶ್ರೀಯುತ ಲಕ್ಷ್ಮೀನಾರಾಯಣ ಉಪಾಧ್ಯಾಯ

ಪ್ರಾಂಶುಪಾಲರಾದ ಡಾ। ಗೀತಾ ಕೋಟ್ಯಾನ್, ಕಾಲೇಜಿನ ಪ್ರಾಂಶುಪಾಲರಾದ ಶ್ರೀಯುತ ವಿಜಯ್ ರಾವ್‌ರವರು ಭಾಗವಹಿಸಿದ್ದರು.

* ಜುಲೈ 30 ರಂದು ಉಡುಪಿ, ಬ್ರಹ್ಮವಾರ, ಕಾಪು, ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಭೇಟಿ ನೀಡಿದರು. ಗ್ರೀನ್ ಪಾರ್ಕ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಬ್-ಬುಲ್‌ಬುಲ್, ಸ್ಕೌಟ್-ಗೈಡ್ಸ್‌ಗಳ ದಳ ಉದ್ಘಾಟನೆಯು ಪ್ರಾಂಶುಪಾಲರ ನೇತೃತ್ವದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿ ಇವರು ಉದ್ಘಾಟಿಸಿದರು. ಎಸ್.ಎಂ.ಎಸ್. ಆಂಗ್ಲ ಮಾಧ್ಯಮ ಶಾಲೆ ಬ್ರಹ್ಮಾವರದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿ ಇವರು ಬ್ರಹ್ಮಾವರ ಸ್ಥಳೀಯ ಸಂಸ್ಥೆಯ ಮಹಾಸಭೆಯಲ್ಲಿ ಪಾಲ್ಗೊಳ್ಳುತ್ತಾ ಬ್ರಹ್ಮವಾರ, ಕುಂದಾಪುರ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳ ಭೇಟಿಯನ್ನು ಮಾಡಲಾಯಿತು. ಆನಂದ ತೀರ್ಥ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ಕಾಪು ಸ್ಥಳೀಯ ಸಂಸ್ಥೆ ಗೀತ ಗಾಯನ ಕಾರ್ಯಕ್ರಮದಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

* ಜುಲೈ 30 ರಂದು ಡಾಕ್ಟರ್ ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರದಲ್ಲಿ ನಡೆಯುತ್ತಿದ್ದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಗಳ ಪ್ರಾಥಮಿಕ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾ ಹಾಗೂ ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿ ಇವರು ಭಾಗವಹಿಸಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಮೇಲಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಶ್ರೀಮತಿ ಜ್ಯೋತಿ ಜೆ.ಪಿ. ಜಿಲ್ಲಾ ಆಯುಕ್ತರು ಶ್ರೀ ಎಂ. ಪ್ರಭಾಕರಭಟ್, ರಾಜ್ಯ ಸಂಘಟನಾ ಆಯುಕ್ತರು ಶ್ರೀ ಆನಂದ್ ಅಡಿಗ ಇವರುಗಳು ಉಪಸ್ಥಿತರಿದ್ದರು.



* ಜುಲೈ 31 ರಂದು ಕಾರ್ಕಳ ತಾಲ್ಲೂಕಿನ ವರ್ಧಮಾನ ಆಂಗ್ಲ ಮಾಧ್ಯಮ ಶಾಲೆ, ಶ್ರೀ ರವಿಶಂಕರ್ ಗುರೂಜಿ ಆಂಗ್ಲ ಮಾಧ್ಯಮ ಶಾಲೆ, ಕ್ರೈಸ್ಟ್ ಪದವಿಪೂರ್ವ ಕಾಲೇಜು ಕಾರ್ಕಳದ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಭೇಟಿನೀಡಿ ಸ್ಕೌಟ್ಸ್-ಗೈಡ್ಸ್ ಘಟಕಗಳನ್ನು ಉದ್ಘಾಟಿಸಿದರು. ಶ್ರೀ ಜಯಕರಶೆಟ್ಟಿ ಇಂದ್ರಾಣಿ ಜಿಲ್ಲಾ ಮುಖ್ಯಆಯುಕ್ತರು, ಶ್ರೀಮತಿ ಜೆ.ಪಿ. ಜಿಲ್ಲಾ ಆಯುಕ್ತರು (ಗೈಡ್ಸ್) ಹಾಗೂ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಆಗಸ್ಟ್ 12 ರಂದು ಬೈಂದೂರು ಸ್ಥಳೀಯ ಸಂಸ್ಥೆಯ ವಾರ್ಷಿಕ ಮಹಾಸಭೆ ಮತ್ತು ಪುನಶ್ಚೇತನ ಕಾರ್ಯಾಗಾರ ಶಿಬಿರವು ಶ್ರೀ ನರಸಿಂಹ ದೇವಾಡಿಗರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಮಯದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯವರು ಭೇಟಿ ನೀಡಿ ಪ್ರತಿ



ಶಾಲೆಯಲ್ಲಿ ಒಂದು ದಳವನ್ನು ಕಡ್ಡಾಯವಾಗಿ ಪ್ರಾರಂಭಿಸಿ ಮಕ್ಕಳ ಹಾಗೂ ಶಿಕ್ಷಕರು ಪ್ರಗತಿಪರ ಶಿಕ್ಷಣ ಪಡೆಯುವಂತೆ ತಿಳಿಸುವುದರ ಜೊತೆಗೆ ಶಿಕ್ಷಣ ಇಲಾಖೆಯು ಎಲ್ಲಾ ಸಹಾಯ, ಸಹಕಾರ ನೀಡುತ್ತದೆ ಎಂದು ಪ್ರೋತ್ಸಾಹಿಸಿದರು. ಈ ಸಮಯದಲ್ಲಿ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಜಿಲ್ಲಾ ಸಂಸ್ಥೆ ಉಡುಪಿಯಲ್ಲಿ ಆಗಸ್ಟ್ 15 ರಂದು ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ ಸ್ವಾತಂತ್ರ ದಿನಾಚರಣೆಯ ಪ್ರಯುಕ್ತ 75ನೇ ತಿಂಗಳ ಸ್ವಚ್ಛತಾ ಕಾರ್ಯಕ್ರಮವು ನಡೆಸಲಾಯಿತು. ಈ ಕಾರ್ಯಕ್ರಮವು ರೈಲ್ವೆ ಆಫೀಸರ್ ಆಗಿರುವಂತಹ ಶ್ರೀ ಎಸ್.ಕೆ. ಭಟ್ ಇವರು ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಕರ್ಮೆಲ್ ಆಂಗ್ಲ ಮಾಧ್ಯಮ ಶಾಲೆಯ ಗೈಡ್ಸ್, ಮಹಿಳಾ ರೇಂಜರ್ಸ್ ಮುಕ್ತ ದಳ ರೋವರ್ ರೇಂಜರ್ಸ್‌ಗಳು ಶಿಕ್ಷಕರು, ಭಾಗವಹಿಸಿದ್ದರು.



* ಜಿಲ್ಲಾ ಸಂಸ್ಥೆ ಉಡುಪಿಯಲ್ಲಿ ಆಗಸ್ಟ್ 15 ರಂದು ಸ್ವಾತಂತ್ರ ದಿನಾಚರಣೆಯ ಪ್ರಯುಕ್ತ ಉಡುಪಿ ನಗರ ಸಭೆಯ ಸಹಯೋಗದಲ್ಲಿ ಮಲ್ಪೆ ಕಡಲ ತೀರದಲ್ಲಿ ಸ್ವಚ್ಛತಾ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮವು ಮಾನ್ಯ ಪೌರಾಯುಕ್ತರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ವಿದ್ಯೋದಯ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್-ಗೈಡ್ಸ್‌ಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.





ವಿಜಯನಗರ

* ಕಾರ್ಗಿಲ್ ವಿಜಯೋತ್ಸವ ದಿನದ ಅಂಗವಾಗಿ ಆಗಮಿಸಿದ ಕಾರ್ಗಿಲ್ ಯುದ್ಧದಲ್ಲಿ ಹೋರಾಡಿದ. ವಿಜಯ ಪತಾಕೆ ಹಾರಿಸಿ ಜೀವಂತವಾಗಿ ಹಿಂದಿರುಗಿ ಬಂದ ಭಾರತ ಮಾತೆಯ ಅದೃಷ್ಟವಂತ, ಮೃತ್ಯುಂಜಯರಾದ ಸೈನಿಕ ಶ್ರೀ ಸಣ್ಣಸೂರಯ್ಯನವರು ನೇತ್ರನಹಳ್ಳಿ ಮತ್ತೊಬ್ಬರು ಶ್ರೀ ಎಸ್.ಕೆ. ಬಸವರಾಜ ಕೊಂಡ್ಲಹಳ್ಳಿ ಇವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಕೂಡ್ಲಿಗಿ ತಾಲ್ಲೂಕು ವಿಜಯನಗರ ಜಿಲ್ಲೆ. GHPS ತಾಯಕನಹಳ್ಳಿ ಶಾಲೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಿ ಸನ್ಮಾನಿಸಲಾಯಿತು. ಶ್ರೀಮತಿ ಶಾಂತಕುಮಾರಿ, ಶ್ರೀ ಶಿವಪುತ್ರಸ್ವಾಮಿ ಹಾಗೂ ಶ್ರೀ ತಿಪ್ಪೇಸ್ವಾಮಿ ತಾಯಕನಹಳ್ಳಿ ಶಾಲೆಯ ಮುಖ್ಯಗುರುಗಳು ಮತ್ತು ಸಿಬ್ಬಂದಿ ವರ್ಗ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



* ಸ್ಥಳೀಯ ಸಂಸ್ಥೆ ಕೂಡ್ಲಿಗಿ ವತಿಯಿಂದ ತಾಲೂಕು ಮಟ್ಟದ ಸ್ಕೌಟ್ಸ್–ಗೈಡ್ಸ್ ಸಮಾವೇಶವನ್ನು ಕೂಡ್ಲಿಗಿ ಪಟ್ಟಣದ ಜ್ಞಾನಭಾರತಿ ವಿದ್ಯಾಮಂದಿರದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಮಾವೇಶದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಪದ್ಮನಾಭಕರಣಂರವರು ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಬಿ. ಮಂಜುನಾಥ್‌ರವರು ವಿಜಯನಗರ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥಪ್ಪ, ರಾಜ್ಯ ಸಂಸ್ಥೆಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಮಲ್ಲೇಶ್ವರಿ ಜುಜಾರೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷರಾದ ಶ್ರೀ ಪಿ. ಶಿವರಾಜ್‌ರವರು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಬಿ.ಬಿ. ಶಿವಾನಂದರವರು ಶಿಕ್ಷಣ ಸಂಯೋಜಕರಾದ ಶ್ರೀ ಮಂಜುನಾಥರವರು ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ರೇಣುಕಾರವರು. ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರತಿನಿಧಿಗಳಾದ ಶ್ರೀಮತಿ ಶಾಂತಕುಮಾರಿ ಮತ್ತು ತಾಲೂಕಿನ ವಿವಿಧ ಶಾಲೆಗಳಿಂದ ಆಗಮಿಸಿದ ದಳ ನಾಯಕ ನಾಯಕಿಯರು ಭಾಗವಹಿಸಿದ್ದರು. ತಾಲೂಕು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಟಿ. ತಿಂದಪ್ಪ ಸ್ವಾಗತಿಸಿದರು. ಶ್ರೀ ಶಿವಪುತ್ರಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಎನ್. ಸರ್ವಮಂಗಳ ವರದಿ ವಾಚನ ಮಾಡಿದರು. ಕಾರ್ಯಕ್ರಮ ನಿರೂಪಣೆಯನ್ನು ಶ್ರೀಮತಿ ಲೋಕಮಾತೆ ನಿರ್ವಹಿಸಿದರು ಸಭೆಯಲ್ಲಿ ಉಪಸ್ಥಿತರಿದ್ದ ಗಣ್ಯಮಾನ್ಯರು ಶುಭಹಾರೈಸಿ ಮಾತನಾಡಿದರು. ಈ ಸಂದರ್ಭದಲ್ಲಿ ಫ್ಲಾಕ್ಲೇಡರ್ ಶ್ರೀಮತಿ ವಿಜಯಲಕ್ಷ್ಮಿ ಅವರು ಗಣ್ಯರ ಸಮ್ಮುಖದಲ್ಲಿ ಸ್ಥಳೀಯ ಸಂಸ್ಥೆಗೆ 5000 ರೂಪಾಯಿಗಳ ದೇಣಿಗೆ ನೀಡಿದರು. ಕಾರ್ಯಗಾರದಲ್ಲಿ ದಳ ಮುನ್ನಡೆಸುವುದು OYMS ಹಾಗೂ ಇತರ ವಿಷಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಕೊನೆಯಲ್ಲಿ ತಾಲೂಕು ಖಜಾಂಚಿಗಳಾದ ಶ್ರೀ ವಿ. ಅನುಮೇಶ್ ವಂದನಾರ್ಪಣೆ ಸಲ್ಲಿಸಿದರು.



ವಿಜಯಪುರ

* ಜುಲೈ 24 ರಂದು ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಟಿ. ಭೂಬಾಲನ್, ಐ.ಎ.ಎಸ್. ಅವರನ್ನು ಭೇಟಿಯಾಗಿ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಲಾಯಿತು. ಶ್ರೀ ಬಿ.ಎಸ್. ಕಡಕಭಾವಿ ತಹಶಿಲ್ದಾರ್‌ರವರು ಇಂಡಿ, ಶ್ರೀ ಅಬೀದ್ ಗದ್ಯಾಳ, ಎ.ಸಿ., ಇಂಡಿ, ಶ್ರೀ ಮಹಾಂತೇಶ ಹಂಗರಗಿ, ಮುನಿಸಿಪಾಲಿಟಿ ಅಧಿಕಾರಿಗಳು, ಶ್ರೀ ಮಾಳಗೊಂಡ, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಇಂಡಿ ಕಾಲೇಜಿನ ಪ್ರಾಚಾರ್ಯರಾದ ಶ್ರೀ ರಮೇಶ್‌ರವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಇಂಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಬಿ. ಪಾಟೀಲ್, ಕೋಶಾಧ್ಯಕ್ಷರಾದ ಶ್ರೀ ಬಸವರಾಜ ಗೊರನಾಳ, ಎಸ್.ಜಿ.ವಿ. ರಾಜಶೇಖರ್ ಖೇಡಗಿರವರು ಉಪಸ್ಥಿತರಿದ್ದರು.



ಯಾದಗಿರಿ

* ಆಗಸ್ಟ್ 06 ಮತ್ತು 07 ರಂದು ಎಸ್.ಎಂ.ಸಿ. ಜೈನ್ ಶಾಲೆ ಶಹಾಪುರನಲ್ಲಿ ರಾಜ್ಯ ಪುರಸ್ಕಾರ ಪೂರ್ವ ತಯಾರಿ ಶಿಬಿರ ಆಯೋಜಿಸಲಾಗಿತ್ತು. ಈ ಶಿಬಿರದ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಆನಂದ ಬಡಿಗೇರಿ ಹಾಗೂ ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಸುಜಾತಾ ಪಾಟೀಲ ಕಾರ್ಯನಿರ್ವಹಿಸಿದರು. ಶಿಬಿರದ ಉದ್ಘಾಟನೆಯನ್ನು ಶ್ರೀ ಶಿವರಾಜ ದೇವಮುಖ ಅಧ್ಯಕ್ಷರು ಸ್ಥಳೀಯ ಸಂಸ್ಥೆ ಶಹಾಪುರ ನೆರವೇರಿಸಿ. ಎಲ್ಲ ಸ್ಕೌಟ್ ಗೈಡ್‌ಗಳು ಕೇವಲ ರಾಜ್ಯ ಪುರಸ್ಕಾರದ ವರೆಗೆ ಸೀಮಿತವಾಗದೆ ಜೀವನದಲ್ಲಿ ಪ್ರತಿ ಕ್ಷಣವೂ ಸ್ಕೌಟಿಂಗ್‌ನ್ನು ಆಳಡಿಸಿಕೊಳ್ಳಬೇಕು ಎಂದು ಹೇಳಿದರು. ಅಲ್ಲದೆ ಯಾವುದೇ ಸ್ಕೌಟ್ ಚಟುವಟಿಕೆ, ತರಬೇತಿಗೆ ಸದಾ ಬೆಂಬಲವಾಗಿ ಸಹಕಾರ ಮಾಡುವುದಾಗಿ ತಿಳಿಸಿದರು. ಮುಖ್ಯ ಅತಿಥಿಗಳಾದ ಶ್ರೀ ಸುಧಾಕರ ಗುಡಿ, ಸಹಾಯಕ ಆಯುಕ್ತರು ಮಾತನಾಡಿ ಸಾಮಾಜಿಕ ಸೇವೆ ವಿಪತ್ತು ಸಂಭವಿಸಿದಾಗ ಸ್ಕೌಟ್ ಗೈಡ್‌ಗಳು ಸೇವೆಗಾಗಿ ಮುಂದಿರಬೇಕು ಎಂದರು. ಶ್ರೀ ಬಸವರಾಜ ಎಂ. ಗೋಗಿ ಮಾತನಾಡಿ ಮಕ್ಕಳು ತಿಂಗಳಿಗೆ ಒಂದರಂತೆ ಶಾಲಾ ಹಂತದಲ್ಲಿ ಶಿಬಿರ ಆಯೋಜಿಸಿ ಭಾಗವಹಿಸಿದಲ್ಲಿ ಸ್ಕೌಟಿಂಗ್ ವಿಷಯ ಹಾಗೂ ಅದರ ಮೂಲ ಉದ್ದೇಶಗಳು ಕರಗತವಾಗುತ್ತದೆ ಎಂದರು. ಅಲ್ಲದೆ ಈ ಕಾರ್ಯಕ್ರಮದಲ್ಲಿ ಶ್ರೀ ಮರೆಪ್ಪ ಚಂಡು ಮಾಜಿ ಸೈನಿಕರು ಹಾಗೂ ಉಪಾಧ್ಯಕ್ಷರು ಸ್ಥಳೀಯ ಸಂಸ್ಥೆ, ಶ್ರೀ ಯಂಕಪ್ಪ ಸ್ಕೌಟ್ ಮಾಸ್ಟರ್, ಶ್ರೀಮತಿ ಶೀಲಾ, ಗೈಡ್ ಕ್ಯಾಪ್ಟನ್, ಶ್ರೀ ಚಂದ್ರು ಗೋಗಿ, ಸ್ಕೌಟ್ ಮಾಸ್ಟರ್ ಮತ್ತು ರೋವರ್ಸ್–ರೇಂಜರ್ಸ್‌ಗಳು ಹಾಜರಿದ್ದರು. ಕಾರ್ಯಕ್ರಮವನ್ನು ಜೈನ್ ಶಾಲೆಯ ಗೈಡ್ ನಿರೂಪಿಸಿದರು.



ಬೆಂಕಿ: ಉದಾಸೀನ ಕೂಡದು

("ಬೆಂಕಿ ಮತ್ತು ನೀರಿನೊಡನೆ ಸರಸ ಬೇಡ" ಎಂದು ಹಿರಿಯರು ಎಚ್ಚರಿಸುತ್ತಿದ್ದುದು ಜ್ಞಾಪಕವಿದೆ)



– ಎಂ.ಎನ್. ಷಡಕ್ಷರಿ
ಜಿಲ್ಲಾ ಮುಖ್ಯ ಆಯುಕ್ತರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಿಕ್ಕಮಗಳೂರು



ಕೆಲವು ವರ್ಷಗಳ ಹಿಂದೆ ನಾಲ್ಕು ಜನ ಉತ್ಸಾಹಿ ಯುವಕರು ಚಿಕ್ಕಮಗಳೂರಿನಿಂದ ಚಾರಣ ಹೊರಟು ಕರ್ನಾಟಕದ ಅತೀ ಎತ್ತರದ ಶಿಖರ ಮುಳ್ಳಯ್ಯನಗಿರಿ ಏರಲು ಕಾಲ್ದಾರಿಯಾದ ಸರ್ಪನ ಹಾದಿಯ ಮೂಲಕ ಈ ಪ್ರಯಾಸಕರ ಏರಿಕೆ ಪ್ರಾರಂಭಿಸಿದರು. ಸೂರ್ಯ ನೆತ್ತಿಯ ಮೇಲೆ ಬಂದಿದ್ದ, ಈ ಉತ್ಸಾಹಿ ಯುವಕರಿಗೆ ಮುಂದೆ ಎದುರಾಗ ಬಹುದಾದ ಬೃಹತ್ ಸಮಸ್ಯೆಯ ಅರಿವೇ ಇರಲಿಲ್ಲ. ದಣಿವಾರಿಸಿಕೊಳ್ಳಲು ಕೂತಾಗ ಎಲ್ಲೋ ಹೊಗೆಯ ವಾಸನೆ. ಗಿರಿ ಶ್ರೇಣಿಯಲ್ಲಿ ಬೇಸಿಗೆಯಲ್ಲಿ ಕಾಡ್ಗಿಚ್ಚು ಸರ್ವೇ ಸಾಮಾನ್ಯವಾದ್ದರಿಂದ ಅಷ್ಟಾಗಿ ತಲೆಕೆಡಿಸಿಕೊಳ್ಳಲಿಲ್ಲ. ವಿಶ್ರಮಿಸಿ ಏಳುವ ಹೊತ್ತಿಗೆ ಕೆಳಗಿಂದ ಬೆಂಕಿ ಕಾಣಿಸಿಕೊಂಡಿತು. ಬೆಳೆದ ಒಣಗಿದ ಹುಲ್ಲು ಮತ್ತು ಬೀಸುವ ಗಾಳಿಯು ವೇಗವಾಗಿ ಬೆಂಕಿ ಹರಡಲು ಕಾರಣವಾದುದ್ದು. ಈಗಾಗಲೇ ದಣಿದಿದ್ದ ಯುವಕರು ಆದಷ್ಟು ವೇಗವಾಗಿ ಬೆಟ್ಟ ಹತ್ತಲು ಪ್ರಾರಂಭಿಸಿದರು. ಆವರಿಸುತ್ತಿದ್ದ ಹೊಗೆಯೂ ಕೂಡಾ ಅವರ ವೇಗವನ್ನು ಕಡಿಮೆ ಮಾಡಿತು. ಇಬ್ಬರು ಹೇಗೋ ಸುಟ್ಟ ಗಾಯಗಳಿಂದ ಬದುಕುಳಿದರು. ಇಬ್ಬರು ಮಾತ್ರ ಗಾಯದ ತೀವ್ರತೆಯಿಂದ ಚಿಕಿತ್ಸೆ ಫಲಿಸದೆ ಮೃತಪಟ್ಟರು. ಇಂತಹ ಪರಿಸ್ಥಿತಿ ಯಾರಿಗಾದರೂ ಬರಬಹುದು. ಇತ್ತೀಚೆಗೆ ಕ್ಯಾಲಿಫೋರ್ನಿಯಾದ ಕಾಡುಗಳಲ್ಲಿ ಮನೆಯಿಂದ, ಕಾರಿನಿಂದ ಹೊರಬರಲಾಗದೆ ಸುಟ್ಟು ಕರಕಲಾದ ದೇಹಗಳು ದೊರೆತ ಸುದ್ದಿ ಮೈನಡುಗಿಸುತ್ತವೆ. ಹರಡುವ ಕಾಡ್ಗಿಚ್ಚು ಸಮಯವನ್ನೇ ಕೊಡುವುದಿಲ್ಲ ಆದ್ದರಿಂದ ಅಗ್ನಿದೇವನ ಬಗ್ಗೆ ಭಕ್ತಿ ಮತ್ತು ಭಯ ಎರಡೂ ಇರುವುದು ಒಳಿತು. ಕಾಡ್ಗಿಚ್ಚಿನ ಆಗಾಧತೆ ಮತ್ತು ಎದುರಿಸಬಹುದಾದ ಸಮಸ್ಯೆಗಳ ಅರಿವಿದ್ದು ಕೆಲವು ಮಾಹಿತಿ ತಿಳಿದಿದ್ದರೆ ಆದಷ್ಟು ಮಟ್ಟಿಗೆ ಎದುರಿಸಲು ಸನ್ನದ್ದರಾಗಬಹುದು. ಬೆಂಕಿ ಆಕಸ್ಮಿಕ ಎದುರಿಸಲು ನಾವು ಕೆಲವು ರಕ್ಷಣಾ ಕ್ರಮಗಳನ್ನು ಅರಿತಿರುವುದು ಅನಿವಾರ್ಯ ಹಾಗೂ ಮುಂದಾಗಬಹುದಾದ ಅನಾಹುತವನ್ನು ತಪ್ಪಿಸಬಹುದು.

ಸಲಹೆಗಳು:

1. ಚಾರಣ ಅಥವಾ ಶಿಬಿರದ ಯೋಚನೆ ಮಾಡಬೇಕಾದರೆ ಬೆಂಕಿಯ ಸಮಸ್ಯೆಯನ್ನು ಕೂಡಾ ಗಂಭೀರವಾಗಿ ಪರಿಗಣಿಸಬೇಕಾದ ತಯಾರಿ ಮಾಡಿಕೊಳ್ಳಬೇಕು (ಅನಿರೀಕ್ಷಿತ ತುರ್ತು ಪರಿಸ್ಥಿತಿ ಎದುರಿಸಲು ಸಿದ್ದರಿರಬೇಕು)
2. ಬೆಂಕಿಯ ಸಾಧ್ಯತೆ, ಗಾಳಿ ಬೀಸುವ ದಿಕ್ಕು ಪ್ರದೇಶದ ಮೇಲ್ನೋಟ ಲಕ್ಷಣಗಳು, ತಪ್ಪಿಸಿಕೊಳ್ಳಲು ಸಾಧ್ಯವಾಗುವ ಜಾಡುಗಳ ಬಗ್ಗೆ ತಿಳುವಳಿಕೆಯಿಂದಿರಬೇಕು.
3. ಗಾಳಿ ಬೀಸುವ ದಿಕ್ಕು ಮತ್ತು ಭೂಮಿಯ ಮೇಲ್ನೋಟ ಬಹಳ ಮುಖ್ಯ. ಬೆಂಕಿ ಯಾವಾಗಲೂ ಗುಡ್ಡದ ಮೇಲ್ಭಾಗಕ್ಕೆ ಚಲಿಸುವುದು ಸ್ವಾಭಾವಿಕ, ಏಕೆಂದರೆ ಬಿಸಿಗಾಳಿ ಮೇಲಕ್ಕೆ ಚಲಿಸುತ್ತದೆ.
4. ನಾವಿರುವ ಸ್ಥಳದ ಸುತ್ತಲೂ ಅಪಾಯದ ಸಮಯದಲ್ಲಿ ಕೂಡಲೇ ತಪ್ಪಿಸಿಕೊಳ್ಳಬಹುದಾದ ಹಾದಿಯನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ಉದಾ:– ಬಯಲು, ರಸ್ತೆ, ಬೋಳುಗುಡ್ಡ ಅಥವಾ ನೀರು.
5. ಸಾಮಾನ್ಯವಾಗಿ ದೊಡ್ಡ ಮರಗಳು ಬಯಲಿಗಿಂತ ಹೆಚ್ಚಾಗಿ ತೇವವನ್ನು ಹಿಡಿದಿಟ್ಟುಕೊಳ್ಳುತ್ತವೆ. ಆದ್ದರಿಂದ ಬೆಂಕಿಯಿಂದ ತಪ್ಪಿಸಿಕೊಳ್ಳಲು ಬಯಲಿಗಿಂತ ಮರಗಳ ತೋಪು ಉತ್ತಮ.
6. ಬೆಂಕಿ ಹರಡುವುದಕ್ಕಿಂತ ವೇಗವಾಗಿ ಏರಲು ಸಾಧ್ಯವೇ? ಹೇಳುವುದು ಕಷ್ಟ, ಒಣಹವೆಯಲ್ಲಿ ಬೆಂಕಿ 20 ಕಿಲೋಮೀಟರ್‌ಗೂ ಹೆಚ್ಚು ವೇಗವಾಗಿ ಚಲಿಸಬಲ್ಲದು.
7. ಬೆಂಕಿಯಿಂದ ಉಗುಳಲ್ಪಡುವ ಕಿಡಿಗಳು ಬಹಳ ವೇಗವಾಗಿ ಚಿಮ್ಮಿ ನಮ್ಮ ಮುಂದಿನ ಹಾದಿಯನ್ನು ಆವರಿಸಿಕೊಳ್ಳಬಹುದು.
8. ಅನಿವಾರ್ಯವಾದಾಗ ಕಡಿಮೆ ಶಾಖವಿರುವ ಉರಿಯ ಮೂಲಕ ಈಗಾಗಲೇ ಸುಟ್ಟು ಹೋಗಿರುವ ಪ್ರದೇಶಕ್ಕೆ ನುಗ್ಗುವುದು ಸೂಕ್ತ (ಸ್ವಲ್ಪ ಸುಟ್ಟಗಾಯಗಳಾಗಬಹುದು, ಆದರೆ ಪ್ರಾಣ ಉಳಿಸಿಕೊಳ್ಳಬಹುದು)
9. ತಪ್ಪಿಸಿಕೊಳ್ಳಲು ಆಗುವುದೇ, ಇಲ್ಲ ಎನ್ನುವ ಸನ್ನಿವೇಶದಲ್ಲಿ, ಒಂದು ಕಂದಕ ಅಥವಾ ಹಸಿಯಾದ ತಗ್ಗು ಪ್ರದೇಶದ ಇಳಿಜಾರು ಕಡೆಗೆ ಸ್ವಲ್ಪ ಗುಳಿಮಾಡಿಕೊಂಡು ದಪ್ಪನೆಯ ಗೋಣಿ ಅಥವಾ ಹೊದಿಕೆಯನ್ನು ಇಳಿಬಿಟ್ಟು ಕಾಯುವುದು.
10. ಅತ್ಯಂತ ತುರ್ತು ಪರಿಸ್ಥಿತಿಯಲ್ಲಿ ಒಂದು ಗುಂಡಿಯ ಒಳಗೆ ಕುಳಿತು ಅಥವಾ ಮಲಗಿ ಮೈಮೇಲೆ ಮಣ್ಣನ್ನು ಎಳೆದುಕೊಂಡು (ಉಸಿರಾಡಲು ಜಾಗ ಬಿಟ್ಟುಕೊಂಡು) ಬೆಂಕಿಯು ದಾಟುವ ತನಕ ಸ್ವಾಭಾವಿಕವಾಗಿ ಉಸಿರಾಡುತ್ತಾ ಕಾಯುವುದು.
11. ಅಮೆರಿಕಾದ ಅರಣ್ಯ ಸೇವಾ ಇಲಾಖೆಯ ಪ್ರಕಾರ 10 ರಲ್ಲಿ 9 ಬೆಂಕಿ ಅನಾಹುತಗಳು ಸರಿಯಾಗಿ ಆರಿಸದೆ ಇರುವ ಶಿಬಿರಾಗ್ನಿಗಳಿಂದ ಎಂದು ಅಂದಾಜಿಸುತ್ತದೆ. ಆದ್ದರಿಂದ ಪೂರ್ತಿ ಕೆಂಡ ನಂದುವ ತನಕ ಜಾಗ ಬಿಡಬೇಡಿ ಹಾಗೂ ಉರಿಯುವಾಗಲೂ ಕಿಡಿಗಳು ಹಾರುವುದರ ಬಗ್ಗೆ ಜಾಗರೂಕತೆಯಿರಲಿ.
12. ಶಿಬಿರಾಗ್ನಿಗೆ ಬೆಂಕಿ ಗುಂಡಿಗಳಿಲ್ಲದಿದ್ದಲ್ಲಿ ಸುತ್ತಲೂ ಎಲೆಗಳು, ಕಡ್ಡಿಗಳು ಮತ್ತಿತರ, ಹೊತ್ತಿಕೊಳ್ಳಲು ಸಾಧ್ಯವಿರುವ ವಸ್ತುಗಳನ್ನು ತೆಗೆದು ಒಂದು ವೃತ್ತಾಕಾರದಲ್ಲಿ ಸುತ್ತಲೂ ಒದ್ದೆ ಮಾಡುವುದು ಸೂಕ್ತ.
13. ಶಿಬಿರಾಗ್ನಿ ಆದಷ್ಟೂ ಸಣ್ಣದಾಗಿರಲಿ ಮತ್ತು ಹೋಗುವಾಗ ನೀರು ಹಾಕಿ, ಕೆಂಡದಿಂದ ಬರುವ "ಶ್" ಶಬ್ದ ನಿಂತ ನಂತರವೇ ಪೂರ್ಣ ಬೆಂಕಿ ನಂದಿದೆಯೆಂಬ ಖಾತರಿ ಮಾಡಿಕೊಳ್ಳಬೇಕು.
14. ಶಾಂತವಾಗಿರಿ, ಕಾಡ್ಗಿಚ್ಚು ಇರುವುದಕ್ಕಿಂತ ಹತ್ತಿರ ಕಾಣುತ್ತದೆ ಕಾರಣ ಹೊಗೆ ಜ್ವಾಲೆಯ ಹಬೆ ಮತ್ತು ತೊನೆದಾಟದಿಂದ.
15. ಬೆಂಕಿ ನಿಮಗಿಂತ ವೇಗವಾಗಿ ಚಲಿಸಬಲ್ಲದು ತಿಟ್ಟಿನ ಕಡೆಗೆ ಬೆಂಕಿ, ಇಳಿಜಾರಿಗಿಂತ ನಾಲ್ಕು ಪಟ್ಟು ವೇಗವಾಗಿ ಚಲಿಸಬಲ್ಲದು.
16. ಬೆನ್ನಿಗೆ ಹಾಕುವ ಚೀಲವಿದ್ದರೆ (ಅದು ಸಾಧಾರಣವಾಗಿ ಕೃತಕ ನಾರಿನಿಂದ ತಯಾರಿಸಲ್ಪಟ್ಟಿರುತ್ತದೆ) ಅದನ್ನು ಕೂಡಲೇ ತ್ಯಜಿಸುವುದು ಕ್ಷೇಮ.
17. ಅನಿವಾರ್ಯವಾದಾಗ ಬೆಂಕಿ ನಮ್ಮನ್ನುದಾಟಿ ಹೋಗುವಾಗ ಮುಖ ಕೆಳಗೆ ಮಾಡಿ ಮಲಗುವುದು ಕ್ಷೇಮ

ಕೊನೆಯದಾಗಿ:– ಸುಟ್ಟ ಮತ್ತು ಬೆಂದ ಗಾಯಗಳನ್ನು ಉಪಚಾರ ಮಾಡಲು ಪ್ರಥಮಚಿಕಿತ್ಸೆ ಪೆಟ್ಟಿಗೆ ಸಿದ್ದವಾಗಿರಲಿ, ಅಡಿಗೆ ಸೋಡ, ಬರ್‌ನಾಲ್, ಪಿಕ್‌ರಿಕ್ ಆಸಿಡ್, ಹೈಡ್ರೋಜನ್ ಪರಾಕ್ಸೈಡ್ ಇತರೆ, ಇರಬೇಕು. ಗಾಬರಿಯಾಗದೆ ಶಾಂತವಾಗಿ ಯೋಚಿಸಿದಲ್ಲಿ ಬೆಂಕಿಯಿಂದಲೂ ಬಚಾವಾಗಬಹುದು.

ಕ್ಯಾಲಿಫೋರ್ನಿಯನ್ ಕಾಂಡೋರ್ ಮತ್ತು ಕಾಡ್ಗಿಚ್ಚಿನ ನಂಟು

ಪುಟ್ಟ ಕಾಡ್ಗಿಚ್ಚು ಉಂಟು ಮಾಡುವ ಬಯಲು, ಮೊಲಗಳ ಅವಶ್ಯಕತೆ. ಕಾಂಡೋರ್ ಪಕ್ಷಿಯ ಆಹಾರ ಈ ಮೊಲಗಳು.
ಬೇಕಾದ ಕ್ಯಾಲ್ಸಿಯಂ ದೊರಕುವುದು ಈ ಮೊಲದಿಂದ. ಮೊಲದ ಕೊರತೆಯಿಂದ ಕಾಂಡೋರ್ ಮೂಳೆಗಳು ದುರ್ಬಲವಾಗಿ ಹಾರಲು ಕಷ್ಟವಾಗುತ್ತದೆ. ಹಾಗಾಗಿ ಕಾಂಡೋರ್ ಸಂಖ್ಯೆ ಕ್ಷೀಣಿಸುತ್ತಿದೆ. –ಪ್ರಕೃತಿ ಒಂದು ವಿಸ್ಮಯ.

ವಚನ ಧರ್ಮಸಾರ

– ಸಿ.ವಿ. ತಿರುಮಲರಾವ್
ಸದಸ್ಯರು, ಪ್ರಕಟಣಾ ಸಮಿತಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಈ ಪುಸ್ತಕ ಕನ್ನಡ ಸಾಹಿತ್ಯದ ಮಣಿ ಮಕುಟದಂತಿದೆ. ಇದನ್ನು ಬರೆದ ಎಂ.ಆರ್. ಶ್ರೀನಿವಾಸಮೂರ್ತಿ ಕರ್ನಾಟಕ ಸ್ಕೌಟ್ ಮತ್ತು ಗೈಡ್ಸ್ ವಾರ್ತಾ ಪತ್ರಿಕೆಯ ಮೊದಲ ಕನ್ನಡ ಅವತರಣಿಕೆ 'ಮೈಸೂರು ಸ್ಕೌಟ್ಸ್ ಪತ್ರಿಕೆಯ ಮೊದಲ ಸಂಪಾದಕರಾಗಿದ್ದರು. ಅದು ಈಗ ಶತಮಾನೋತ್ಸವ ಆಚರಿಸುತ್ತಿದೆ.'

ಎಲ್ಲಾ ಜನರನ್ನೂ ಅಪ್ಪಿಕೊಂಡು ಸಮಾಜವನ್ನು ಸುಸ್ಥಿತಿಯಲ್ಲಿಡಬೇಕಾದ ಜವಾಬ್ದಾರಿ ಎಲ್ಲಾ ನಾಗರೀಕರಿಗೆ ಇದೆ. ಅದರ ಸೂತ್ರಗಳು – ಶಿವಶರಣರು ರಚಿಸಿದ ವಚನಗಳಲ್ಲಿ ಇವೆ ಎಂದು ಅವರು ಪ್ರತಿಪಾದಿಸಿದರು. ಭಾರತದ ಋಷಿ ಮುನಿಗಳು ನೀಡಿದ ಸಂದೇಶವನ್ನು ಸಮನ್ವಯಗೊಳಿಸಿ ಜನಗಳಿಗೆ ಸರಳ ಕನ್ನಡದಲ್ಲಿ ವಚನಗಳಲ್ಲಿ ತಿಳಿ ಹೇಳಿದವರು ಅವರು. ವರ್ಣ ಭೇದವನ್ನು, ಸ್ತ್ರೀ ಅಸಮಾನತೆಯನ್ನು ವಿರೋಧಿಸಿ – ಜನಾಂದೋಲನದ ಮೂಲಕ ಜಾಗೃತಿಯನ್ನುಂಟು ಮಾಡಿದರು. ಮೂಢನಂಬಿಕೆಗಳನ್ನು ತೊಡೆದು ಹಾಕಿ ಅರ್ಥಪೂರ್ಣವಾಗಿ ಜೀವನ ನಡೆಸುವಂತೆ ಅವರು ಕರೆ ನೀಡಿದರು.

ಶ್ರೀಯುತ ಎಂ.ಆರ್.ಶ್ರೀ ಅವರು ತಮ್ಮ ವಚನ ಧರ್ಮಸಾರದಲ್ಲಿ 800ಕ್ಕೂ ಹೆಚ್ಚು ವಚನಗಳನ್ನು ಆಯ್ದು, ವಿವರಣೆಗಳೊಂದಿಗೆ ತಿಳಿಯಪಡಿಸುತ್ತಾರೆ. ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದು, ಸುಂದರ ಸಮಾಜ ಕಟ್ಟಲು ಈ ಸೂತ್ರಗಳು ತುಂಬಾ ಉಪಯುಕ್ತವಾಗಿವೆ.

ಇದನ್ನು ರಚಿಸಿದ ಶ್ರೀ ಎಂ.ಆರ್.ಶ್ರೀ ಮಹಾನ್ ವಿದ್ವಾಂಸರು, ಲೇಖಕರು ಹಾಗೂ ಮಹಾನ್ ಸ್ಕೌಟ್ ಸಂಘಟಕರಾಗಿದ್ದರು. ಅವರ ನೆನಪೇ ನಂದಾ ದೀಪ....


ಶ್ರದ್ಧಾಂಜಲಿ



ರಾಜ್ಯ ಕೇಂದ್ರ ಕಛೇರಿಯಲ್ಲಿ ಸಹಾಯಕ ಕಾರ್ಯದರ್ಶಿಯಾಗಿರುವ ಶ್ರೀ ಎಲ್.ಟಿ. ಲೋಕೆಶ್ ಇವರ ತಂದೆಯವರಾದ **ಶ್ರೀ ಎಲ್.ಐ. ತಿಮ್ಮಪ್ಪ** ಇವರು ಆಗಸ್ಟ್ 09, 2024ರಂದು ಚಿಕ್ಕಮಗಳೂರು ಜಿಲ್ಲೆ ತಮ್ಮ ಸ್ವಗ್ರಾಮ ಲಕ್ಯ ಗ್ರಾಮದಲ್ಲಿ ನಿಧನರಾದರು. ಇವರಿಗೆ 87 ವರ್ಷ ವಯಸ್ಸಾಗಿತ್ತು. ಇವರು ನಾಲ್ಕು ಜನ ಗಂಡು ಮಕ್ಕಳು ಒಬ್ಬ ಮಗಳು ಹಾಗೂ ಮೊಮ್ಮಕ್ಕಳು, ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.



ಶ್ರೀ ಹೆಚ್.ಬಿ. ಭಜಂತ್ರಿ, ಜಿಲ್ಲಾ ತರಬೇತಿ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಬಾಗಲಕೋಟೆ ಜಿಲ್ಲೆ ಇವರು ಆಗಸ್ಟ್ 08, 2024ರಂದು ನಿಧನರಾದರು. ಶ್ರೀಯುತರು ಸ್ಕೌಟ್ ವಿಭಾಗದಲ್ಲಿ ಎ.ಎಲ್.ಟಿ ತರಬೇತಿಯನ್ನು ಪಡೆದಿದ್ದು ಮುದೋಳ ತಾಲ್ಲೂಕು ಸಂಗಾನಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಗುರುಗಳಾಗಿ ಸೇವೆಸಲ್ಲಿಸುತ್ತಿದ್ದರು. ಇವರಿಗೆ 56 ವಯಸ್ಸಾಗಿತ್ತು.



ಹಾವೇರಿ ಜಿಲ್ಲೆಯ ಹಿಂದಿನ ಜಿಲ್ಲಾ ಮುಖ್ಯ ಆಯುಕ್ತರಾಗಿದ್ದ ಹಾಗೂ ಪ್ರಸ್ತುತ ಸಹಾಯಕ ರಾಜ್ಯ ಗೈಡ್ ಆಯುಕ್ತರಾದ ಡಾ॥ ಮಾಧುರಿ ದೇವದರ್ ಅವರ ಪತಿ **ಡಾ. ಜಾನ್ ಗುರುಪಾದಪ್ಪ ದೇವಧರ್** ಅವರು ಆಗಸ್ಟ್ 22, 2024ರಂದು ಹಾವೇರಿಯಲ್ಲಿ ನಿಧನರಾದರು. ಇವರಿಗೆ 84 ವರ್ಷ ವಯಸ್ಸಾಗಿತ್ತು.

ಇವರ ಡಾಕ್ಟರ್ ವೃತ್ತಿಯಲ್ಲಿ ಅಪಾರ ಅನುಭವದೊಂದಿಗೆ ಲಕ್ಷಾಂತರ ರೋಗಿಗಳನ್ನು ಗುಣಪಡಿಸಿದ ಕೀರ್ತಿ ಇವರದ್ದು. ರೋಟರಿ ಕ್ಲಬ್‌ನ ಹಿರಿಯ ಸದಸ್ಯರಾಗಿದ ಇವರು ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ್ದರು. ಶ್ರೀಯುತರು ತಮ್ಮ ವೈದ್ಯವೃತ್ತಿಯಲ್ಲಿ ರಾಷ್ಟ್ರಪಶಸ್ತಿ ಪಡೆದಿದ್ದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

Achieve the impossible



Smt. Louisa Manohari
FOUNDER
THE NEW CAMBRIDGE
GROUP OF INSTITUTIONS

With best compliments from :







The New Cambridge Group of Institutions

The New Cambridge High School
#957, 3rd Main, Vijayanagar, Bengaluru-560 040. Phone : 080-23301404

The New Cambridge High School
#CA 7, 2nd Main, R.P.C. Layout, Vijayanagar, Bengaluru-560 104. Phone : 080-23301578

The New Cambridge High School (ICSE)
#CA 7, 2nd Main, R.P.C. Layout, Vijayanagar, Bengaluru-560 104. Phone : 080-23301499

St. Lourdes High School
1 Main Road, Mathikere, Bengaluru-560 054. Phone : 080-23479854

Lourdes Academy (ICSE)
#878, 6th Cross, 13th Main, HMT Layout, Mathikere, Bengaluru-560 054. Phone : 080-23379054

The New Cambridge P.U. College
Hampinagar, Bengaluru-560 104. Phone : 080-65900673

Smt. Dorothy Sheela
Managing Trustee



ಆಗಸ್ಟ್ 15 ರಂದು ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ ಬಸವರಾಜೇಂದ್ರ ಪ್ರೌಢಶಾಲೆಯ ಸ್ಕೌಟ್ ತಂಡಕ್ಕೆ ಮಾನ್ಯ ಸಹಕಾರ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಕೆ.ಎನ್. ರಾಜಣ್ಣರವರು ಬಹುಮಾನ ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ಸಂಸದರಾದ ಶ್ರೀ ಎಂ. ಶ್ರೇಯಸ್ ಪಟೇಲ್, ಮಾನ್ಯ ಶಾಸಕರಾದ ಶ್ರೀ ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿಗಳಾದ ಶ್ರೀಮತಿ ಸತ್ಯಭಾಮ ಮತ್ತು ಇತರರು ಉಪಸ್ಥಿತರಿದ್ದರು.



ಆಗಸ್ಟ್ 15 ರಂದು ರಾಯಚೂರು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದ ರಾಯಚೂರು ಸೆಂಟ್‌ಮೇರಿ ಕಾನ್ವೆಂಟ್ ಶಾಲೆಯ, ಗೈಡ್ ತಂಡಕ್ಕೆ ಮಾನ್ಯ ವೈದ್ಯಕೀಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಶರಣಪ್ರಕಾಶ್ ಪಾಟೀಲ್ ಅವರು ರೂ.5 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಶಾಸಕರುಗಳಾದ ಶ್ರೀ ಶಿವರಾಜ್ ಪಾಟೀಲ್, ಶ್ರೀ ದದ್ದಲ ಬಸನಗೌಡ, ಜಿಲ್ಲಾಧಿಕಾರಿಗಳಾದ ಶ್ರೀ ನಿತೀಶ್ .ಕೆ, ಸಿಇಓ ಶ್ರೀ ರಾಹುಲ್ ತುಕಾರಾಂ ಪಾಂಡ್ಯೆ ಮತ್ತು ಇತರರು ಉಪಸ್ಥಿತರಿದ್ದರು.



ಬಳ್ಳಾರಿ ವಿಮ್ಸ್ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ದ್ವಿತೀಯ ಸ್ಥಾನ ಪಡೆದ ಬಳ್ಳಾರಿ ಸಂತ ಜೋಸೆಫ್ ಬಾಲಕರ ಪ್ರೌಢಶಾಲೆಯ ಸ್ಕೌಟ್ ತಂಡಕ್ಕೆ ಮಾನ್ಯ ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೃಷ್ಣಬೈರೇಗೌಡರವರು ಬಹುಮಾನ ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಬಳ್ಳಾರಿ ನಗರದ ಮಾನ್ಯ ಶಾಸಕರಾದ ಶ್ರೀ ಎನ್. ಭರತ್ ರೆಡ್ಡಿ, ಶ್ರೀ ವೈ.ಎಂ. ಸತೀಶ್, ಎಂ.ಎಲ್.ಸಿ., ಶ್ರೀ ಮುಲ್ಲಂಗಿ ನಂದೀಶ್, ಮಹಾಪೌರರು, ಬಳ್ಳಾರಿ ಮಹಾನಗರ ಪಾಲಿಕೆ, ಶ್ರೀ ಪ್ರಶಾಂತ್ ಕುಮಾರ್, ಜಿಲ್ಲಾಧಿಕಾರಿಗಳು, ಶ್ರೀ ರಾಹುಲ್ ಶರಣಪ್ಪ ಸಂಕನೂರು, ಸಿ.ಇ.ಒ, ಜಿಲ್ಲಾ ಪಂಚಾಯತ್, ಡಾ. ಶೋಬಾರಾಣಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಜಿ. ಖಲೀಲ್ ಸಾಬ್, ಆಯುಕ್ತರು ಬಳ್ಳಾರಿ ಮಹಾನಗರ ಪಾಲಿಕೆ ಉಪಸ್ಥಿತರಿದ್ದರು.



ಆಗಸ್ಟ್ 15 ರಂದು ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದ ಯಾದಗಿರಿ ಆದರ್ಶ ವಿದ್ಯಾಲಯ ಗೈಡ್ಸ್ ತಂಡಕ್ಕೆ ಮಾನ್ಯ ಸಣ್ಣ ಕೈಗಾರಿಕೆ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಬಹುಮಾನ ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀಮತಿ ಬಿ. ಸುಶೀಲಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಗರಿಮಾ ಪನ್ವರ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಮತಿ ಜಿ. ಸಂಗೀತ, ಶಾಲಾ ಶಿಕ್ಷಣ ಉಪನಿರ್ದೇಶಕರಾದ ಶ್ರೀ ಹೆಚ್.ಟಿ. ಮಂಜುನಾಥ್, ಪ.ಪೂ. ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀ ಚನ್ನಬಸವ ಕುಳಗೇರಿ ಮತ್ತು ಸ್ಕೌಟ್ಸ್–ಗೈಡ್ಸ್‌ಗಳು ಉಪಸ್ಥಿತರಿದ್ದರು.



ಆಗಸ್ಟ್ 15ರಂದು ಮಂಡ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವದಲ್ಲಿ ಪಥಸಂಚಲನದಲ್ಲಿ ಭಾಗವಹಿಸಿ
ಪ್ರಥಮ ಸ್ಥಾನ ಪಡೆದ ರೋಟರಿ ಶಾಲೆಯ ಗೈಡ್ಸ್ ತಂಡಕ್ಕೆ
ಮಾನ್ಯ ಕೃಷಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಎನ್. ಚಲುವರಾಯಸ್ವಾಮಿ ಅವರು
ಬಹುಮಾನ ನೀತಿ ಗೌರವಿಸಿದರು. ಮಾನ್ಯ ಶಾಸಕರಾದ ಶ್ರೀ ಪಿ ರವಿಕುಮಾರ ಗಣಿಗ ಮತ್ತು ಇತರರು ಚಿತ್ರದಲ್ಲಿದ್ದರು.



ಆಗಸ್ಟ್ 15ರಂದು ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 78ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಪಥಸಂಚಲನದಲ್ಲಿ
ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ ಸ್ಕೌಟ್–ಗೈಡ್ ತಂಡಗಳಿಗೆ ಮಾನ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಇಲಾಖೆಗಳ ಸಚಿವರಾದ ಶ್ರೀ ಶಿವರಾಜ್ ತಂಗಡಗಿ ಅವರು ಬಹುಮಾನ ನೀಡಿ ಗೌರವಿಸಿದರು.
ಮಾನ್ಯ ಶಾಸಕರಾದ ಶ್ರೀ ರಾಘವೇಂದ್ರ ಹಿಟ್ನಾಳ್, ಮಾನ್ಯ ಸಂಸದರಾದ ಶ್ರೀ ರಾಜಶೇಖರ್ ಹಿಟ್ನಾಳ್,
ಶ್ರೀಮತಿ ಹೇಮಲತಾ ನಾಯ್ಕ್, ಎಂ.ಎಲ್.ಸಿ., ಜಿಲ್ಲಾಧಿಕಾರಿಗಳಾದ ಶ್ರೀ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಸಿಇಓ
ಶ್ರೀ ರಾಹುಲ್ ರತ್ನಂ ಪಾಂಡೆ ಹಾಗು ಇತರರು ಚಿತ್ರದಲ್ಲಿದ್ದಾರೆ.

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 40)



If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: K. Gangappa Gowda, Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Road, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001.
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru 560 026
Editor: K. Gangappa Gowda